ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari
Pages - 28, ₹12
Volume -13
Issue - 12
December - 2016

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಹಣ–ತಲ್ಲಣ...!

ವಾಣಿಜ್ಯ ಹಾಗೂ ಸಹಕಾರಿ ಬ್ಯಾಂಕುಗಳ ಜೊತೆಗೆ ನಮಗೂ ಅವಕಾಶ ನೀಡಿದ್ದರೆ ದೇಶದ 50,000ಕ್ಕೂ ಹೆಚ್ಚು ಪತ್ತಿನ ಸಹಕಾರಿ ಸಂಸ್ಥೆಗಳು ಹಣ ವಿನಿಮಯದ ಬೃಹತ್ ಕಾರ್ಯದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿ ಸಹಕಾರಿಯಾಗಬಹುದಿತ್ತು ಮತ್ತು ಜನಸಾಮಾನ್ಯರಿಗೆ ಇಷ್ಟೊಂದು ತೊಂದರೆ ಆಗುತ್ತಿರಲಿಲ್ಲ ಸಹಕಾರಿ ಸಂಸ್ಥೆಗಳ ವಿಶ್ವಾಸಾರ್ಹತೆಯೂ ಹೆಚ್ಚುತ್ತಿತ್ತು.

12 ಈದ್‌ಮಿಲಾದ್ ಹಾಗೂ
25 ಕ್ರಿಸ್‌ಮಸ್ ಹಬ್ಬದ ಶುಭಾಷಯಗಳು
– ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 3872 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 995

ಸಹಕಾರಿಗಳ ವಿಶ್ವಾಸಾರ್ಹತೆ ದೃಢವಾಗಿರಲಿ - ತಾತ್ಕಾಲಿಕ ತೊಂದರೆ - ಭವಿಷ್ಯದಲ್ಲಿ ಉತ್ತಮ ಅವಕಾಶಗಳ ನಿರೀಕ್ಷೆ

> ಸಹಕಾರಿಗಳು ಈ ಬಗ್ಗೆ ದೃತಿಗೆಡಬೇಕಾದ ಅವಶ್ಯಕತೆ ಇಲ್ಲ. ತಾತ್ಕಾಲಿಕವಾಗಿ ಸ್ವಲ್ಪ ದಿನದ ಮಟ್ಟಿಗೆ ಸಂಯಮದಿಂದ ವ್ಯವಹರಿಸಿ. ನಮ್ಮ ಸೇವೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳೋಣ. ರೂ.500 ಹಾಗೂ ರೂ.1000 ನೋಟುಗಳ ವ್ಯವಹಾರವೊಂದನ್ನು ಹೊರತುಪಡಿಸಿ ಬೇರೆಲ್ಲಾ ವ್ಯವಹಾರಗಳನ್ನು ಎಂದಿನಂತೆ ನಿರ್ವಹಿಸಲು ಯಾವ ತೊಂದರೆಗಳು ಇರುವುದಿಲ್ಲ. ರಾಜ್ಯದ ಸೌಹಾರ್ದ ಸಹಕಾರಿಗಳು ಆತಂಕಕ್ಕೆ ಒಳಗಾಗಿರುವುದರ ಹಿನ್ನೆಲೆಯಲ್ಲಿ ದಿನಾಂಕ 16-11-2016ರಂದು ಆಸಕ್ತ 300ಕ್ಕೂ ಹೆಚ್ಚು ಸಹಕಾರಿಗಳ ಚಿಂತನಾ ಸಭೆಯನ್ನು ನಡೆಸಿ ಅವರುಗಳ ಅಭಿಪ್ರಾಯಗಳನ್ನು ಸಹ ಪಡೆಯಲಾಗಿದೆ.

ರಾಜ್ಯದ ಎಲ್ಲಾ ಸಹಕಾರಿಗಳಿಗೆ ಈದ್‌ಮಿಲಾದ್ ಹಾಗೂ ಕ್ರಿಸ್‌ಮಸ್ ಹಬ್ಬದ ಶುಭಾಷಯಗಳು. ನವೆಂಬರ್ 8ರ ಮಧ್ಯರಾತ್ರಿಯಿಂದ ರೂ.500 ಮತ್ತು ರೂ.1000 ನೋಟುಗಳ ಚಲಾವಣೆಯನ್ನು ರದ್ದುಗೊಳಿಸುವ ಮೂಲಕ ದೇಶದ ಅರ್ಥವ್ಯವಸ್ಥೆಯ ಇತಿಹಾಸದಲ್ಲಿ 3ನೇ ಬಾರಿಗೆ ನೋಟುಗಳನ್ನು ನಿಷೇಧಿಸುವ ಕ್ರಮವನ್ನು ಈ ದೇಶದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಜಾರಿಗೊಳಿಸಿದ್ದಾರೆ. ದೇಶದ ಅರ್ಥವ್ಯವಸ್ಥೆಯನ್ನು ಭದ್ರಗೊಳಿಸುವ ನಿಟ್ಟಿನಲ್ಲಿ ದೇಶದಲ್ಲಿ ಚಲಾವಣೆಯಾಗುತ್ತಿರುವ ನಕಲಿ ನೋಟುಗಳ ನಿಯಂತ್ರಣ ಹಾಗೂ ದೇಶದಲ್ಲಿ ಕೆಲವೇ ಕೆಲವು ಜನರ ಹತ್ತಿರವಿರುವ ಕಪ್ಪುಹಣವನ್ನು ನಿಯಂತ್ರಣಗೊಳಿಸುವಲ್ಲಿ ತೆಗೆದುಕೊಂಡ ಕ್ರಮ ಸ್ವಾಗತಾರ್ಹ. ದೇಶದ ಶೇ.90ರಷ್ಟು ಜನರು ತಮಗೆ ಕೆಲವು ದಿನಗಳು ತೊಂದರೆ ಅನುಭವಿಸಿಯೂ ಸಹ ಇದು ಒಳ್ಳೆಯ ನಿರ್ಧಾರವೆಂದು ಪ್ರತಿಕ್ರಿಯೆ ನೀಡಿರುವುದು ಸಹ ಸ್ವಾಗತಾರ್ಹ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಪ್ರಧಾನ ಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಆದರೆ, ಸಹಕಾರಿ ಸಂಸ್ಥೆಗಳನ್ನು ವಿಶೇಷವಾಗಿ ಪತ್ತಿನ ಸಹಕಾರಿ ಸಂಸ್ಥೆಗಳನ್ನು ಹಾಗೂ ಸೌಹಾರ್ದ ಸಹಕಾರಿಗಳನ್ನು ಹಣ ವಿನಿಮಯದ ವ್ಯವಹಾರದಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡದಿರುವುದು, ಈ ಸಂಸ್ಥೆಗಳನ್ನು ಸಹ ಒಬ್ಬ ವ್ಯಕ್ತಿಯಂತೆ ಪರಿಗಣಿಸಿ ಹಣ ವಿಲೇವಾರಿಗೆ ಹಣವಿಲ್ಲದಂತೆ ಮಾಡಿರುವುದು ಬಹಳ ವಿಷಾದನೀಯ. ನಮ್ಮ ವಿಶ್ವಾಸಾರ್ಹತೆಯನ್ನು ಆರ್.ಬಿ.ಐ.ನವರು ಹಾಗೂ ಕೇಂದ್ರ ಸರಕಾರ ಪರಿಗಣಿಸಲಿಲ್ಲವೆಂದು ಭಾವಿಸಬಹುದಾಗಿದೆ. ವಾಣಿಜ್ಯ ಹಾಗೂ ಸಹಕಾರಿ ಬ್ಯಾಂಕುಗಳ ಜೊತೆಗೆ ನಮಗೂ ಅವಕಾಶ ನೀಡಿದ್ದರೆ ದೇಶದ 50,000ಕ್ಕೂ ಹೆಚ್ಚು ಪತ್ತಿನ ಸಹಕಾರಿ ಸಂಸ್ಥೆಗಳು ಹಣ ವಿನಿಮಯದ ಬೃಹತ್ ಕಾರ್ಯದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿ ಸಹಕಾರಿಯಾಗಬಹುದಿತ್ತು ಮತ್ತು ಜನಸಾಮಾನ್ಯರಿಗೆ ಇಷ್ಟೊಂದು ತೊಂದರೆ ಆಗುತ್ತಿರಲಿಲ್ಲ ಎಂದು ಭಾವಿಸಬಹುದಾಗಿದೆ. ಇದರ ಜೊತೆಗೆ ಸಹಕಾರಿ ಸಂಸ್ಥೆಗಳಲ್ಲಿ ನೀಡಿರುವ ಸಾಲವನ್ನು ಸಹ ರದ್ದಾಗಿರುವ ನೋಟಿನ ಮೂಲಕ ಸ್ವೀಕರಿಸಬಾರದು ಮತ್ತು ಸದಸ್ಯರಿಗೆ ಅವರ ಠೇವಣಿ ಹಣ ಹಿಂತೆಗೆಯಲು ಬಂದಾಗ ಅವರಿಗೆ ನೀಡಲು ನಗದು ಪೂರೈಕೆಗೆ ಹಣದ ವ್ಯವಸ್ಥೆ ಇಲ್ಲದಿರುವುದು ಸಹಕಾರಿಗಳಿಗೆ ತೊಂದರೆಯಾಯಿತು. ಕಳೆದ 1 ತಿಂಗಳಿಂದ ಸಹಕಾರಿ ಸಂಸ್ಥೆಗಳ ದೈನಂದಿನ ವ್ಯವಹಾರ ಕುಂಠಿತವಾಗಿರುವುದು ಅತ್ಯಂತ ಕಳವಳದ ವಿಷಯ. ಸಹಕಾರಿಗಳ ಅಭಿವೃದ್ಧಿಗೆ ಹಿನ್ನಡೆ. ಸಹಕಾರಿಗಳ ವಿಶ್ವಾಸಾರ್ಹತೆಯ ಅಗ್ನಿಪರಿಕ್ಷೆಯ ಕಾಲ ಇದಾಗಿದೆ. ನಾವು ದೃಢವಾಗಿರುವುದು ಅವಶ್ಯಕ.

ಸಹಕಾರಿಗಳು ಈ ಬಗ್ಗೆ ಧೃತಿಗೆಡಬೇಕಾದ ಅವಶ್ಯಕತೆ ಇಲ್ಲ. ತಾತ್ಕಾಲಿಕವಾಗಿ ಸ್ವಲ್ಪ ದಿನದ ಮಟ್ಟಿಗೆ ಸಂಯಮದಿಂದ ವ್ಯವಹರಿಸಿ. ನಮ್ಮ ಸೇವೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳೋಣ. ರೂ.500 ಹಾಗೂ ರೂ.1000 ನೋಟುಗಳ ವ್ಯವಹಾರವೊಂದನ್ನು ಹೊರತುಪಡಿಸಿ ಬೇರೆಲ್ಲಾ ವ್ಯವಹಾರಗಳನ್ನು ಎಂದಿನಂತೆ ನಿರ್ವಹಿಸಲು ಯಾವ ತೊಂದರೆಗಳು ಇರುವುದಿಲ್ಲ. ರಾಜ್ಯದ ಸೌಹಾರ್ದ ಸಹಕಾರಿಗಳು ಆತಂಕಕ್ಕೆ ಒಳಗಾಗಿರುವುದರ ಹಿನ್ನೆಲೆಯಲ್ಲಿ ದಿನಾಂಕ 16–11–2016ರಂದು ಆಸಕ್ತ 300ಕ್ಕೂ ಹೆಚ್ಚು ಸಹಕಾರಿಗಳ ಚಿಂತನಾ ಸಭೆಯನ್ನು ನಡೆಸಿ ಅವರುಗಳ ಅಭಿಪ್ರಾಯಗಳನ್ನು ಸಹ ಪಡೆಯಲಾಗಿದೆ. ಈ ಬಗ್ಗೆ ಸಹಕಾರ ಭಾರತಿಯ ಸಹಕಾರಿಗಳ ನಿಯೋಗದ ಜೊತೆಗೆ ಸಂಯುಕ್ತ ಸಹಕಾರಿಯೂ ಜೊತೆಗೂಡಿ ದಿನಾಂಕ 21–11–2016ರಂದು ಕೇಂದ್ರದ ಹಣಕಾಸು ವ್ಯವಹಾರಗಳ ರಾಜ್ಯ ಸಚಿವರಾದ ಶ್ರೀ ಸಂತೋಷ ಗಂಗ್ವಾರರವರನ್ನು ಹಾಗೂ ಕೇಂದ್ರ ಕೃಷಿ ಹಾಗೂ ಸಹಕಾರ ಸಚಿವರಾದ ಶ್ರೀ ರಾಧಾಮೋಹನ ಸಿಂಗ್‌ರವರನ್ನು ಭೇಟಿ ಮಾಡಿ ವಿಷಯದ ಬಗ್ಗೆ ತಿಳುವಳಿಕೆ ನೀಡಲಾಗಿದೆ. ವಿಷಯದ ಬಗ್ಗೆ ಮನವರಿಕೆ ಮಾಡಲಾಗಿದೆ. ತೀವ್ರ ಗಮನ ಹರಿಸಲು ಮನವಿ ಸಲ್ಲಿಸಲಾಗಿದೆ. ಹಣಕಾಸು ಸಚಿವರಿಗೂ ಮನವಿ ಸಲ್ಲಿಸಲಾಗಿದೆ. ನಿರಂತರವಾಗಿ ಕೇಂದ್ರದವರನ್ನು ಈ ಬಗ್ಗೆ ತೀವ್ರ ಗಮನಹರಿಸುವಂತೆ ಒತ್ತಾಯಿಸುವ ಪ್ರಯತ್ನ ಜಾರಿಯಲ್ಲಿದೆ.

ಸಹಕಾರಿಗಳು ಎಂದಿನಂತೆ ಉತ್ಸಾಹದಿಂದ ಕಾರ್ಯನಿರ್ವಹಿಸಿ, ಸಾರ್ವಜನಿಕರ ವಿಶ್ವಾಸಾರ್ಹತೆಯನ್ನು ಗಳಿಸಿ, ಭವಿಷ್ಯದಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಒಳ್ಳೆಯ ಅವಕಾಶಗಳು ಬರಲಿವೆ ಎಂದು ಆಶಿಸೋಣ.

ಜೈ ಸಹಕಾರ – ಸಹಕಾರಂ ಗೆಲ್ಗೆ

ಗುರುನಾಥ ಜಾಂತಿಕರ, ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

ಒಳ ಪುಟಗಳಲ್ಲಿ . . .

ಜ್ಞಾನ ಜ್ಯೋತಿ 4
ಕೇಂದ್ರದ ಸಚಿವರುಗಳಿಗೆ ನಿಯೋಗದ ಮೂಲಕ ಮನವಿ 5
ರೂ.500 ಹಾಗೂ ರೂ.1000 ಕರೆನ್ಸಿ ನೋಟುಗಳ ನಿಷೇಧದ ಪರಿಣಾಮ ಹಾಗೂ ಪರ್ಯಾಯಾಲೋಚನೆ ಸೌಹಾರ್ದ ಸಹಕಾರಿಗಳ ಚಿಂತನಾ ಸಭೆ 7
ಸಹಕಾರ ಸಪ್ತಾಹ 8
ವಿವಿಧ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಭೇಟಿ 11
ಸೌಹಾರ್ದ ಸಹಕಾರಿ ಸಮಾಚಾರಗಳು........12-15
ನಿಮ್ಮ ಪ್ರಶ್ನೆ ನಮ್ಮ ಉತ್ತರ........16
ನೋಟು ರದ್ಧತಿ ಮತ್ತು ಸಹಕಾರ ಬ್ಯಾಂಕುಗಳು........18
ನೋಟುಗಳ ಅಮಾನ್ಯತೆ : ಸಹಕಾರ ಕ್ಷೇತ್ರದ ಮೇಲೆ ಆಗಿರುವ ನಕಾರಾತ್ಮಕ ಪರಿಣಾಮಗಳು 20
ಅರ್ಥ ಕ್ರಾಂತಿ-ಸಹಕಾರ 22
ಅನುತ್ಪಾದಿತ ಆಸ್ತಿ (ಎನ್.ಪಿ.ಎ.) ನಿರ್ವಹಣೆ 24
RBI NEWS-OCTOBER-2016 26

ಸಂಪಾದಕೀಯ

ಐ.ಸಿ.ಎ. ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಸೌಹಾರ್ದ ಸಹಕಾರಿಯ ಕಲರವ

ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ (International Cooperative Alliance) ಏಷ್ಯಾ ವಿಭಾಗ ಆಯೋಜಿಸಿದ್ದ ಅಂತರ ರಾಷ್ಟ್ರೀಯ ಸಹಕಾರ ಸಮ್ಮೇಳನ, ನವದೆಹಲಿಯಲ್ಲಿ ದಿನಾಂಕ 15-11-2016 ರಿಂದ ಪ್ರಾರಂಭವಾಗಿ ದಿನಾಂಕ 19-11-2016ರವರೆಗೆ ನಡೆಯಿತು.

ವಿಶ್ವದ ವಿವಿಧ ದೇಶಗಳಲ್ಲಿ ಸಹಕಾರಿ ಚಳುವಳಿಯ ವಿವಿಧ ಮುಖಗಳ ಪರಿಚಯ, ಕಾರ್ಯಚಟುವಟಿಕೆಗಳ ಅಧ್ಯಯನ ಹಾಗೂ ಸಹಕಾರ ಕ್ಷೇತ್ರದ ವ್ಯಾಪ್ತಿಯ ವಿಸ್ತರಣೆ ಮತ್ತು ವಿಶ್ವದ ಸಮಗ್ರ ಸಹಕಾರ ಕ್ಷೇತ್ರದ ವಿಶ್ವರೂಪ ದರ್ಶನ ಈ ಸಮ್ಮೇಳನದ ಮುಖ್ಯ ಉದ್ದೇಶ.

ಈ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ವಿಶ್ವದ ವಿವಿಧ ದೇಶಗಳ 120ಕ್ಕೂ ಹೆಚ್ಚು ಪ್ರತಿನಿಧಿಗಳು ವಿವಿಧ ವಿಷಯಗಳ ಮಂಡನೆ ಮಾಡಿರುವುದು, ಅದರಲ್ಲಿ ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳು, ಅದು ವೇಗವಾಗಿ ಬೆಳೆಯುತ್ತಿರುವ ಮತ್ತು ಅದರ ವಿವಿಧ ಸೇವಾ ಚಟುವಟಿಕೆಗಳ ಕುರಿತಂತೆ 2 ವಿಷಯಗಳು ಮಂಡನೆಯಾಗಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಸಂತಸದ ಹಾಗೂ ಅಭಿಮಾನದ ಸಂಗತಿ.

ಅದರಲ್ಲಿ ಮೊದಲನೆಯದಾಗಿ ಸಹಕಾರಿ ತನ್ನ ಸದಸ್ಯ ಸಹಕಾರಿಗಳಿಗೆ ಒದಗಿಸುತ್ತಿರುವ ಚಟುವಟಿಕೆಗಳಿಂದಾಗಿ ಸೌಹಾರ್ದ ಸಹಕಾರಿಗಳು ಸದೃಢವಾಗಿ ಬೆಳೆಯಲು ಸಾಧ್ಯವಾಗಿದೆ (Facilitating Sustainable Co-operative Business : Innovative Role of Rederal Co-operative) ಈ ವಿಷಯ ಪ್ರಸ್ತಾಪವಾಗಿದೆ. ಅಧ್ಯಯನ ಸಾಹಿತ್ಯವಾಗಿ ಪ್ರಸಾರವಾಗಿದೆ. ಸ್ಮರಣ ಸಂಚಿಕೆಯ ಲೇಖನವಾಗಿ ಮುದ್ರಣವಾಗಿ ಪ್ರಸಾರವಾಗಲಿದೆ. ಮೈಸೂರು ವಿಶ್ವವಿದ್ಯಾಲಯದ ಡಾ.ಯಶವಂತ ಡೋಂಗ್ರೆಯವರು Empowering Women Through Entrepreneurship Purposive Credit by Souharda Cooperatives in Karnataka ವಿಷಯ ಮಂಡಿಸಿ, ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಪ್ರಧಾನವಾಗಿ ಮಂಡಿಸಿ, ಮಹಿಳಾ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿ, ಮಹಿಳಾ ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರಿಗೆ ಹೇಗೆ ಹೆಚ್ಚಿನ ಸೇವೆಯನ್ನು ಕೊಡಬಲ್ಲವು ಮತ್ತು ಮಹಿಳಾ ಸಬಲೀಕರಣಕ್ಕೆ ತಮ್ಮ ಕೊಡುಗೆ ಹೇಗೆ ಕೊಡಬಲ್ಲವು ಎಂಬುದಾಗಿ ಪ್ರಸ್ತಾಪಿಸಿದ್ದಾರೆ.

ಈ ಎರಡೂ ವಿಷಯಗಳು ಒಟ್ಟಾರೆ ಕರ್ನಾಟಕ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಗಳ ಕಲರವವನ್ನು ಅಂತರ ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದು ಹೆಗ್ಗಳಿಕೆ ಮತ್ತು ಸಹಕಾರ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳಿಗೆ ಇರುವ ಅವಕಾಶದ ಕರೆ ಎಂದು ಅರ್ಥೈಸಬಹುದಲ್ಲವೇ ಮತ್ತು ಕರ್ನಾಟಕದ ಈ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಹೆಚ್ಚಿನ ಜನರು ಅಧ್ಯಯನ ಮಾಡಲು ಆಸಕ್ತರಾಗಿದ್ದಾರೆ ಎಂದು ಸಮ್ಮೇಳನದಲ್ಲಿ ಭಾಗವಹಿಸಿರುವವರ ಪ್ರತ್ಯಕ್ಷ ವರದಿ ತಿಳಿಸಿರುವುದು ಸೌಹಾರ್ದ ಸಹಕಾರಿಗಳಿಗೆ ಹೆಮ್ಮೆಯ ವಿಷಯ ಅಲ್ಲವೇ. ■

ಜ್ಞಾನ ಜ್ಯೋತಿ

ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

ಬದುಕು ಕ್ಷಣ... ಕ್ಷಣ... ಕ್ಷಣ... ಸುಂದರಗೊಳಿಸುವುದೇ ಜೀವನದ ಧ್ಯೇಯ

ಎಷ್ಟೋ ಸಲ ಅನಿಸುತ್ತದೆ. ನನಗೂ ಪ್ರಶ್ನೆ ಬರುತ್ತದೆ, ನಿಮಗೂ ಬರುತ್ತದೆ... ಬದುಕಿನ ಉದ್ದೇಶವೇನು? We have to live beautifully, richly. ನಾವು ಚಂದವಾಗಿರಬೇಕು, ಸ್ವಚ್ಛವಾಗಿರಬೇಕು, ಸುಂದರವಾಗಿರಬೇಕು, ಸಮೃದ್ಧವಾಗಿರಬೇಕು, ನಮ್ಮ ಬದುಕು ನಮಗೆ ಆನಂದವಾಗಬೇಕು. ಹಾಗೆ ನಾವು ಬದುಕಬೇಕು ಅಂತ ನಿಸರ್ಗ ಏನೆಲ್ಲಾ ಮಾಡಿ ಒಂದು ರೂಪ ಕೊಟ್ಟಿದೆ. ಇಂತಹ ಬದುಕನ್ನು ಎಲ್ಲಾದರೂ ಹೇಗಾದರೂ ಚಲ್ಲಬಾರದು. ಬದುಕಿನ ಕ್ಷಣ... ಕ್ಷಣ... ಕ್ಷಣ... ಕ್ಷಣ ಬಹಳ ಮಹತ್ವದ್ದು. ಬದುಕು ಇಡಿಯಾಗಿ ಬರುವುದಿಲ್ಲ. ಈಗ ನನಗೆ ನೂರು ವರ್ಷ ಅಂದರೆ ಅವು ಒಂದೇ ಸಲಕ್ಕೆ ಬರುತ್ತವೇನು? ಇಲ್ಲ ಕ್ಷಣ... ಕ್ಷಣ... ಕ್ಷಣವಾಗಿ ಬರುತ್ತವೆ. ಬದುಕು ಅಂದರೆ ಕ್ಷಣ. ಬದುಕು ನೂರು ವರ್ಷ ಇದ್ದರೂ ಸಹಿತ ಅದು ಬರುವುದು ಕ್ಷಣ... ಕ್ಷಣವಾಗಿ. ನೀವು ಎಷ್ಟೇ ದೊಡ್ಡವರಿರಬಹುದು. ಬದುಕು ಒಮ್ಮೆಲೆ ಒಂದು ದಿವಸ ಬರುವುದಿಲ್ಲ ಅಥವಾ ಒಂದು ವರ್ಷ ಒಂದೇ ಸಲಕ್ಕೆ ಬರುವುದಿಲ್ಲ. ನೀವಿರಲಿ, ನಾನಿರಲಿ ಯಾರಿದ್ದರೂ ಸಹಿತ ಕ್ಷಣ... ಕ್ಷಣ... ಕ್ಷಣ.. ಅಂದರೆ ಪ್ರತಿ ಕ್ಷಣವೂ ಬದುಕು. Every minute is a life. ಅಲ್ಲವೇನು? ಈ ಕ್ಷಣ ಸುಂದರವಾದರೆ ಬದುಕು ಸುಂದರ. ಈ ಕ್ಷಣ ಹೊಲಸಾಯಿತು ಅಂದರೆ ಬದುಕು ಹೊಲಸಾಗುತ್ತದೆ. ಈ ಕ್ಷಣ ಶ್ರೀಮಂತವಾದರೆ ಬದುಕು ಶ್ರೀಮಂತ. ಈ ಕ್ಷಣ ಬಡವಾಯಿತು ಬದುಕು ಬಡವ. ಕ್ಷಣ ಬಹಳ ಮಹತ್ವದ್ದು. ಎಷ್ಟು ಅದ್ಭುತವಾಗಿದೆ. ಜಗತ್ತು ಇರುವುದೇ ಆ ರೀತಿ. ಕ್ಷಣ ಕ್ಷಣವಾಗಿ ಬರುತ್ತಾ ಇರುತ್ತದೆ. ಆದರೆ ನಾವೇನು ಮಾಡುತ್ತೇವೆ?! ನಾವು ಈ ಕ್ಷಣದಲ್ಲಿ ಇರುತ್ತೇವೆ, ನಮ್ಮ ಮನಸ್ಸು ಹಿಂದಿನ ಕ್ಷಣದಲ್ಲಿ ಇರುತ್ತದೆ. ಆದ್ದರಿಂದಲೇ ಈ ಕ್ಷಣದ ಅನುಭವವಿಲ್ಲ, ಹಿಂದಿನ ಕ್ಷಣದ ತಾಪ ತಪ್ಪುವುದಿಲ್ಲ. ನಾವು ಯಾವಾಗಲೂ ಹಿಂದಿನ ಕ್ಷಣದಲ್ಲಿ ಇರುವ ಪ್ರಯತ್ನ ಮಾಡುತ್ತೇವೆ. ಇಲ್ಲವೇ ಬಹಳ ಮುಂದಿನ ಕ್ಷಣಗಳಲ್ಲಿ ಇರುವ ಪ್ರಯತ್ನ ಮಾಡುತ್ತೇವೆ. ಇರಬಾರದು ಅಂತಲ್ಲ. ಎಷ್ಟು ಅವಶ್ಯವಿದೆಯೋ ಅಷ್ಟು ಇರಬೇಕು.

ಈ ಕ್ಷಣ ಕೆಡದಂತೆ ಹಿಂದಿನ ಕ್ಷಣಗಳನ್ನು ನಾವು ನೆನಪು ಮಾಡಿಕೊಂಡಿರುವುದು. ಈ ಕ್ಷಣ ಕೆಡದಂತೆ ಭಾವೀ ಕ್ಷಣಗಳನ್ನು ಭಾವಿಸಿಕೊಂಡಿರುವುದು. ಈ ಕ್ಷಣ ಕೆಡಬಾರದು. ಈ ಕ್ಷಣಕ್ಕೆ ಬಹಳ ಮಹತ್ವವಿದೆ. ನೂರು ವರ್ಷ ನಾವು ಬದುಕುವುದಿಲ್ಲ. We live only for a movement. ಯಾವ ಕ್ಷಣ ಇದ್ದರೂ ಬಹಳ ಕ್ಷಣ ಇದ್ದರೂ ನಾವು ಬದುಕುತ್ತಿರುವುದು ಒಂದು ಕ್ಷಣ ಮಾತ್ರ. ಆದ್ದರಿಂದ ಕ್ಷಣದ ಬಗ್ಗೆ ಬಹಳ ಮಹತ್ವವಿರಬೇಕು. ಕ್ಷಣ ಯಾವಾಗ ಶ್ರೀಮಂತವಾಗುತ್ತದೆ? ಬದುಕು ಯಾವಾಗ ಶ್ರೀಮಂತವಾಗುತ್ತದೆ? ಆ ಕ್ಷಣವನ್ನು ಚೆನ್ನಾಗಿ ಬಳಸಿದಾಗ.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತರೆಡ್ಡಿಯವರಿಗೆ ಸಹಕಾರ ರತ್ನ ಪ್ರಶಸ್ತಿ

ಸಂಯುಕ್ತ ಸಹಕಾರಿ ನಿರ್ದೇಶಕರು ಹಾಗೂ ಚಿತ್ರದುರ್ಗ ಜಿಲ್ಲೆಯ ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಹಿರಿಯ ಸಹಕಾರಿಯಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿಯವರಿಗೆ ಕರ್ನಾಟಕ ಸರಕಾರದ ಸಹಕಾರ ಕ್ಷೇತ್ರದ ಪ್ರತಿಷ್ಠಿತ ಪ್ರಶಸ್ತಿ "ಸಹಕಾರ ರತ್ನ" ಪ್ರಶಸ್ತಿಯನ್ನು 63ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 14 ನವೆಂಬರ್ 2016ರಂದು ಕೊಪ್ಪಳದಲ್ಲಿ ನಡೆದ ಸಪ್ತಾಹದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಧಾನ ಮಾಡಲಾಯಿತು. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳು ಮತ್ತು ಸಂಯುಕ್ತ ಸಹಕಾರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಶ್ರೀಯುತರಿಗೆ 2007 ಜುಲೈನಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮೈಸೂರಿನಲ್ಲಿ ಜರುಗಿಸಿದ ಸಮ್ಮೇಳನದಲ್ಲಿ ಶ್ರೇಷ್ಠ ಸಹಕಾರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು.

ಇವರೊಂದಿಗೆ ಪ್ರಶಸ್ತಿ ಸ್ವೀಕರಿಸಿದ ಗಣ್ಯರು : ಡಾ. ಹೊ. ಶ್ರೀನಿವಾಸಯ, ಡಾ. ಮೋಟಮ್ಮ, ಶ್ರೀ ಕೆ. ಅಮರನಾಥಶೆಟ್ಟಿ, ಶ್ರೀ ಶಿವನಗೌಡ ಎಸ್. ಬಿರದಾರ್, ಶ್ರೀ ಟಿ.ಎಂ.ಚಂದ್ರಶೇಖರಯ್ಯ ಹಾಗೂ ಶ್ರೀ ಎಂ,ಎನ್. ಅಶ್ವಥನಾರಾಯಣ್.

ರೂ.500 ಹಾಗೂ ರೂ.1000 ನೋಟುಗಳ ನಿಷೇಧದ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಹಾಗೂ ಸಹಕಾರ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಗಳಿಗೆ ಆಗಿರುವ ತೊಂದರೆಗಳ ನಿವಾರಣೆಗಾಗಿ ಕೇಂದ್ರದ ಸಚಿವರುಗಳಿಗೆ ನಿಯೋಗದ ಮೂಲಕ ಮನವಿ

ರಾಜ್ಯ ಹಣಕಾಸು ಸಚಿವರಾದ ಶ್ರೀ ಸಂತೋಷ ಗಂಗ್ವಾರ ಇವರಿಗೆ ಸಹಕಾರಿಗಳ ತೊಂದರೆ ನಿವಾರಣೆಗಾಗಿ ಮನವಿ ಪತ್ರ.

ಮಹಾರಾಷ್ಟ್ರದ ಮುಂಬೈನಲ್ಲಿ ದಿನಾಂಕ 01 ಡಿಸೆಂಬರ್ 2016ರಂದು ನಡೆದ ಸಹಕಾರ ಬಚಾವೋ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ಮಹಾರಾಷ್ಟ್ರದ ಸಹಕಾರಿ ಧುರೀಣರು.

ಜನವರಿ 1 ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲು ಮನವಿ

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜನವರಿ 1, 2001ರಂದು ಜಾರಿಗೆ ಬಂದ ಹಿನ್ನೆಲೆಯಲ್ಲಿ ಪ್ರತಿವರ್ಷ ಜನವರಿ 1ನೇ ದಿನಾಂಕದಂದು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಈ ವರ್ಷವೂ ಸಹ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಜನವರಿ 1ರಂದು ತಮ್ಮ ತಮ್ಮ ಸೌಹಾರ್ದ ಸಹಕಾರಿಗಳಲ್ಲಿ ಸಹಕಾರಿ ಸಪ್ತವರ್ಣದ ಧ್ವಜಾರೋಹಣ ಮಾಡುವುದರ ಮೂಲಕ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಪ್ರಾರಂಭಿಸಿ, ಸದರಿ ದಿನದಂದು ಠೇವಣಿ ಸಂಗ್ರಹ ಯೋಜನೆ, ಸಾಲ ವಸೂಲಾತಿ ಕ್ರಮಗಳು, ಹಿರಿಯ ಸಹಕಾರಿಗಳಿಗೆ ಸನ್ಮಾನ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ, ಸ್ವಚ್ಛತಾ ಕಾರ್ಯಕ್ರಮ, ಸೌಹಾರ್ದ ಸಹಕಾರಿ ಚಳುವಳಿಯ ಬಗ್ಗೆ ಜಾಗೃತಿ ಮೂಡಿಸುವಂತಹ ಸಭೆ ಸಮಾರಂಭಗಳನ್ನು ಏರ್ಪಡಿಸುವುದರ ಮೂಲಕ ಆಚರಿಸಲು ಸೂಚಿಸಲಾಗಿದೆ. ದಿನಾಚರಣೆಯ ವರದಿ ಹಾಗೂ ಛಾಯಾಚಿತ್ರಗಳನ್ನು ಸಂಯುಕ್ತ ಸಹಕಾರಿಗೆ ಕಳುಹಿಸಲು ಸೂಚಿಸಿದೆ.

ಕೇಂದ್ರ ರೈಲ್ವೆ ಸಚಿವರು ಹಾಗೂ ರಾಷ್ಟ್ರದ ಹಿರಿಯ ಸಹಕಾರಿಗಳಾದ ಶ್ರೀ ಸುರೇಶ್ ಪ್ರಭು ಇವರಿಗೆ ಸಹಕಾರಿಗಳ ತೊಂದರೆ ನಿವಾರಣೆಗಾಗಿ ಮನವಿ ಪತ್ರ.

ಕೇಂದ್ರ ಕೃಷಿ ಹಾಗೂ ಸಹಕಾರ ಸಚಿವರಾದ ಶ್ರೀ ರಾಧಮೋಹನ್ ಸಿಂಗ್ ಇವರಿಗೆ ಸಹಕಾರಿಗಳ ತೊಂದರೆ ನಿವಾರಣೆಗಾಗಿ ಮನವಿ ಪತ್ರ.

ದಿನಾಂಕ : 16–11–2016ರಂದು ರಾಷ್ಟ್ರೀಯ ಸಹಕಾರ ಭಾರತಿಯ ನಿಯೋಗದೊಂದಿಗೆ ಕೂಡಿಕೊಂಡು ಕೇಂದ್ರ ಹಣಕಾಸು ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ಪ್ರಯತ್ನಿಸಲಾಯಿತು. ಆದರೆ, ಅಧಿವೇಶನ ಮತ್ತು ಕಾರ್ಯದೊತ್ತಡಗಳಿಂದ ಭೇಟಿ ಸಾಧ್ಯವಾಗಲಿಲ್ಲ. ಮನವಿಯನ್ನು ಸಲ್ಲಿಸಲಾಯಿತು.

ರಾಜ್ಯ ಹಣಕಾಸು ಸಚಿವರಾದ ಶ್ರೀ ಸಂತೋಷ ಗಂಗ್ವಾರರವರನ್ನು ಹಾಗೂ ಕೇಂದ್ರ ಕೃಷಿ ಹಾಗೂ ಸಹಕಾರ ಮಂತ್ರಿಗಳನ್ನು ಭೇಟಿ ಮಾಡಿ, ವಿಷಯಗಳ ಬಗ್ಗೆ ಮನವರಿಕೆ ಮಾಡಿ, ಮನವಿ ಪತ್ರಗಳನ್ನು ಸಲ್ಲಿಸಲಾಯಿತು.

ಈ ಸೂಕ್ತ ಪರಿಹಾರಗಳನ್ನು ಒದಗಿಸಲು ಪ್ರಯತ್ನಿಸುವುದಾಗಿ ಸಚಿವರು ತಿಳಿಸಿದರು. ಈ ಮನವಿ ಪತ್ರಗಳ ಸಲ್ಲಿಕೆ ಹಾಗೂ ನಿಯೋಗದ ಫಲವೇನೋ ಎಂಬಂತೆ ದಿನಾಂಕ 24–11–2016 ರಂದು ಕೇಂದ್ರದ ತಂಡ ಬೆಳಗಾವಿ ಹಾಗೂ ಬೆಂಗಳೂರುಗಳಿಗೆ ಭೇಟಿ ನೀಡಿದೆ. ಹಾಗೆಯೇ, ಮಹಾರಾಷ್ಟ್ರದ ಮುಂಬೈನಲ್ಲಿ ನಡೆದ ಸಹಕಾರ ಬಚಾವೋ ಕಾರ್ಯಕ್ರಮದಲ್ಲಿ ಭಾಗವಹಿಸಲಾಗಿದೆ.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಸಮಾಚಾರ

ದಾವಾ ದಾಖಲಾತಿ :

ಬೆಳಗಾವಿ ವಿಭಾಗದಿಂದ 629 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 215 ಸೇರಿದಂತೆ ಒಟ್ಟು 844 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 52 ಪ್ರಕರಣಗಳು ಇತ್ಯರ್ಥಗೊಂಡಿವೆ.

ಅಮಲ್ಜಾರಿ ಪ್ರಕರಣಗಳು :

ಒಟ್ಟು 12 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 9 ಪ್ರಕರಣಗಳು ಇತ್ಯರ್ಥಗೊಂಡಿವೆ.

ಬ್ಯಾಂಕುಗಳಿಂದ ವಾರಕ್ಕೆ ರೂ. 24,000/- ನಗದು ತೆಗೆಯುವ ಆದೇಶದಿಂದ ಸಹಕಾರ ಸಂಸ್ಥೆಗಳನ್ನು ಹೊರತುಪಡಿಸುವುದು - ಸಹಕಾರ ಬ್ಯಾಂಕುಗಳಿಗೆ ಹೆಚ್ಚಿನ ಹಣಕಾಸನ್ನು ಒದಗಿಸುವುದು ಸೇರಿದಂತೆ ಹಲವು ತೊಂದರೆಗಳ ನಿವಾರಣೆಗಾಗಿ ಮನವಿ

ನೋಟು ನಿಷೇಧ; ಸಹಕಾರಿ ಸಂಸ್ಥೆಗಳಿಗೆ ಭಾರಿ ಹೊಡೆತ

ಸಹಕಾರಿ ಕ್ಷೇತ್ರಕ್ಕೆ ತೊಂದರೆ; ಕೇಂದ್ರಕ್ಕೆ ಮನವರಿಕೆ

ನೋಟು ನಿಷೇಧದಿಂದ ನಿಶ್ಚಲಗೊಂಡ ಸಹಕಾರಿ ಕ್ಷೇತ್ರ

ಸಹಕಾರಿ ಸಂಘಗಳಿಗೂ ಹಣ ಪಡೆಯಲು ಮಿತಿ: ಮೋದಿ ಭೇಟಿಗೆ ಮುಂದಾದ ಸಹಕಾರಿ ನಿಯೋಗ

ಪ್ರಧಾನಿ ಭೇಟಿಗೆ ಸಿದ್ಧತೆ

ಕ್ಯೂ ತಪ್ಪಿಸಲು ಅವಕಾಶ ಕೊಡಿ



ಸಹಕಾರಿ ಸಂಸ್ಥೆಗಳಿಗೆ ಹಣಕಾಸು ವ್ಯವಹಾರಕ್ಕೆ ಅವಕಾಶಕ್ಕೆ ಮನವಿ

...ಸೂರು.ನ.೨೨-ಬ್ಯಾಂಕ್‌ಗಳಂತೆ ಸಹಕಾರಿ ಸಂಸ್ಥೆಗಳಿಗೆ ...ಸು ವ್ಯವಹಾರಕ್ಕೆ ಅವಕಾಶ ನೀಡಬೇಕು ಎಂದು ರಾಜ್ಯ ...ಸು ಸಚಿವರು ಮತ್ತು ಭಾರತ ಸರ್ಕಾರಕ್ಕೆ ಕರ್ನಾಟಕ ರಾಜ್ಯ ...ರ್ ಸಂಯುಕ್ತ ಸಹಕಾರಿ ನಿಗಮದ ಅಧ್ಯಕ್ಷ ಗುರುನಾಥ ...ರ ಮತ್ತು ಸಹಕಾರಿಗಳ ನಿಯೋಗವು ಮನವಿ ಮಾಡಿದೆ. ... ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ರೈತರು, ಕಾರ್ಮಿಕರು, ...ರಿಕೆ, ನೇಕಾರರು, ಗ್ರಾಹಕರು, ಠೇವಣಿದಾರರು, ಸಣ್ಣ ...ರು, ಕೃಷಿ ಉತ್ಪನ್ನ ಮಾರುಕಟ್ಟೆ ಪತ್ತಿನ ಸಹಕಾರ ಸಂಸ್ಥೆಗಳು, ... ಗುಂಪುಗಳು ಸೇರಿದಂತೆ ಸಮಾಜದ ಎಲ್ಲ ವರ್ಗದವರ ದೈನಂದಿನ ಸಾಮಾನ್ಯ ಆರ್ಥಿಕ ಚಟುವಟಿಕೆಗಳನ್ನು ನಡೆಸುವುದಕ್ಕೆ ತೀವ್ರವಾದ ತೊಂದರೆಗೆ ಅನುಭವಿಸುಂತಾಗಿದೆ.

ಭಾರತ ಸರ್ಕಾರದ ನಿರ್ದೇಶನದಂತೆ ಭಾರತೀಯ ರಿಸರ್ವ್ ಬ್ಯಾಂಕ್, ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯದ ಬ್ಯಾಂಕುಗಳಿಗೆ ...ತೆಗಳನ್ನು ಪೂರೈಸುವಷ್ಟು ನೋಟುಗಳನ್ನು ಬಿಡುಗಡೆ ...ತ್ತಿಲ್ಲ. ಅಷ್ಟೆ ಅಲ್ಲದೇ ಸಹಕಾರಿ ಸಂಸ್ಥೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ...ದು ಸಂಗ್ರಹವಾಗಿದ್ದು, ಆರ್‌ಬಿಐ ಮತ್ತು ಸಾರ್ವಜನಿಕ ವಲಯ ...ತ್ತು ಖಾಸಗಿ ವಲಯದ ಬ್ಯಾಂಕುಗಳು ಸ್ವೀಕರಿಸುತ್ತಿಲ್ಲ ಎಂದು ...ದ್ದಾರೆ.

ಕಡಿಮೆ ಮುಖಬೆಲೆಯ ಕರೆನ್ಸಿ ನೋಟುಗಳನ್ನು ರಾಜ್ಯ ಮಟ್ಟದ ...ಪೆಕ್ಸ್ ಸಹಕಾರಿ ಬ್ಯಾಂಕುಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಮತ್ತು ಅರ್ಬನ್ ಸಹಕಾರಿ ಬ್ಯಾಂಕುಗಳಿಗೆ ತಕ್ಷಣ ಹೆಚ್ಚಿನ ಪ್ರಮಾಣದಲ್ಲಿ ಪೂರೈಸುವ ಅಗತ್ಯವಿದೆ ಎಂದು ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಜ್ಯೋತೀಂದ್ರ ಮೆಹ್ತಾ, ಮುಂಬೈ ಸಹಕಾರ ಭಾರತಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಉದಯ್ ಜೋಷಿ, ರಾಷ್ಟ್ರೀಯ ಹೈನುಗಾರಿಕೆ ಮಹಾಮಂಡಲ ಅಧ್ಯಕ್ಷ ಸುಭಾಷ್ ಮಾಂಡ್ಗೆ, ಡಿಸಿಸಿಬಿ ಮುಖ್ಯಸ್ಥ ಪ್ರಿಸ್ಟಾಲ್ ...ಲ್ಲಂದನ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತದ ಎಚ್.ವಿ. ...ಜೀವ್, ಗುಜರಾತ್ ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಕಾಂತಿಬಾಯಿ ...ಟೇಲ್, ಮಹಾರಾಷ್ಟ್ರ ಮಹಿಳಾ ಬಚಾಟ್‌ಗಟ್ ಡಾ.ಶಶಿತಾಯಿ ...ಟೇಲ್ ನಿಯೋಗದ ಪ್ರಮುಖರು ಮನವಿ ಮಾಡಿದ್ದಾರೆ.

ಕೇಂದ್ರದ ಅಧ್ಯಯನ ತಂಡಕ್ಕೆ ಮಾಹಿತಿ

ದಿನಾಂಕ 24-11-2016ರಂದು ಬೆಂಗಳೂರಿಗೆ ಭೇಟಿ ನೀಡಿದ ರಿಸರ್ವ್ ಬ್ಯಾಂಕಿನ ತಂಡ ನಬಾರ್ಡ್, ಅಪೆಕ್ಸ್ ಬ್ಯಾಂಕ್, ವಾಣಿಜ್ಯ ಬ್ಯಾಂಕು, ಸಹಕಾರ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮೀಣ ಬ್ಯಾಂಕುಗಳ ಅಧಿಕಾರಿಗಳ ಸಭೆಯನ್ನು ಏರ್ಪಡಿಸಿ, ಅಭಿಪ್ರಾಯ ಸಂಗ್ರಹಿಸಿದರು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭಾಗವಹಿಸಿದ್ದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರಿಸರ್ವ್ ಬ್ಯಾಂಕಿನ ತಂಡಕ್ಕೆ ರಾಜ್ಯದ ಹಾಗೂ ದೇಶದ ಪತ್ತಿನ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯ ಬಗ್ಗೆ ಹಾಗೂ ಸಹಕಾರಿ ಸಂಸ್ಥೆಗಳ ಸದಸ್ಯರಿಗೆ ಸಾಲ ಮರುಪಾವತಿ ಹಾಗೂ ಠೇವಣಿ ವಾಪಸ್ಸಾತಿಯಲ್ಲಿ ಆಗಿರುವ ತೊಂದರೆಗಳ ಬಗ್ಗೆ ವಿವರಿಸಿದರು ಮತ್ತು ದೇಶದ ಈ ನೋಟು ನಿರ್ವಹಣೆ ವಿಧಿ ವಿಧಾನಗಳಲ್ಲಿ ಪತ್ತಿನ ಸಹಕಾರಿ ಸಂಸ್ಥೆಗಳನ್ನು ಬಳಸಿಕೊಳ್ಳಬಹುದಿತ್ತು. ಅವರನ್ನು ಬಳಸಿಕೊಂಡಿದ್ದರೆ ಈ ಕೆಲಸ ಇನ್ನೂ ಹೆಚ್ಚು ಸುಲಭವಾಗಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸಬಹುದಿತ್ತು ಎಂದು ತಿಳಿಸಿದರು.

ಅಧ್ಯಯನ ತಂಡವು ಈ ವಿಷಯಗಳನ್ನು ಗಮನಿಸಿದೆ ಹಾಗೂ ಸಂಬಂಧಿಸಿದವರ ಗಮನಕ್ಕೆ ತರಲಾಗುತ್ತದೆ ಎಂದು ತಿಳಿಸಿದರು.

ರೂ.500 ಹಾಗೂ ರೂ.1000 ಕರೆನ್ಸಿ ನೋಟುಗಳ ನಿಷೇಧದ ಪರಿಣಾಮ ಹಾಗೂ ಪರ್ಯಾಯಾಲೋಚನೆ ಸೌಹಾರ್ದ ಸಹಕಾರಿಗಳ ಚಿಂತನಾ ಸಭೆ

ಬೆಂಗಳೂರು : ಕೇಂದ್ರ ಸರ್ಕಾರವು ದಿನಾಂಕ 08 ನವೆಂಬರ್ 2016 ರಿಂದ ರೂ.500/– ಹಾಗೂ ರೂ.1000/– ಕರೆನ್ಸಿ ನೋಟುಗಳ ಚಲಾವಣೆಯನ್ನು ಸ್ಥಗಿತಗೊಳಿಸಿರುವುದರಿಂದ ಹಾಗೂ ಪತ್ತಿನ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ ಆಗಿರುವ ತೊಂದರೆ ಮತ್ತು ನಿವಾರೋಣೋಪಾಯಗಳ ಕುರಿತು ಚರ್ಚಿಸುವುದಕ್ಕಾಗಿ ತುರ್ತು ಸಭೆಯನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ದಿನಾಂಕ : 16 ನವೆಂಬರ್ 2016ರಂದು ಆಯೋಜಿಸಲಾಗಿತ್ತು.

ಸದರಿ ಸಭೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಬ್ಯಾಂಕಿಂಗ್ ತಜ್ಞರಾದ ಶ್ರೀ ಬಿ.ಆರ್.ರವೀಂದ್ರನಾಥ ಹಾಗೂ ಅನೇಕ ಸಹಕಾರಿ ಧುರೀಣರು, ಸಂಯುಕ್ತ ಸಹಕಾರಿಯ ಹಲವು ನಿರ್ದೇಶಕರುಗಳು ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯಲ್ಲಿ ರಾಜ್ಯದ 215 ಸೌಹಾರ್ದ ಸಹಕಾರಿಗಳಿಂದ 305 ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರೂ.500/– ಹಾಗೂ ರೂ.1000/– ನೋಟುಗಳ ನಿಷೇಧದಿಂದ ಆಗಿರುವ ತೊಂದರೆಗಳನ್ನು ವಿವರಿಸಿದರು ಹಾಗೂ ಈ ಕುರಿತು ಸಂಬಂಧಿಸಿದ ಪ್ರಾಧಿಕಾರ/ಅಧಿಕಾರಿಗಳಿಂದ ಹಾಗೂ ಕೇಂದ್ರ ಸರ್ಕಾರದ ಸಚಿವರೊಂದಿಗೆ ಪತ್ರ ವ್ಯವಹಾರ/ಮಾತುಕತೆ ನಡೆಸಲಾಗಿದೆ ಎಂದು ಸಭೆಗೆ ವಿವರಿಸಿದರು.

ರೂ. 500/– ಮತ್ತು ರೂ. 1000/– ಕರೆನ್ಸಿ ನೋಟುಗಳ ಕುರಿತಂತೆ ನಡೆದ ಸೌಹಾರ್ದ ಸಹಕಾರಿಗಳ ಚಿಂತನಾ ಸಭೆಯ ಪ್ರಮುಖ ಅಂಶಗಳು

- ದೇಶದ ಹಿತದೃಷ್ಟಿಯಿಂದ ಪ್ರಧಾನಮಂತ್ರಿಗಳು ದಿನಾಂಕ : 08–11–2016ರ ಮಧ್ಯರಾತ್ರಿಯಿಂದ ರೂ.500/– ಮತ್ತು ರೂ.1000/– ಕರೆನ್ಸಿ ನೋಟಗಳನ್ನು ನಿಷೇಧಿಸಿರುವ ನಿರ್ಧಾರಕ್ಕೆ ಸಭೆಯಲ್ಲಿ ಬೆಂಬಲ ಸೂಚಿಸಿತು.
- ಆದರೆ, ರೂ.500/– ಮತ್ತು ರೂ.1000/– ಕರೆನ್ಸಿ ನೋಟುಗಳನ್ನು ಚಲಾವಣೆ ಮತ್ತು ವಿನಿಮಯದ ಒಟ್ಟಾರೆ ಪ್ರಕ್ರಿಯೆಯಲ್ಲಿ ಸೌಹಾರ್ದ ಸಹಕಾರಿಗಳನ್ನು ಸೇರಿದಂತೆ ಸಹಕಾರಿ ಸಂಸ್ಥೆಗಳನ್ನು ದೂರ ಇಟ್ಟಿರುವುದನ್ನು ಸಭೆಯು ಖಂಡಿಸಿತು.
- ವ್ಯಕ್ತಿಗಳಿಗೆ ನಿಗದಿಪಡಿಸಿರುವ ವೈಯಕ್ತಿಕ ಮಿತಿಗಳನ್ನು ಸಹಕಾರಿ ಸಂಸ್ಥೆಗಳಿಗೆ ನಿಗದಿಪಡಿಸಿರುವುದನ್ನು ಸಭೆಯು ಖಂಡಿಸಿತು. ಸಹಕಾರಿ ಸಂಸ್ಥೆಗಳು ತಮ್ಮ ಬ್ಯಾಂಕ್ ಖಾತೆಯಿಂದ ರೂ.1 ಲಕ್ಷದವರೆಗೆ ಹಣವನ್ನು ಪಡೆಯಲು ಮಿತಿಯನ್ನು ಹೆಚ್ಚಿಸಲು ಸಭೆಯು ಆಗ್ರಹಿಸಿತು. ಈ ಕುರಿತಂತೆ ಪ್ರತಿ ಸೌಹಾರ್ದ ಸಹಕಾರಿಯಿಂದ ಮಾನ್ಯ ಪ್ರಧಾನಮಂತ್ರಿಗಳು/ಕೇಂದ್ರ ಹಣಕಾಸು ಸಚಿವರಿಗೆ ಪತ್ರ ಕಳುಹಿಸಲು ನಿರ್ಧರಿಸಲಾಯಿತು.

- ಹೆಚ್ಚಿನ ಸೌಹಾರ್ದ ಸಹಕಾರಿಗಳ ಖಾತೆಗಳು ಡಿಸಿಸಿ ಬ್ಯಾಂಕಿನಲ್ಲಿದ್ದು, ಆದರೆ, ಪ್ರಸ್ತುತ ಆರ್.ಬಿ.ಐ. ಡಿಸಿಸಿ ಬ್ಯಾಂಕ್‌ಗಳಿಗೆ ಠೇವಣಿ ಪಡೆಯುವುದನ್ನು ನಿಷೇಧಿಸಿರುವುದನ್ನು ಸಭೆಯು ಖಂಡಿಸಿತು. ಸದರಿ ಸುತ್ತೋಲೆಯನ್ನು ವಾಪಾಸ್ಸು ಪಡೆಯಲು ಆಗ್ರಹಿಸಲಾಯಿತು.
- ಸೌಹಾರ್ದ ಸಹಕಾರಿಗಳು ತಮ್ಮ ಖಾತೆಗಳನ್ನು ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಲ್ಲಿ ತೆರೆದಲ್ಲಿ, ಸೌಹಾರ್ದ ಸಹಕಾರಿ ಬ್ಯಾಂಕ್‌ಗಳ ಮೂಲಕ ಸೌಹಾರ್ದ ಸಹಕಾರಿಗಳ ಠೇವಣಿ ಮತ್ತು ಹಣ ವಿನಿಮಯಕ್ಕೆ ಅವಕಾಶ ನೀಡುವುದನ್ನು ಸಭೆಯ ಗಮನಕ್ಕೆ ತರಲಾಯಿತು.
- ರೂ. 500/– ಮತ್ತು ರೂ. 1000/– ಕರೆನ್ಸಿ ನೋಟಿನಲ್ಲಿ ಠೇವಣಿಗಳನ್ನು ಸ್ವೀಕರಿಸದಿರಲು ಸಭೆಯಲ್ಲಿ ನಿರ್ಣಯಿಸಲಾಯಿತು. ಸಾಲ ವಸೂಲಾತಿಯ ಕುರಿತಂತೆ ಆಯಾ ಸಹಕಾರಿ ಸಂಸ್ಥೆಗಳು ಸಾಲ ಕಂತನ್ನು ರಿ–ಶೆಡ್ಯೂಲ್ ಮಾಡಿಕೊಳ್ಳಬಹುದು ಅಥವಾ ಸಹಕಾರಿಯು ತಮ್ಮ ಬ್ಯಾಂಕ್ ಖಾತೆಗೆ ಮೂರನೇ ವ್ಯಕ್ತಿ ಪಾವತಿಗೆ ಅವಕಾಶ ನೀಡಲು ತೀರ್ಮಾನಿಸಲಾಯಿತು.
- ಸೌಹಾರ್ದ ಕಾಯ್ದೆಯಡಿಯಲ್ಲಿ 18 ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಈ ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಸಹಾಯವನ್ನು ಸೌಹಾರ್ದ ಸಹಕಾರಿಗಳು ಬಳಸಿಕೊಂಡು ಥರ್ಡ್ ಪಾರ್ಟಿ ರೆಮಿಡನ್ಸ್ ಮಾಡಿಕೊಳ್ಳಬಹುದು ಹಾಗೂ ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಮಹಾಮಂಡಳ ಈ ಕುರಿತು ವ್ಯವಸ್ಥೆಯನ್ನು ಮಾಡಿ ಸೌಹಾರ್ದ ಸಹಕಾರಿಗಳಿಗೆ ಸದರಿ ವ್ಯವಸ್ಥೆಯನ್ನು ಕಲ್ಪಿಸಬಹುದು.
- ಸೌಹಾರ್ದ ಸಹಕಾರಿ ಸಂಸ್ಥೆಗಳು ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಸಿಬ್ಬಂದಿಗಳನ್ನು ನೇಮಿಸಿಕೊಂಡು ರೂ. 500/– ಹಾಗೂ ರೂ.1000/–ಗಳ ಬದಲಾವಣೆ ಕಾರ್ಯ ಸಹ ಮಾಡಬಹುದಾಗಿದೆ. ಈ ಕಾರ್ಯಗಳಿಗಾಗಿ ಪತ್ತಿನ ಸೌಹಾರ್ದ ಸಹಕಾರಿಗಳು ಪ್ರಸ್ತುತ ಬಂದಿರುವ ಸಮಸ್ಯೆಗಳನ್ನು ತಾತ್ಕಲಿಕವಾಗಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮನೋಹರ್ ಮಸ್ಕಿಯವರು ಸಭೆಯಲ್ಲಿ ತಿಳಿಸಿದರು.

- ಠೇವಣಿ ಮತ್ತು ಸಾಲಗಳ ಕುರಿತಂತೆ ರೂ. 20,000/– ನಗದು ಮಿತಿಯನ್ನು ಹೆಚ್ಚುವಲ್ಲಿ ಕ್ರಮವಿಡಲು ತೀರ್ಮಾನಿಸಲಾಯಿತು.
- ಹೊಸ ಸದಸ್ಯರಿಗೆ ಸದಸ್ಯತ್ವ ನೀಡಿ ವ್ಯವಹಾರ ನಡೆಸಲು ತೀರ್ಮಾನಿಸಲಾಯಿತು.
- ಸಹಕಾರಿ ಸಂಸ್ಥೆಗಳು ತಮ್ಮ ದೈನಂದಿನ ಚಟುವಟಿಕೆಗಳನ್ನು ಎಂದಿನಂತೆ ನಡೆಸಲು ತೀರ್ಮಾನಿಸಲಾಯಿತು.
- ಚಲಾವಣೆಯಲ್ಲಿರುವ ಹೊಸ ನೋಟಿನಿಂದ ಪಿಗ್ಮಿ, ಆರ್.ಡಿ., ಎಫ್.ಡಿ. ಮತ್ತು ಸಾಲ ವಸೂಲಾತಿಯನ್ನು ನಡೆಸಲು ಸಭೆಯು ತೀರ್ಮಾನಿಸಿತು.
- ಸೌಹಾರ್ದ ಕಾಯ್ದೆಯಡಿಯಲ್ಲಿ 18 ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಈ ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಸಹಾಯವನ್ನು ಸೌಹಾರ್ದ ಸಹಕಾರಿಗಳು ಬಳಸಿಕೊಂಡು ಥರ್ಡ್ ಪಾರ್ಟಿ ರೆಮಿಟನ್ಸ್ ಮಾಡಿಕೊಳ್ಳಬಹುದು ಹಾಗೂ ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಮಹಾಮಂಡಳ ಈ ಕುರಿತು ವ್ಯವಸ್ಥೆಯನ್ನು ಮಾಡಿ ಸೌಹಾರ್ದ ಸಹಕಾರಿಗಳಿಗೆ ಸದರಿ ವ್ಯವಸ್ಥೆಯನ್ನು ಕಲ್ಪಿಸಬಹುದು.
- ಸೌಹಾರ್ದ ಸಹಕಾರಿ ಸಂಸ್ಥೆಗಳು ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಸಿಬ್ಬಂದಿಗಳನ್ನು ನೇಮಿಸಿಕೊಂಡು ರೂ.500/– ಹಾಗೂ ರೂ.1000/–ಗಳ ಬದಲಾವಣೆ ಕಾರ್ಯ ಸಹ ಮಾಡಬಹುದಾಗಿದೆ. ಈ ಕಾರ್ಯಗಳಿಗಾಗಿ ಪತ್ತಿನ ಸೌಹಾರ್ದ ಸಹಕಾರಿಗಳು ಪ್ರಸ್ತುತ ಬಂದಿರುವ ಸಮಸ್ಯೆಗಳನ್ನು ತಾತ್ಕಾಲಿಕವಾಗಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮನೋಹರ್ ಮಸ್ಕಿಯವರು ಸಭೆಯಲ್ಲಿ ತಿಳಿಸಿದರು.

ಮನವಿ ಪತ್ರಗಳ ಸಲ್ಲಿಕೆ

ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರಧಾನ ಮಂತ್ರಿಗಳಿಗೆ, ಕೇಂದ್ರದ ಹಣಕಾಸು ಸಚಿವರಿಗೆ, ಕೃಷಿ ಹಾಗೂ ಸಹಕಾರ ಸಚಿವರಿಗೆ ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಗವರ್ನರ್ ಇವರುಗಳಿಗೆ ಮನವಿ ಪತ್ರಗಳನ್ನು ದಿನಾಂಕ 17–11–2016ರಂದು ರವಾನಿಸಲಾಗಿದೆ.

63ನೇ ಅಖಿಲ ಭಾರತ ಸಹಕಾರ ಸಪ್ತಾಹ

ದಿನಾಂಕ : 19–11–2016ರಂದು ಮಂಡ್ಯದಲ್ಲಿ ನಡೆದ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಸಹಯೋಗ

ಮಂಡ್ಯ : ದಿನಾಂಕ 19–11–2016ರಂದು ಮಂಡ್ಯದಲ್ಲಿ ನಡೆದ 63ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ "ಸಹಕಾರ ಸಂಸ್ಥೆಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು" ದಿನಾಚರಣೆಯನ್ನು ರಾಜ್ಯದ ಅಪೆಕ್ಸ್ ಬ್ಯಾಂಕ್ ನೇತೃತ್ವದಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿ ಹಾಗೂ ಲ್ಯಾಂಪ್ಸ್ ಸಹಕಾರ ಮಹಾಮಂಡಳಗಳ ಸಹಯೋಗದೊಂದಿಗೆ ಮತ್ತು ಸ್ಥಳೀಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಮಂಡ್ಯ, ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ಮಂಡ್ಯ, ಜಿಲ್ಲಾ ಸಹಕಾರ ಯೂನಿಯನ್, ಮಂಡ್ಯ ಮತ್ತು ಉಳಿದಂತೆ ಜಿಲ್ಲೆಯ ಸಹಕಾರ ಸಂಸ್ಥೆಗಳು ಮತ್ತು ಸಹಕಾರ ಇಲಾಖೆಯ ಸಹಕಾರದೊಂದಿಗೆ ಮಂಡ್ಯದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಕಲಾ ಮಂದಿರದಲ್ಲಿ ಆಚರಿಸಲಾಯಿತು.

ರಾಜ್ಯಕ್ಕೆ ಮಂಡ್ಯ ಜಿಲ್ಲೆ ಉತ್ತಮ ಸಹಕಾರಿಗಳನ್ನು ನೀಡಿದೆ, ಅವರ ಮಾರ್ಗವನ್ನು ಅನುಸರಿಸೋಣ – ಶ್ರೀ ಹೆಚ್.ಎಸ್.ಮಹದೇವ ಪ್ರಸಾದ

ಕಾರ್ಯಕ್ರಮವನ್ನು ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವ ಪ್ರಸಾದರವರು ಉದ್ಘಾಟಿಸಿ, ಸಹಕಾರ ಕ್ಷೇತ್ರದ ಮೂಲಕ ಕಳೆದ 3 ವರ್ಷಗಳಲ್ಲಿ ರೈತರಿಗೆ, ಮಹಿಳೆಯರಿಗೆ, ಸಮಾಜದ ಹಿಂದುಳಿದ ವರ್ಗದ ಜನರಿಗೆ ಮತ್ತು ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಅನೇಕ ಅನುಕೂಲತೆಗಳನ್ನು ಮಾಡಿ ಕೊಡಲಾಗಿದೆ. ಅವಕಾಶಗಳ ಸದುಪಯೋಗ ಮಾಡಿಕೊಂಡು ಸಹಕಾರ ಕ್ಷೇತ್ರವನ್ನು ಉತ್ತಮವಾಗಿ ಬೆಳೆಸುವುದರ ಜೊತೆಗೆ ತಾವುಗಳು ಕೂಡ ಆರ್ಥಿಕವಾಗಿ ಬೆಳೆಯಬೇಕು.

ಈ ರಾಜ್ಯದಲ್ಲಿ ಅತ್ಯಂತ ಹಿರಿಯ ಹಾಗೂ ಶ್ರೇಷ್ಠ ವರ್ಗದ ಸಹಕಾರಿಗಳಾದ ಶ್ರೀ ಕೆ.ವಿ.ಶಂಕರೇಗೌಡ, ಶ್ರೀ ಹೆಚ್.ವಿ.ವೀರೇಗೌಡ, ಶ್ರೀ ಚೌಡಯ್ಯ ಹಾಗೂ ಇನ್ನೂ ಅನೇಕರು ಉತ್ತಮ ಸಹಕಾರಿ ಸಂಸ್ಥೆಗಳನ್ನು ಕಟ್ಟಿದ್ದಾರೆ, ಬೆಳೆಸಿದ್ದಾರೆ. ಅವರು ತೋರಿಸಿದ ದಾರಿಯಲ್ಲಿ ನಡೆದು ಸಹಕಾರ ಕ್ಷೇತ್ರವನ್ನು ಬೆಳೆಸೋಣ. ದೇಶದಲ್ಲಿ ರೂ.500/– ಹಾಗೂ ರೂ.1000/– ನೋಟುಗಳ ಚಲಾವಣೆ ರದ್ದಾಗಿದೆ. ಆದರೆ, ಈ ಪ್ರಕ್ರಿಯೆಯಲ್ಲಿ ಸಹಕಾರ ಸಂಸ್ಥೆಗಳನ್ನು ಕಡೆಗಣಿಸಲಾಗಿದೆ.

ಇದರಿಂದಾಗಿ ರೈತರಿಗೆ ಹಾಗೂ ಸದಸ್ಯರಿಗೆ ತೊಂದರೆಯಾಗಿದೆ. ಸಹಕಾರಿ ಸಂಸ್ಥೆಗಳ ಕಾರ್ಯ ಸ್ಥಗಿತವಾದಂತಾಗಿದೆ. ಈ ಬಗ್ಗೆ ಕೇಂದ್ರ ಸರಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಸಹಕಾರಿ ಸಂಸ್ಥೆಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಅವಶ್ಯಕ – ಶ್ರೀ ಗುರುನಾಥ ಜಾಂತಿಕರ

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ಈ ದೇಶದ ಸಹಕಾರ ಚಳುವಳಿಗೆ 112 ವರ್ಷಗಳ ಇತಿಹಾಸವಿದೆ. ನಮ್ಮ ದೇಶದ ಸಹಕಾರ ಚಳುವಳಿ ಬೃಹದಾಕಾರವಾಗಿ ಬೆಳೆದಿದೆ, ವಿಶ್ವಮಾನ್ಯವಾಗಿದೆ, ಆದರೂ ಸಾಧಿಸಬೇಕಾದುದು ಬಹಳಷ್ಟಿದೆ. ಇಂದಿನ ಪೈಪೋಟಿ ಯುಗದಲ್ಲಿ ನಾವು ಸಹಕಾರಿಗಳು ಸಾಂಪ್ರದಾಯಿಕ ವ್ಯವಹಾರದ ವ್ಯವಸ್ಥೆಗಳನ್ನು ಬದಿಗಿರಿಸಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಾಗ ಮಾತ್ರ ನಾವು ಬದುಕುಳಿಯಲು ಸಾಧ್ಯ. ನಾವು ಮಾತ್ರ ತಂತ್ರಜ್ಞಾನವನ್ನು ಬಳಸಿದರೆ ಸಾಲದು, ನಮ್ಮ ಅಕ್ಕ–ಪಕ್ಕದ ಸಹಕಾರಿ ಸಂಸ್ಥೆಗಳಿಗೆ ಈ ಬಗ್ಗೆ ಪ್ರೇರೇಪಿಸಬೇಕು, ಅವರೂ ಅಳವಡಿಸಿಕೊಳ್ಳುವಂತಾಗಬೇಕು. ಈ ಬಗ್ಗೆ ಈ ಸಹಕಾರ ಸಪ್ತಾಹದ ಆಚರಣೆ ಅರ್ಥಪೂರ್ಣವಾಗಿರಲಿ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿಪಾಟೀಲರವರು ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಉತ್ತಮ ಸಹಕಾರ ಸಂಸ್ಥೆಗಳಿಗೆ ಸನ್ಮಾನ ಮಾಡಲಾಯಿತು.

ಸಮಾರಂಭ ಪ್ರಾರಂಭದ ಮೊದಲು ಮಾನ್ಯ ಸಹಕಾರ ಸಚಿವರಿಂದ ಸಹಕಾರ ಸಪ್ತ ವರ್ಣದ ಧ್ವಜಾರೋಹಣ, ಸಂಯುಕ್ತ ಸಹಕಾರಿಯ ಮಳಿಗೆಯ ಉದ್ಘಾಟನೆ ನೆರವೇರಿತು. ಶ್ರೀ ವೈ.ವಿ.ಗುಂಡೂರಾವ್, ನಿವೃತ್ತ ನಬಾರ್ಡ್ ಅಧಿಕಾರಿ ಇವರು "ಸಹಕಾರಿ ಸಂಸ್ಥೆಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು" ವಿಷಯವಾಗಿ ಉಪನ್ಯಾಸ ನೀಡಿದರು. ಸಮಾರಂಭದ ಪ್ರಾರಂಭದಲ್ಲಿ ಪ್ರಾರ್ಥನೆ, ನಾಡಗೀತೆ ಹಾಗೂ ರೈತ ಗೀತೆಯ ನಂತರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಂ.ಡಿ.ಹರೀಶರವರು ಸ್ವಾಗತ ಕೋರಿದರು.

ಸಹಕಾರ ಸಚಿವರಿಂದ ಸಂಯುಕ್ತ ಸಹಕಾರಿಯ ಮಳಿಗೆ ಉದ್ಘಾಟನೆ

ಉಪಸ್ಥಿತ ಗಣ್ಯರು

ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ, ಮಂಡ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಎಸ್.ನಾಗರಾಜು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಅಪೆಕ್ಸ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಮಣರೆಡ್ಡಿ, ಸಹಕಾರಿ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಹಕಾರ ಇಲಾಖೆಯ ಅಪರ ನಿಬಂಧಕರಾದ ಶ್ರೀ ಬಿ.ಎಸ್.ಹರೀಶ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶ್ರೀಧರ, ಮೈಸೂರು ಪ್ರಾಂತ್ಯದ ಜಂಟಿ ನಿಬಂಧಕರಾದ ಶ್ರೀ ಹೆಚ್.ಸಿ.ಜೋಶಿ, ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಾಮಕೃಷ್ಣೇಗೌಡ, ಮಂಡ್ಯದ ಉಪನಿಬಂಧಕರಾದ ಶ್ರೀ ಹೆಚ್.ಸಿ.ಕುಮಾರ, ಮೈಸೂರು ಉಪನಿಬಂಧಕರಾದ ಡಾ.ಉಮೇಶ, ಚಾಮರಾಜನಗರ ಉಪನಿಬಂಧಕರಾದ ಶ್ರೀ ಪಿ.ಶಶಿಧರ, ಹಾಸನ ಉಪನಿಬಂಧಕರಾದ ಶ್ರೀ ಬಿ.ಆರ್.ಕೃಷ್ಣಮೂರ್ತಿ, ಮೈಸೂರು ಸಹಕಾರ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಶ್ರೀ ಎಲ್.ಸ್ವಾಮಿ ಹಾಗೂ ಅನೇಕ ಸಹಕಾರಿ ಗಣ್ಯರು, ಇಲಾಖಾಧಿಕಾರಿಗಳು ಭಾಗವಹಿಸಿದ್ದರು.

ಬೆಳಿಗ್ಗೆ 9.30 ಗಂಟೆಗೆ ನಗರದ ಪ್ರಮುಖ ರಸ್ತೆಯಲ್ಲಿ ಸಹಕಾರಿ ಕಾರ್ಯಕರ್ತರುಗಳು, ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಹಯೋಗದೊಂದಿಗೆ ಸಾಂಸ್ಕೃತಿಕ ಪರಂಪರೆ ಹಾಗೂ ಸಹಕಾರಿ ಸಾಧನೆಗಳನ್ನು ಬಿಂಬಿಸುವ ಭವ್ಯವಾದ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು.

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಚುನಾವಣೆ ಕುರಿತು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಚುನಾವಣೆಯನ್ನು ದಿನಾಂಕ : 27.11.2016ರಂದು ನಡೆಸಲು ಮಾನ್ಯ ಚುನಾವಣಾಧಿಕಾರಿಗಳು ನಿರ್ಣಯಿಸಿ, ದಿನಾಂಕ : 07.10.2016ರಂದು ಮತದಾನದ ಹಕ್ಕುಳ್ಳ ಸಹಕಾರಿಗಳ, ಸುಸ್ಥಿದಾರ ಸಹಕಾರಿಗಳ, ಮತದಾನದ ದಿನಾಂಕಕ್ಕೆ ಸುಸ್ಥಿಯಾಗುವ ಸಹಕಾರಿಗಳ ಹಾಗೂ ಅನರ್ಹ ಸಹಕಾರಿಗಳ ಪಟ್ಟಿಗಳನ್ನು ಪ್ರಕಟಿಸಿದ್ದರು.

ಆದರೆ, ಸಹಕಾರಿಗಳಿಂದ ಭರ್ತಿಯಾಗಿ ಸಲ್ಲಿಕೆಯಾಗುವ ಡೆಲಿಗೇಟ್ ನಮೂನೆಗಳ ಜೊತೆಯಲ್ಲಿ ಆಡಳಿತ ಮಂಡಲಿ ನಿರ್ಣಯದ ಆದರೆ, ಎಲ್ಲಾ ಅರ್ಹ ಸಹಕಾರಿಗಳಿಂದ ಡೆಲಿಗೇಟ್ ನಮೂನೆಗಳು ಭರ್ತಿಯಾಗಿ ಸಲ್ಲಿಕೆಯಾಗಿಲ್ಲದ ಕಾರಣ ಹಾಗೂ ಸಲ್ಲಿಕೆಯಾಗಿರುವ ಡೆಲಿಗೇಟ್ ನಮೂನೆಗಳ ಪರಿಶೀಲನೆ ಮುಕ್ತಾಯವಾಗಿಲ್ಲದ ಹಿನ್ನೆಲೆಯಲ್ಲಿ ನಿಗದಿತ ಚುನಾವಣಾ ದಿನಾಂಕವಾದ 27.11.2016ಕ್ಕೆ 15 ದಿನ ಪೂರ್ವದಲ್ಲಿ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಚುನಾವಣೆಯನ್ನು 27.11.2016ರಂದು ನಡೆಸಲು ಸಾಧ್ಯವಾಗಿರುವುದಿಲ್ಲ. ಚುನಾವಣಾ ದಿನಾಂಕ ಮರುನಿಗದಿಯಾದ ನಂತರ ಎಲ್ಲಾ ಸಹಕಾರಿಗಳಿಗೂ ತಿಳಿಸಲಾಗುವುದು.

ಯು.ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿಗೆ ಭೇಟಿ : ಸಂಪರ್ಕ ಸಭೆ

ಯಲ್ಲಾಪುರ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀ ಆರ್.ಎನ್.ದೇಶಪಾಂಡೆ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ.ಕಾರಕೂನರವರು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಯು.ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿಯ ಅಧ್ಯಕ್ಷರು ಹಾಗೂ ಹಿರಿಯ ಸಹಕಾರಿಗಳಾದ ಶ್ರೀ ಪ್ರಮೋದ ಹೆಗಡೆಯವರ ವಿನಂತಿಯ ಮೇರೆಗೆ ದಿನಾಂಕ : 25 ನವೆಂಬರ್ 2016ರಂದು ಸಹಕಾರಿಗೆ ಭೇಟಿ ನೀಡಿದರು.

ಪ್ರಾರಂಭದಲ್ಲಿ ಶ್ರೀ ಪ್ರಮೋದ ಹೆಗಡೆಯವರು ಎಲ್ಲರನ್ನು ಸ್ವಾಗತಿಸಿ, ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ನೇತಾರರಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿಯವರು ಉತ್ತಮ ಕೆಲಸ ಮಾಡುತ್ತಿದ್ದೀರಿ. ಅದಕ್ಕಾಗಿ ಧನ್ಯವಾದಗಳು. ಆದರೆ, ಸೌಹಾರ್ದ ಸಹಕಾರಿ ಕಾಯ್ದೆಗೆ ಸಂಪೂರ್ಣ ಸ್ವಾಯತ್ತತೆಯನ್ನು ನೀಡಿಲ್ಲ. ಸರಕಾರದ ಹಸ್ತಕ್ಷೇಪಕ್ಕೆ ಅವಕಾಶ ಮಾಡಿದ್ದಾರೆ. ಇಂತಹ ತಿದ್ದುಪಡಿಗಳ ವಿರುದ್ಧ ಹೋರಾಡಬೇಕು. 97ನೇ ಸಂವಿಧಾನ ತಿದ್ದುಪಡಿಯ ಸಂಪೂರ್ಣ ಆಶಯವನ್ನು ಸೌಹಾರ್ದ ಸಹಕಾರಿ ಕಾಯ್ದೆಯು ಹೊಂದುವಂತಾಗಬೇಕು. ರಾಷ್ಟ್ರಾದ್ಯಂತ ಏಕ ಸ್ವರೂಪದ ಕೇಂದ್ರೀಯ ಸಹಕಾರ ಕಾಯ್ದೆ ರಚನೆಯಾಗಬೇಕು. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಂದ ಬಹಳ ಕಿರುಕುಳವಾಗುತ್ತಿದೆ. ಇದಕ್ಕೂ ಏಕರೂಪ ನೀತಿ ಅಗತ್ಯ. ಇದಕ್ಕಾಗಿ ನೀವು ಹೋರಾಟ ಮಾಡಬೇಕು. ಸೌಹಾರ್ದ ಸಹಕಾರಿಗಳಿಗೆ ಉತ್ತಮ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೀರಿ. ಇವುಗಳು ಇನ್ನೂ ಹೆಚ್ಚು ಪ್ರಮಾಣದಲ್ಲಿ ಮತ್ತು ಕಡ್ಡಾಯವಾಗಿ ನಡೆಯುವಂತೆ ವ್ಯವಸ್ಥೆ ಅಗತ್ಯ ಇದೆ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಈ ರಾಜ್ಯದಲ್ಲಿ 15 ವರ್ಷಗಳಿಂದ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದಿದೆ. ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಯ ಜೊತೆಗೆ ಒಟ್ಟಾರೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಹೋರಾಟ ನಡೆಸುತ್ತಾ ಬಂದಿದ್ದೇವೆ. ಸಹಕಾರಿಗಳ ಸಹಕಾರದಿಂದ ಹೋರಾಟ ಜಾರಿಯಲ್ಲಿದೆ. ಒಳ್ಳೆಯ ಸಂಸ್ಕಾರವಿರುವ ಸೌಹಾರ್ದ ಸಹಕಾರಿಗಳನ್ನು ಹುಟ್ಟುಹಾಕಿದ್ದೇವೆ. ಒಳ್ಳೆಯ ಸಹಕಾರಿಗಳನ್ನು ಪ್ರೋತ್ಸಾಹಿಸುವ ಹಾಗೂ ತಪ್ಪಿತಸ್ಥರಿಗೆ ಶಿಕ್ಷಿಸುವ ಕಾರ್ಯ ಆದಾಗ ಮಾತ್ರ ಉತ್ತಮ ಸಹಕಾರಿ ಸಂಸ್ಥೆಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ. ರಾಜ್ಯದಲ್ಲಿ ಮತ್ತು ಇಡೀ ದೇಶದಲ್ಲಿ ಇ-ಸ್ಟ್ಯಾಂಪಿಂಗ್ ಕಾರ್ಯ ಸೌಹಾರ್ದ ಸಹಕಾರಿಗಳ ಮೂಲಕ ಪ್ರಾರಂಭಿಸಿದ ಹೆಮ್ಮೆ ನಮಗಿದೆ. ದೇಶದಾದ್ಯಂತ ಸಹಕಾರಿ ಸಂಸ್ಥೆಗಳಿಗೆ ಥರ್ಡ್ ಪಾರ್ಟಿ ಚೆಕ್ ಕಲೆಕ್ಷನ್ ವ್ಯವಸ್ಥೆಯ ಕೀರ್ತಿ ನಮ್ಮದಾಗಿದೆ. ಸಂಯುಕ್ತ ಸಹಕಾರಿ ರಾಷ್ಟ್ರದಲ್ಲಿ ರಾಜ್ಯಮಟ್ಟದ ಮಾದರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರತ್ಯೇಕ ನ್ಯಾಯಾಲಯ ಪಡೆಯಲಾಗಿದೆ. ಎನ್.ಸಿ.ಡಿ.ಸಿ.ಯಿಂದ ಮರುಹಣಕಾಸು ವ್ಯವಸ್ಥೆ ಮಾಡಲಾಗಿದೆ. ಡಿಮಾನೆಟೈಸೇಷನ್ ವಿಷಯವಾಗಿ ಹಣಕಾಸು ಸಚಿವರಿಗೆ ಮನವಿ ಸಲ್ಲಿಸಲಾಗಿದೆ. ರಾಜ್ಯ ಹಣಕಾಸು ಸಚಿವರಾದ ಶ್ರೀ ಸಂತೋಷ ಗಂಗ್ವಾರರವರನ್ನು ಮತ್ತು ಕೇಂದ್ರ ಕೃಷಿ ಹಾಗೂ ಸಹಕಾರ ಸಚಿವರಾದ ಶ್ರೀ ರಾಧಾಮೋಹನಸಿಂಗ್‌ರವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ. ಆದಾಯ ತೆರಿಗೆ ಸಂಬಂಧವಾಗಿಯೂ ಸಹ ಸಿ.ಬಿ.ಡಿ.ಟಿ.ಯವರಿಗೆ 2 ಬಾರಿ ಮನವಿ ಸಲ್ಲಿಸಲಾಗಿದೆ. ಹೀಗೆ ನಿರಂತರವಾಗಿ ಪ್ರಯತ್ನಗಳು ನಡೆಯುತ್ತಲಿವೆ. ಸಹಕಾರಿಗಳು ನಿರಾಶರಾಗುವುದು ಬೇಡ. ಉತ್ತಮ ದಿನಗಳು ಬರಲಿವೆ. ಸಹನೆಯಿಂದ ಇನ್ನೂ ಹೆಚ್ಚು ಉತ್ಸಾಹದಿಂದ ಕಾರ್ಯನಿರ್ವಹಿಸೋಣ ಎಂದು ತಿಳಿಸಿದರು.

ನಂತರ ಮಾತನಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಕೇಂದ್ರದ ಯೋಜನಾ ಆಯೋಗದ ಶಿಫಾರಸ್ಸಿನ ಮೇರೆಗೆ ರಾಜ್ಯದ ಅನೇಕ ಹಿರಿಯ ಸಹಕಾರಿಗಳ ಹಾಗೂ ಮಾಜಿ ಸಹಕಾರ ಸಚಿವರಾದ ಶ್ರೀ ಎಸ್. ಎಸ್.ಪಾಟೀಲರವರ ಪ್ರಯತ್ನದ ಮೇರೆಗೆ ಜಾರಿಗೆ ಬಂದಿದೆ. ದೇಶದ ಎಲ್ಲಾ ರಾಜ್ಯಗಳಲ್ಲಿ ಜಾರಿಯಾಗಲಿಲ್ಲ. 9 ರಾಜ್ಯಗಳಲ್ಲಿ ಮಾತ್ರ ಈ ಕಾಯ್ದೆ ಜಾರಿಯಲ್ಲಿದೆ. ರಾಜ್ಯದಲ್ಲಿ ಈ ಕಾಯ್ದೆ ಜಾರಿಗೆ ಬಂದಾಗಿನಿಂದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ 3800ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ರೂ.12,500 ಠೇವಣಿಗಳು, ರೂ.10,000ಕ್ಕೂ ಹೆಚ್ಚು ಸಾಲ ಹಾಗೂ 20 ಲಕ್ಷ ಸದಸ್ಯರನ್ನು ಹೊಂದಿದೆ. 50,000ಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ನೀಡಿದೆ. ಸದಸ್ಯರ ಅಗತ್ಯಕ್ಕೆ ತಕ್ಕಂತೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಹೊಸ ತಲೆಮಾರಿನ ಯುವಕರು ಈ ಕ್ಷೇತ್ರದತ್ತ ಹೆಚ್ಚು ಆಕರ್ಷಿತರಾಗಿದ್ದಾರೆ. ವರ್ಷಕ್ಕೆ 100ಕ್ಕೂ ಹೆಚ್ಚು ವಿವಿಧ ಬಗೆಯ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದರು.

ನಂತರ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಕಾಯ್ದೆ ತಿದ್ದುಪಡಿಗೆ ನಿರಂತರ ಹೋರಾಟ ನಡೆಯುತ್ತಲೇ ಇದೆ. ಅಧಿಕಾರಿಗಳು ಸಹಕಾರಿ ಸಂಸ್ಥೆಗಳ ಮೇಲೆ ತಮ್ಮ ಹಿಡಿತವನ್ನು ಕಡಿಮೆ ಮಾಡುವ ಮನೋಭಾವ ಹಾಗೂ ಸಹಕಾರಿಗಳಲ್ಲಿ ಸರಕಾರ ಹಸ್ತಕ್ಷೇಪದ ವಿರುದ್ಧ ಪ್ರತಿಭಟನಾ ಮನೋಭಾವ ಬೆಳೆಯಬೇಕು, ಆದಾಯ ತೆರಿಗೆ ಅಧಿಕಾರಿಗಳು ಗೊತ್ತಿದ್ದು ಗೊತ್ತಿದ್ದು ಸಹಕಾರಿಗಳಿಗೆ ತೊಂದರೆ ಕೊಡುತ್ತಿದ್ದಾರೆ.

ಆದಾಯ ತೆರಿಗೆಯಲ್ಲಿ ಸಹಕಾರಿಗಳಿಗೆ ರಿಯಾಯಿತಿ ಇದೆಯೇ ಹೊರತು ವಿನಾಯಿತಿ ಇಲ್ಲ ಎಂಬುದನ್ನು ಸಹಕಾರಿಗಳು ಅರಿತುಕೊಳ್ಳಬೇಕು. ಸಹಕಾರಿ ಸಂಸ್ಥೆಗಳು ನ್ಯಾಷನಲ್ ಪೇಮೆಂಟ್ ಸಿಸ್ಟಮ್‌ನಲ್ಲಿ ಬರುವಂತಾಗಬೇಕು ಎಂದು ತಿಳಿಸಿದರು. ಕೊನೆಯಲ್ಲಿ ಯು.ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿಯ ಸಲಹೆಗಾರರಾದ ಶ್ರೀ ಪಿ.ಜಿ.ಹೆಗಡೆಯವರು ವಂದಿಸಿದರು. ಕಾರ್ಯಕ್ರಮದಲ್ಲಿ ತಾಲ್ಲೂಕಿನ ಅನೇಕ ಸಹಕಾರಿಗಳು, ಯು.ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿಯ ನಿರ್ದೇಶಕರುಗಳು, ಅನೇಕ ಪತ್ರಿಕಾ ಮಾಧ್ಯಮದವರು, ಸಿಬ್ಬಂದಿಯವರು ಉಪಸ್ಥಿತರಿದ್ದರು.

ವಿವಿಧ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಭೇಟಿ

ಆಶೀರ್ವಾದ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧೂಪದಾಳ ಶಾಖೆ.

ಜಗದ್ಗುರು ಶ್ರೀ ಶಿವಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., ಸಾವಳಗಿ.

ಬೆಳಗಾವಿ : ದಿನಾಂಕ : 25-11-2016ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕರಾದ ಶ್ರೀ ಆರ್.ಎಸ್. ದೇಶಪಾಂಡೆ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ತರಬೇತಿ ಅಧಿಕಾರಿ ಶ್ರೀ ವಿ.ಜಿ.ಕಾರಕೂನ ಇವರುಗಳು ಬೆಳಗಾವಿ ಜಿಲ್ಲೆಯ ಆಶೀರ್ವಾದ ಕ್ರೆಡಿಟ್ ಸೌಹಾರ್ದ ಸಹಕಾರಿಯ ಧೂಪದಾಳ ಶಾಖೆ ಮತ್ತು ಜಗದ್ಗುರು ಶ್ರೀ ಶಿವಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., ಸಾವಳಗಿ ಹಾಗೂ ಅದರ ಕೃಷಿ ಗ್ರಂಥಾಲಯದ ನೂತನ ಕಟ್ಟಡ, ಸಹಕಾರಿಯ ನವೀಕೃತ ಕಟ್ಟಡ ಮತ್ತು ಗೋಡೌನ್‌ಗಳಿಗೆ ಭೇಟಿ ನೀಡಿ ಸೌಹಾರ್ದ ಸಹಕಾರಿಗಳ ಕಾರ್ಯಾಚರಣೆಗಳನ್ನು ಹಾಗೂ ಅವರ ಯೋಜನೆಗಳನ್ನು ಅಧ್ಯಯನ ಮಾಡಿ, ಪರಿಶೀಲಿಸಿ ಅವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮಾರ್ಗದರ್ಶನ ನೀಡಲಾಯಿತು. ಈ ಸಂದರ್ಭದಲ್ಲಿ ಸದರಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಾದ ಶ್ರೀ ಶಾಂತಿನಾಥ ನಾಯಕ ಮತ್ತು ನಿರ್ದೇಶಕರು ಹಾಗೂ ಸಿಬ್ಬಂದಿಯವರು ಮತ್ತು ಶ್ರೀ ಭೀಮನಗೌಡ ಸತಗೌಡ ಪಾಟೀಲ ಮತ್ತು ನಿರ್ದೇಶಕರು ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.

ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡುಬಿದಿರೆ ಸಹಕಾರಿಯಿಂದ ವೈದಕ್ಯೀಯ ಚಿಕಿತ್ಸೆಗಾಗಿ ರೂ. 20,000/-ಗಳನ್ನು ಅಧ್ಯಕ್ಷರಾದ ಪ್ರೊ. ವಾಸುದೇವ ಭಟ್‌ರವರಿಂದ ವಿತರಣೆ.

ಮುಂಬರುವ ಕಾರ್ಯಕ್ರಮಗಳು :
10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ

- ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ 16ನೇ ತಂಡವನ್ನು ದಿನಾಂಕ 15 ಡಿಸೆಂಬರ್ 2016 ರಿಂದ 24 ಡಿಸೆಂಬರ್ 2016ರವರೆಗೆ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ. ತರಬೇತಿಗೆ ಪ್ರವೇಶ 50 ಜನರಿಗೆ ಮಾತ್ರ. ವಸತಿ ಹಾಗೂ ಊಟೋಪಚಾರ ಹಾಗೂ ತರಬೇತಿ ಅವಧಿಯ ಪ್ರವಾಸದ ವೆಚ್ಚ ನಿರ್ವಹಣೆಗಾಗಿ ಪ್ರತಿನಿಧಿ ಶುಲ್ಕ ರೂ.5000/- ಪಾವತಿಸಬೇಕಾಗುತ್ತದೆ. ತರಬೇತಿ ವ್ಯವಸ್ಥೆ ಹಾಗೂ ಅಧ್ಯಯನ ಸಾಹಿತ್ಯಗಳನ್ನು ಸಂಯುಕ್ತ ಸಹಕಾರಿಯು ನಿರ್ವಹಿಸುತ್ತದೆ. ಮಹಿಳೆಯರಿಗಾಗಿ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ಪ್ರತಿನಿಧಿಗಳು ತರಬೇತಿ ಸ್ಥಳಕ್ಕೆ ಬಂದು ಹೋಗುವ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಗಳನ್ನು ಆಯಾ ಸೌಹಾರ್ದ ಸಹಕಾರಿಗಳು ಭರಿಸಬೇಕಾಗುತ್ತದೆ. ಪ್ರತಿನಿಧಿಗಳು ಚಳಿಗಾಲದ ಬಟ್ಟೆ ಬರೆಗಳನ್ನು ಜೊತೆಯಲ್ಲಿ ತರುವುದು.

ಬ್ಯಾಂಕ್ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಯವರಿಗೆ ಸೌಹಾರ್ದ ಸಹಕಾರಿಗಳ 'ಕೃತಜ್ಞತೆ'

ದೇಶದಲ್ಲಿ ದಿನಾಂಕ : 08-11-2016ರಂದು ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ರೂ.500/- ಹಾಗೂ ರೂ.1000/- ಕರೆನ್ಸಿ ನೋಟುಗಳ ಚಲಾವಣೆ ರದ್ಧತಿ ಘೋಷಣೆ ಮಾಡಿ ಕಪ್ಪು ಹಣ ಚಲಾವಣೆ ನಿರ್ಬಂಧಿಸುವ ವಿಷಯದಲ್ಲಿ ತೆಗೆದುಕೊಂಡ ನಿರ್ಣಯಗಳಿಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ರಾಷ್ಟ್ರದಾದ್ಯಂತ ಸಹಕಾರಿ ಬ್ಯಾಂಕುಗಳು ಸೇರಿದಂತೆ ಎಲ್ಲಾ ವಾಣಿಜ್ಯ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಇದು ದೇಶ ಸೇವೆಯೆಂದು ಪರಿಗಣಿಸಿ ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿರಿಸಿ ಆದ್ಯತಾ ವಲಯವೆಂದು ಜನರ ಸೇವೆಯ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿರುವುದಕ್ಕೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಶ್ರದ್ಧಾಂಜಲಿ

ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಗಂಗಾವತಿ ಇದರ ಸಂಸ್ಥಾಪಕರು ಮತ್ತು ಹಾಲಿ ಅಧ್ಯಕ್ಷರಾಗಿದ್ದ ಶ್ರೀ ಮಂಜುನಾಥ ಸಿದ್ದಾಪುರರವರು ದಿನಾಂಕ : 17.11.2016 ರಂದು ದೈವಾಧೀನರಾಗಿದ್ದು, ಶ್ರೀಯುತರ ಆತ್ಮಕ್ಕೆ ಶಾಂತಿ ಸಿಗಲೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿಗಳು ಕೋರಿದರು. ಶ್ರೀಯುತರು ಸಂಯುಕ್ತ ಸಹಕಾರಿಯ ಕೊಪ್ಪಳ ಜಿಲ್ಲಾ ನಿರ್ದೇಶಕರಾಗಿ ದಿನಾಂಕ 01.04.2006 ರಿಂದ 31.03.2011ರವರೆಗಿನ ಆಡಳಿತ ಮಂಡಲಿಯಲ್ಲಿ ಕಾರ್ಯನಿರ್ವಹಿಸಿದ್ದರು.

'ಜಲ ಸಂರಕ್ಷಣೆ ಯಾಕೆ? ಹೇಗೆ?' ಏಕದಿನದ ಕಾರ್ಯಾಗಾರ: ನಿರ್ಜೀವ ಕೆರೆಗಳೂ ಜೀರ್ಣೋದ್ಧಾರಗೊಳ್ಳಲಿ

ಮೂಡುಬಿದಿರೆ : ಜಲಭಾರತಿ, ಬೆಂಗಳೂರು, ರೋಟರಿ ಕ್ಲಬ್ ಆಫ್ ಮೂಡುಬಿದಿರೆ, ಟೆಂಪಲ್ ಟೌನ್, ಪ್ರೇರಣಾ ಸೇವಾ ಟ್ರಸ್ಟ್, ಮೂಡುಬಿದಿರೆ (ರಿ) ಮತ್ತು ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡುಬಿದಿರೆ ಇವರುಗಳ ಸಂಯುಕ್ತಾಶ್ರಯದಲ್ಲಿ 'ಜಲ ಸಂರಕ್ಷಣೆ ಯಾಕೆ? ಹೇಗೆ?' ಎಂಬ ಏಕದಿನದ ಕಾರ್ಯಾಗಾರವನ್ನು ಬ್ರಹ್ಮ ಶ್ರೀ ನಾರಾಯಣ ಗುರು ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರವನ್ನು ಬಿಲ್ಲವ ಸಂಘದ ಅಧ್ಯಕ್ಷರಾದ ಶ್ರೀ ಪೂವಪ್ಪ ಕುಂದರ್‌ರವರು ಉದ್ಘಾಟಿಸಿದರು. ಪ್ರೇರಣಾ ಸೇವಾ ಟ್ರಸ್ಟ್ ಮೂಡುಬಿದಿರೆ (ರಿ) ಮತ್ತು ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವಾಸುದೇವ ಭಟ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಹಳೆಯಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರೊ. ಜಗದೀಶ ಬಾಳರವರು ಉಪಸ್ಥಿತರಿದ್ದರು. ಪುತ್ತೂರು ವಿವೇಕಾನಂದ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಶ್ರೀಶ ಕುಮಾರ್, ಮಣಿಪಾಲ ಎಂ.ಐ.ಟಿ.ಯ ಶ್ರೀ ನಾರಾಯಣ ಶೈಣೈ, ಕೃಷಿಕರಾದ ಶ್ರೀ ಪ್ರವೀಣ ಸರಳಾಯ ಪುಣಚರವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

ಸಹಕಾರಿಯ ಉದ್ಘಾಟನೆ

ಶ್ರೀ ಚಂಡೀಕೇಶ್ವರಿ ಸೌಹಾರ್ದ ಸಹಕಾರಿಯ ನಿ., ನಿಲ್ಸ್‌ಕಲ್ ಸಹಕಾರಿಯ ಉದ್ಘಾಟನಾ ಸಮಾರಂಭ.

ಪ.ಪೂ. ಶ್ರೀ ಶಿವಯೋಗೇಶ್ವರ ಸೌಹಾರ್ದ ಸಹಕಾರಿ ನಿ., ಹಣಮಸಾಗರ ಸಹಕಾರಿಯು ಪ.ಪೂ. ಶ್ರೀ ಶಿವಯ್ಯಾ ಮಹಾಸ್ವಾಮಿಗಳು, ಬಬಲಾದಿಮಠ, ಹಣಮಸಾಗರ ಇವರಿಂದ ಉದ್ಘಾಟನೆ.

ಇಂಡಿ : ಇಂಡಿ ತಾಲ್ಲೂಕಾ ವೀರಶೈವ ಲಿಂಗಾಯತ ಸೌಹಾರ್ದ ಸಹಕಾರಿ ನಿ., ಇಂಡಿ ಸಹಕಾರಿಯನ್ನು ಶೀ ಖೇಡಗಿ ವಿರಕ್ತ ಮಠದ ಶಿವಬಸವರಾಜೇಂದ್ರ ಶ್ರೀಗಳ ದಿವ್ಯ ಸಾನಿಧ್ಯದಲ್ಲಿ ಶ್ರೀ ಯಶವಂತರಾಯಗೌಡ ವಿ ಪಾಟೀಲ, ಶಾಸಕರು, ಇಂಡಿ ಇವರು ಉದ್ಘಾಟಿಸಿದರು.

ಮಳವಳ್ಳಿ : ಸಪ್ತಸಿರಿ ಸೌಹಾರ್ದ ಸಹಕಾರಿಯ ನೂತನ ಕಛೇರಿಯನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎ.ಕೃಷ್ಣಪ್ಪರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ.ಸಿ.ರಾಜುರವರು ಸಚಿವರನ್ನು ಸನ್ಮಾನಿಸಿದರು. ಸಹಕಾರಿಯ ನಿರ್ದೇಶಕರು ಹಾಗೂ ಸದಸ್ಯರು ಹಾಜರಿದ್ದರು.

ಕೊಪ್ಪ : ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪ ಸಹಕಾರಿಯ ನೂತನ ಶಾಖೆಯನ್ನು ಕೊಪ್ಪ ತಾಲ್ಲೂಕಿನ ಜಯಪುರದಲ್ಲಿ ಪ್ರಗತಿಪರ ಕೃಷಿಕರಾದ ಶ್ರೀ ಪ್ರಕಾಶ ತಲವಾನೆರವರು ಉದ್ಘಾಟಿಸಿದರು. ಪ್ರಗತಿಪರ ಕೃಷಿಕರಾದ ಶ್ರೀ ಎಂ.ಆರ್.ಪದ್ಮನಾಭ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎನ್.ವಿಶ್ವನಾಥ್ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಶಾಖೆ ಉದ್ಘಾಟನೆ : ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಸಿದ್ಧಾಪುರ ಸಹಕಾರಿಯ ಭಟ್ಕಳ ಶಾಖೆಯನ್ನು ಸದ್ಗುರು ಶ್ರೀ ಶ್ರೀ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ಶ್ರೀರಾಮ ಕ್ಷೇತ್ರ, ಧರ್ಮಸ್ಥಳ ಇವರಿಂದ ಉದ್ಘಾಟನೆ.

ಸಹಕಾರ ಸಪ್ತಾಹ ಆಚರಣೆ : ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯಲ್ಲಿ ದಿನಾಂಕ 14–11–2016 ರಿಂದ 20–11–2016ರವರೆಗೆ 63ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ.

ಸಹಕಾರ ಸಪ್ತಾಹ ಆಚರಣೆ

ಹೊಸಪೇಟೆ : ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಸಹಕಾರಿಯಲ್ಲಿ 63ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಅಧ್ಯಕ್ಷರಾದ ಶ್ರೀ ಎಂ. ನೀಲಕಂಠಯ್ಯರವರು ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಸಹಕಾರಿಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಹಕಾರ ಗೀತೆಯನ್ನು ಹಾಡಿದರು. ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಚಿಂತನ ಮಂಥನ ಕಾರ್ಯಕ್ರಮ

ಉಡುಪಿ : ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ವತಿಯಿಂದ ದಿನಾಂಕ 26.11.2016ರಂದು ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಚಿಂತನ ಮಂಥನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿಶೇಷವಾಗಿ ಕೇಂದ್ರ ಸರಕಾರವು ನಿಷೇಧಿಸಿರುವ ರೂ. 500 ಮತ್ತು 1000 ನೋಟಿನ ಬಗ್ಗೆ ಮತ್ತು ಮುಂದಿನ ವ್ಯವಹಾರವನ್ನು ಹೇಗೆ ನಡೆಸಬಹುದೆಂದು ಚರ್ಚಿಸಲಾಯಿತು.

ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಸ್.ಕೆ. ಇವರು ಮಾತನಾಡಿ ಮುಂದಿನ ದಿನಗಳಲ್ಲಿ ಸಹಕಾರಿಗಳು ಇನ್ನಷ್ಟು ಬಲಿಷ್ಠವಾಗುತ್ತವೆ ಎಂದು ತಿಳಿಸಿದರು. ಉಪಾಧ್ಯಕ್ಷರಾದ ಶ್ರೀ ಬಿ.ಮಧುಸೂದನ ನಾಯಕ್ ಇವರು ಮಾತನಾಡಿ ಸಹಕಾರಿಗಳು ಮುಕ್ತ ಚರ್ಚೆ ಮಾಡಬೇಕು ಎಂದರು.

ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಇದರ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಜಿ.ಎಸ್.ಸೋಮಯಾಜಿ ಇವರು

ಮಾತನಾಡಿ ಸಹಕಾರಿಗಳು ಸೂಕ್ತ ದಾಖಲೆಗಳನ್ನು ನಿರ್ವಹಿಸುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಸಾಯಿಗಣೇಶ್ ಸೌಹಾರ್ದ ಸಹಕಾರಿ ನಿ., ಉಡುಪಿ ಇದರ ನಿರ್ದೇಶಕರಾದ ಶ್ರೀ ಹೆಚ್.ಆರ್.ಶೆಣೈ, ಜಿಲ್ಲಾ ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಭುವನೇಶ್ ಪ್ರಭು, ನಿರ್ದೇಶಕರಾದ ಶ್ರೀ ಸುಧೀಶ್ ನಾಯಕ್, ಶ್ರೀ ವಿನಾಯಕ್ ರಾವ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 70ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸಿ, ಪ್ರಯೋಜನ ಪಡೆದರು.

ಸ್ವಚ್ಛ ಭಾರತ ಕಾರ್ಯಕ್ರಮ

ವಿಟ್ಲ : ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಇದರ ಸಹಸಂಸ್ಥೆಯಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸ್ವಚ್ಛ ಭಾರತ ಯೋಜನೆಯಡಿಯಲ್ಲಿ ದ.ಕ.ಜಿ.ಪಂ.ಮಾ.ಹಿ.ಪ್ರಾ. ಶಾಲೆ, ವಿಟ್ಲದಲ್ಲಿ ಭಾಲಾವಲೀಕಾರ್ ರಾಜಾಪುರ ಸಾರಸ್ವತ ಸಮಾಜ ಸೇವಾ ಸಂಘ, ವಿಟ್ಲ ಇದರ ಸಹಭಾಗಿತ್ವದೊಂದಿಗೆ ಶಾಲೆಯ ಆವರಣ, ವಿಟ್ಲ ಮುಖ್ಯರಸ್ತೆಯ ಇಕ್ಕೆಲ ಮತ್ತು ಆವರಣ ಗೋಡೆಯನ್ನು ಸ್ವಚ್ಛಗೊಳಿಸಲಾಯಿತು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 15ನೇ ಶಾಖೆಯ ಉದ್ಘಾಟನೆ

ಬೆಂಗಳೂರು : ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದರ್ಬೆ ಸಹಕಾರಿಯ 15ನೇ ಶಾಖೆಯು ದಿನಾಂಕ 06–11–2016 ರಂದು ಟಿ ದಾಸರಹಳ್ಳಿ, ಬೆಂಗಳೂರಿನಲ್ಲಿ ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರಾದ ಶ್ರೀ ಸದಾನಂದ ಗೌಡರಿಂದ ಉದ್ಘಾಟನೆಗೊಂಡಿತು.

ಶಾಖೆಯನ್ನು ಉದ್ಘಾಟಿಸಿ ಮಾತನಾಡಿದ ಸಚಿವರು ಶ್ರೀ ಸರಸ್ವತಿ ಸಹಕಾರಿಯು ಪುತ್ತೂರಿನಿಂದ ಬೆಂಗಳೂರಿನವರೆಗೆ ಬಂದು ತನ್ನ ವಿಶ್ವಾಸಾರ್ಹತೆ ಮತ್ತು ಸಹಕಾರಿಯ ನಗುಮೊಗದ ಸೇವೆಯಿಂದಲೇ ಯಶಸ್ವಿಯಾಗಿದೆ. ಇದು ಹೀಗೆಯೇ ಅಭಿವೃದ್ಧಿ ಹೊಂದಿ ದೇಶಾದ್ಯಂತ ಶಾಖೆಗಳನ್ನು ತೆರೆಯಲಿ, ಸರಸ್ವತಿಯ 150ನೇ ಶಾಖೆಯ ಉದ್ಘಾಟನೆಗೆ ನಾನು ಬರುತ್ತೇನೆ ಎಂಬ ಭರವಸೆಯ ಮಾತುಗಳೊಂದಿಗೆ ಸಂಸ್ಥೆಗೆ ಶುಭಹಾರೈಸಿದರು. ಟಿ.ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ, ಬೆಂಗಳೂರು ಉತ್ತರದ ಶಾಸಕರಾಗಿರುವ ಶ್ರೀ ಎಸ್ ಮುನಿರಾಜುರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್, ಬಿಬಿಎಂಪಿ ಕಾರ್ಪೋರೇಟರಾದ ಶ್ರೀ ನರಸಿಂಹ ನಾಯಕ್,

ಸುಬ್ರಮಣ್ಯ & ಕಂಪನಿಯ ಚಾರ್ಟರ್ಡ್ ಅಕೌಂಟೆಂಟ್ ಹಾಗೂ ಪಾಲುದಾರರಾದ ಶ್ರೀ ದೇವೇಂದ್ರ ನಾಯಕ್, ಸೌಂದರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹಾಗೂ ಸೌಂದರ್ಯ ವಿದ್ಯಾ ಸಂಸ್ಥೆಗಳು, ಬೆಂಗಳೂರು ಇದರ ಅಧ್ಯಕ್ಷರಾಗಿರುವ ಶ್ರೀ ಸೌಂದರ್ಯ ಪಿ ಮಂಜಪ್ಪ ಆಗಮಿಸಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್.ಸತೀಶ್ಚಂದ್ರರವರು ಸರ್ವರನ್ನೂ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕುಡ್ಲ ಸೌಹಾರ್ದ ಸಹಕಾರಿಯಿಂದ 'ಚಲೋ ಕುಡ್ಲ' ಆಪ್: ರಿಕ್ಷಾಗಳನ್ನು ಕ್ಯಾಶ್‌ಲೆಸ್

* ನಗದು ರಹಿತ ಸೇವೆ 2 ವಾರದಲ್ಲಿ ಆರಂಭ * ಪೇಟಿಎಂ ಮೂಲಕ ಹಣ ಪಾವತಿ

ಮಂಗಳೂರು: ರಿಕ್ಷಾ ಚಾಲಕರೇ ಕಟ್ಟಿದ ಕುಡ್ಲ ಸೌಹಾರ್ದ ಸಹಕಾರಿಯು ಗ್ರಾಹಕರಿಗೆ ನಗದು ರಹಿತ ಸೇವೆ ನೀಡುವ ಯೋಜನೆ ಜತೆಗೆ 'ಚಲೋ ಕುಡ್ಲ' ಆಪ್ ಮೂಲಕ ಗ್ರಾಹಕರನ್ನು ರಿಕ್ಷಾ ಸೇವೆಗೆ ಸೆಳೆಯಲು ಖಾಸಗಿ ಸಂಸ್ಥೆಯ ಜತೆಗೆ ರೂಪು ರೇಷೆ ಸಿದ್ಧಪಡಿಸುತ್ತಿದೆ. ಮಂಗಳೂರಿನ ಸುಮಾರು 200 ರಿಕ್ಷಾ ಚಾಲಕರು ಮುಂದಿನ ಎರಡೇ ವಾರದಲ್ಲಿ ಗ್ರಾಹಕರಿಗೆ ನಗದು ರಹಿತ ಸೇವೆಯನ್ನು ನೀಡಲು ಸಿದ್ಧರಾಗುತ್ತಿದ್ದಾರೆ.

ರಿಕ್ಷಾದಲ್ಲಿ ಪ್ರಯಾಣಿಸುವ ಪ್ರಯಾಣಿಕರು ಪೇಟಿಎಂ ಮೂಲಕ ಬಾಡಿಗೆ ಪಾವತಿಸಲು ಅನುಕೂಲವಾಗುವಂತೆ ಖಾಸಗಿ ಸಂಸ್ಥೆಯೊಂದು ತಾಂತ್ರಿಕವಾಗಿ ರಿಕ್ಷಾ ಚಾಲಕರನ್ನು ಸಿದ್ಧಗೊಳಿಸುವ ಕೆಲಸ ಮಾಡಲಿದೆ.

ಕುಡ್ಲ ಸೌಹಾರ್ದ ಸಹಕಾರಿಯು ಸ್ವಂತ ಆಪ್ 'ಚಲೋ ಕುಡ್ಲ'ವನ್ನು ಮುಂದಿನ ದಿನದಲ್ಲಿ ಹೊರತರಲು ಯೋಜನೆ ರೂಪಿಸಿದೆ. ಆಪ್‌ನ್ನು ಗ್ರಾಹಕರು ಡೌನ್‌ಲೋಡ್ ಮಾಡಿಕೊಂಡು ಇತರೆ ಖಾಸಗಿ ಟ್ಯಾಕ್ಸಿ ಸೇವೆಯಂತೆ ಬಳಸಬಹುದಾಗಿದೆ.

ಮುಂದೆ ಆಟೋ ಅಗ್ರಿ ಗ್ರೇಡ್ಸ್ ಮಾಡುವ ಮೂಲಕ ಚಲೋ ಕುಡ್ಲ ವ್ಯಾಲೆಟ್‌ನ್ನು ತರುವ ಯೋಜನೆ ಕೂಡ ನಡೆಯುತ್ತಿದ್ದು, ಈಗಾಗಲೇ ಆರ್‌ಬಿಐ (ಭಾರತೀಯ ರಿಸರ್ವ್ ಬ್ಯಾಂಕ್) ನಿಯಮ, ನಿಬಂಧನೆಗಳನ್ನು ಪೂರೈಸಿದ ನಂತರ ಚಲೋ ಕುಡ್ಲ ವ್ಯಾಲೆಟ್ ಕೂಡಾ ಗ್ರಾಹಕರಿಗೆ ಲಭ್ಯವಾಗಲಿದೆ.

ಮಂಗಳೂರಿನಲ್ಲಿ ಈಗಾಗಲೇ 6500ಕ್ಕಿಂತ ಅಧಿಕ ರಿಕ್ಷಾಗಳಿವೆ. ಅದರಲ್ಲಿ ಈಗ 800ಕ್ಕೂ ಅಧಿಕ ರಿಕ್ಷಾಗಳ ಚಾಲಕರು ಕುಡ್ಲ ಸೌಹಾರ್ದ ಸಹಕಾರಿಯಲ್ಲಿ ಸದಸ್ಯರಾಗಿದ್ದಾರೆ. ಈ ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಡಿಜಿಟಲ್ ಫೈನಾನ್ಸ್ ವಿಚಾರದಲ್ಲಿ ಶಿಕ್ಷಣ ನೀಡಿ ಅವರನ್ನು ಸ್ಮಾರ್ಟ್ ಡ್ರೈವರ್‌ಗಳನ್ನಾಗಿ ಮಾಡುವುದು ನಮ್ಮ ಮುಂದಿನ ಯೋಜನೆಯಾಗಿದೆ ಎಂದು ಕುಡ್ಲ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಕಾಶ್ ವಿ.ಎನ್. ಅವರು ತಿಳಿಸಿದ್ದಾರೆ.

ಕ್ಯಾಶ್ ಇಲ್ಲದೆ ಪಾವತಿ ಹೇಗೆ?

ಈಗಾಗಲೇ ಜಿಪಿಎಸ್ ಅಳವಡಿಸಿಕೊಂಡಿರುವ 200 ರಿಕ್ಷಾಗಳ ಚಾಲಕನ ಸೀಟಿನ ಹಿಂಬದಿಯಲ್ಲಿ ಪೇಟಿಎಂನ ಬಾರ್‌ಕೋಡ್, ಚಾಲಕನ ಮೊಬೈಲ್ ನಂಬರ್ ಡಿಸ್ ಪ್ಲೇ ಅಳವಡಿಸಲಾಗುತ್ತದೆ. ಪ್ರಯಾಣಿಕರು ಪೇಟಿಎಂ ಬಾರ್‌ಕೋಡ್‌ನ್ನು ಸ್ಕ್ಯಾನ್ ಮಾಡಿ ಅಲ್ಲಿಯೇ ಚಾಲಕನ ಮೊಬೈಲ್‌ಗೆ ಬಾಡಿಗೆ ಹಣವನ್ನು ಪಾವತಿಸಬಹುದು

ಶ್ರೀ ಜೋತೀಂದ್ರಭಾಯಿ ಮೆಹತಾ

ಶ್ರೀ ಜೋತೀಂದ್ರಭಾಯಿ ಮೆಹತಾ ಹಾಗೂ ಶ್ರೀ ಸತೀಶ್ ಮರಾಠೆಯವರು ಎನ್.ಸಿ.ಡಿ.ಸಿ. ಆಡಳಿತ ಮಂಡಲಿ ನಿರ್ದೇಶಕರಾಗಿ ನಾಮಕರಣ

ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರು ಹಾಗೂ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರು, ಹಿರಿಯ ಸಹಕಾರಿಗಳು ಆಗಿರುವ ಶ್ರೀ ಜೋತೀಂದ್ರಭಾಯಿ ಮೆಹತಾ ಹಾಗೂ ಸಹಕಾರ ಭಾರತಿಯ ಮಾಜಿ ಅಧ್ಯಕ್ಷರು, ಸಹಕಾರಿ ತಜ್ಞರು, ಕಳೆದ ಸಾಲಿನ ಇಫ್ಕೋ ಉಪನ್ಯಾಸ ಪ್ರಶಸ್ತಿ ಪುರಸ್ಕೃತರಾದ ಶ್ರೀ ಸತೀಶ್ ಮರಾಠೆ ಇವರನ್ನು ಕೇಂದ್ರ ಸರ್ಕಾರದ ಕೃಷಿ ಮತ್ತು ಸಹಕಾರ ಇಲಾಖೆಯ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಮಂಡಳಿ (ಎನ್.ಸಿ.ಡಿ.ಸಿ.)ಯ ಆಡಳಿತ ಮಂಡಲಿಗೆ ನಿರ್ದೇಶಕರಾಗಿ ನೇಮಕ ಮಾಡಿದೆ.

ಶ್ರೀ ಸತೀಶ್ ಮರಾಠೆ

ಸುಕೋ ಬ್ಯಾಂಕ್‌ನಿಂದ 3 ಹೊಸ ಯೋಜನೆ ಘೋಷಣೆ

* 1 ಲಕ್ಷ ರೂ. ಉಳಿತಾಯ ಹಣಕ್ಕೆ ಶೇ.6 ಬಡ್ಡಿ * ಮೊಬೈಲ್ ಮೂಲಕ ಸಾಲ ನೀಡಿಕೆ

ಬಳ್ಳಾರಿ : ಕೇಂದ್ರ ಸರ್ಕಾರ 500 ಮತ್ತು 1000 ರೂ. ನೋಟು ಅಮಾನ್ಯ ಮಾಡಿದ ನಂತರ ಸಹಕಾರಿ ಕ್ಷೇತ್ರದ ಮುಂಚೂಣಿಯಲ್ಲಿರುವ ಸುಕೋ ಬ್ಯಾಂಕ್, ಉಳಿತಾಯ ಖಾತೆಯಲ್ಲಿ 1 ಲಕ್ಷಕ್ಕೂ ಅಧಿಕ ಹಣ ಇಟ್ಟ ಗ್ರಾಹಕರಿಗೆ ಶೇ.6ರಷ್ಟು ಬಡ್ಡಿ, ಏಕ ಕಾಲದಲ್ಲಿ ಠೇವಣಿ ಇಟ್ಟು ಸಾಲ ಪಡೆಯುವ ಕ್ಯಾಷ್‌ಟ್ರ್ಯಾಕ್ ಹೈಬ್ರಿಡ್ ಯೋಜನೆ ಹಾಗೂ ಮೊಬೈಲ್ ಮೂಲಕ ಸಾಲ ನೀಡುವ ಯೋಜನೆ ರೂಪಿಸಿದೆ. ಇಂದಿನ ಬದಲಾದ ಆರ್ಥಿಕ ಪರಿಸ್ಥಿತಿಯಲ್ಲಿ ಸುಕೋ ಬ್ಯಾಂಕ್ ತನ್ನ ಗ್ರಾಹಕರ ನೆರವಿಗೆ ಮುಂದಾಗಿದೆ. ಗ್ರಾಹಕರ ಉಳಿತಾಯಕ್ಕೆ ಹೆಚ್ಚಿನ ಬಡ್ಡಿ ಮತ್ತು ಅಗತ್ಯವಿರುವಾಗಲೆಲ್ಲ ಹಣದ ವ್ಯವಸ್ಥೆ ಕಲ್ಪಿಸಲು ಮೂರು ವಿಶೇಷ ಯೋಜನೆ ರೂಪಿಸಿದೆ. ಗ್ರಾಹಕರು ಈ ಯೋಜನೆಗಳ ಲಾಭ ಪಡೆದುಕೊಳ್ಳಬೇಕು ಎಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿಯವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸುಕೋ ಬ್ಯಾಂಕಿನಿಂದ ಮೂರು ನೂತನ ಜನಸ್ನೇಹಿ ಯೋಜನೆಗಳನ್ನು ರೂಪಿಸಲಾಗಿದೆ. ಕೇಂದ್ರ ಸರ್ಕಾರ 500 ಹಾಗೂ 1000 ರೂ. ನೋಟು ಅಮಾನ್ಯ ಮಾಡಿದ ನಂತರ ದೈನಂದಿನ ವ್ಯವಹಾರದಲ್ಲಿ ಹಾಗೂ ವ್ಯಾಪಾರ ವಹಿವಾಟಿನಲ್ಲಿ ಹಣದ ಹರಿವಿನ ಪ್ರಮಾಣ ಕಡಿಮೆಯಾಗಿದೆ. ಜನರು ಬ್ಯಾಂಕ್‌ಗಳಲ್ಲಿ ರದ್ದುಗೊಂಡ ನೋಟುಗಳನ್ನು ಠೇವಣಿ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅವರ ಉಳಿತಾಯ ಖಾತೆಗೆ ಹೆಚ್ಚು ಬಡ್ಡಿ ನೀಡಬೇಕಾಗಿದ್ದನ್ನು ಮನಗಂಡು ಉಳಿತಾಯ ಖಾತೆಗೆ ಶೇ.4ರ ಬದಲಾಗಿ ಶೇ.6ರಷ್ಟು ಬಡ್ಡಿ ನೀಡಲು ಬ್ಯಾಂಕಿನ ಆಡಳಿತ ಮಂಡಲಿ ನಿರ್ಧರಿಸಿದೆ ಎಂದು ತಿಳಿಸಿದರು.

ಉಳಿತಾಯ ಖಾತೆ ತೆರೆಯಲು ಎಲ್ಲಾ ಶಾಖೆಗಳಲ್ಲಿ ಪ್ರತ್ಯೇಕ ಕೌಂಟರ್ ಆರಂಭಿಸಿದ್ದು, ಕೇವಲ ಹತ್ತು ನಿಮಿಷಗಳಲ್ಲಿ ಗ್ರಾಹಕರು ಉಳಿತಾಯ ಖಾತೆ ತೆರೆದು ಇನ್‌ಸ್ಟಂಟ್ ಡೆಬಿಟ್ ಕಾರ್ಡ್ ಪಡೆಯುವ ಜೊತೆಗೆ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯ ಪಡೆಯಬಹುದಾಗಿದೆ ಎಂದು ಮಾಹಿತಿ ನೀಡಿದರು.

ಕ್ಯಾಷ್‌ಟ್ರ್ಯಾಕ್ ಹೈಬ್ರಿಡ್ (ಠೇವಣಿ ಹಾಗೂ ಸಾಲ) ಯೋಜನೆ : ಅವಧಿ ಠೇವಣಿಗಳನ್ನಿಟ್ಟು ಹೆಚ್ಚಾಗಿ ಬಡ್ಡಿ ನಿರೀಕ್ಷಿಸುವ ಗ್ರಾಹಕರು ತುರ್ತು ಸಂದರ್ಭಗಳಲ್ಲಿ ಆ ಠೇವಣಿ ಮೇಲೆ ಸಾಲ ಪಡೆಯಲು ಬ್ಯಾಂಕಿಗೆ ಭೇಟಿ ನೀಡಬೇಕಾಗುತ್ತದೆ.

ಇಂತಹ ತುರ್ತು ಪರಿಸ್ಥಿತಿಗಳು ದಿನದ ಯಾವುದೇ ಸಮಯದಲ್ಲಿ ಬರಬಹುದು. ಆದ್ದರಿಂದ, ನಿಶ್ಚಿತ ಠೇವಣಿಯಲ್ಲಿಟ್ಟ ಹಣವೂ ಕೂಡ ಗ್ರಾಹಕರ ಸೇವೆಗೆ ತಕ್ಷಣ ಲಭ್ಯವಾಗುವಂತೆ ಈ ಕ್ಯಾಷ್‌ಟ್ರ್ಯಾಕ್ ಎಂಬ ಹೊಸ ಯೋಜನೆಯನ್ನು ಬ್ಯಾಂಕಿಂಗ್ ಕ್ಷೇತ್ರದಲ್ಲೇ ಪ್ರಥಮವಾಗಿ ಪರಿಚಯಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಈ ಕ್ಯಾಷ್‌ಟ್ರ್ಯಾಕ್ ನಿಶ್ಚಿತ ಠೇವಣಿ ಯೋಜನೆಯಡಿ ಗ್ರಾಹಕರು ವಿಶೇಷ ಡೆಬಿಟ್ ಕಾರ್ಡ್ ಪಡೆಯುತ್ತಾರೆ. ಅದರ ಮೂಲಕ ವರ್ಷದ 365 ದಿನಗಳು ದೇಶದ ಎಲ್ಲಾ ಎಟಿಎಂಗಳಲ್ಲಿ ಹಾಗೂ 10 ಲಕ್ಷಕ್ಕೂ ಹೆಚ್ಚು ಪಾಯಿಂಟ್ ಆಫ್ ಸೇಲ್ಸ್ ಕೇಂದ್ರಗಳಲ್ಲಿ ಅವರ ಠೇವಣಿಯ ಶೇ.75ರಷ್ಟು ಹಣ ಪಡೆದುಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಗ್ರಾಹಕರಿಗೆ ಅಗತ್ಯವಿರುವಾಗಲೆಲ್ಲ ಹಣ ಲಭ್ಯವಾಗುತ್ತದೆ ಮತ್ತು ಹೆಚ್ಚಿನ ಬಡ್ಡಿಯೂ ದೊರೆಯುತ್ತದೆ ಎಂದರು.

ಮೊಬೈಲ್ ಮೂಲಕ ಸಾಲ : ಅಗತ್ಯವಿರುವ ಗ್ರಾಹಕರಿಗೆ ವಿಳಂಬವಿಲ್ಲದೇ ಸಾಲ ನೀಡಲು ವಿಶೇಷ ಮೊಬೈಲ್ ಆಪ್‌ನ್ನು ಬಿಡುಗಡೆ ಮಾಡಿದೆ. ಇದರ ಮೂಲಕ ಸಾಲಕ್ಕೆ ಅರ್ಜಿ ಸಲ್ಲಿಸಿ, 48 ಗಂಟೆಗಳಲ್ಲಿ ಸಾಲ ಮಂಜೂರಾತಿ ಪಡೆಯಬಹುದಾಗಿದೆ. ಇಂತಹ ಸರಳ ಮತ್ತು ಶೀಘ್ರ ಸಾಲ ಮಂಜೂರಾತಿ ವ್ಯವಸ್ಥೆ ಜಾರಿಗೆ ತಂದಿರುವ ದೇಶದ ಪ್ರಥಮ ಸಹಕಾರಿ ಇದಾಗಿದೆ ಎಂದು ತಿಳಿಸಿದರು.

ನಿಮ್ಮ ಪ್ರಶ್ನೆ

ನಮ್ಮ ಉತ್ತರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

ಬಿ.ವಿ. ರವೀಂದ್ರನಾಥ
ಸನ್ನದು ಲೆಕ್ಕಪರಿಶೋಧಕರು, ಸಾಗರ.

ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾನೂನುಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಪ್ರಶ್ನೆಗಳು

ಶ್ರೀ ಬಿ.ವಿ.ರವೀಂದ್ರನಾಥ, ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಸಹಕಾರಿಗಳ ಲೆಕ್ಕಪತ್ರ ವ್ಯವಸ್ಥೆ, ಲೆಕ್ಕಪರಿಶೋಧನೆ ಮತ್ತು ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆಗಳ ವಿಷಯವಾಗಿ ಸಹಕಾರಿಗಳಲ್ಲಿ ಪದೇ ಪದೇ ಉದ್ಭವಿಸುವ ಕೆಲವು ಪ್ರಶ್ನೆಗಳಿಗೆ ಉತ್ತರ ನೀಡಿರುವುದನ್ನು ಹಿಂದಿನ ಸಂಚಿಕೆಯ ಮುಂದುವರೆದ ಭಾಗದಲ್ಲಿ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಪ್ರಶ್ನೆ 1 : ಸಾದಿಲ್ವಾರು ವೆಚ್ಚವೆಂದರೇನು? ಅದಕ್ಕೆ ಮಿತಿಯಿದೆಯೇ?

ಉತ್ತರ : ಪದೇಪದೇ ಬರದ, ಮೊತ್ತದಲ್ಲಿ ಗೌಣವಾಗಿರುವ, ಅದಕ್ಕಾಗಿ ಪ್ರತ್ಯೇಕ ಖಾತೆಯಿರದ ಮತ್ತು ಪ್ರತ್ಯೇಕ ಖಾತೆ ಹೊಂದುವುದು ಅಪೇಕ್ಷಣೀಯವಲ್ಲದ ಖರ್ಚುಗಳಿಗೆ ಸಾದಿಲ್ವಾರು ವೆಚ್ಚವೆನ್ನುತ್ತಾರೆ. ಒಟ್ಟು ಸಾದಿಲ್ವಾರು ವೆಚ್ಚಗಳು ಒಟ್ಟು ಆದಾಯದ ಶೇ.2ರಷ್ಟನ್ನು ಮೀರಬಾರದು.

ಪ್ರಶ್ನೆ 2 : ವ್ಯಾಪ್ತಿ ಮೀರಿ ವ್ಯವಹರಿಸಿದರೆ ಆಗುವ ಪರಿಣಾಮವೇನು?

ಉತ್ತರ : ಸಹಕಾರಿಯ ಚಟುವಟಿಕೆಗಳಿಗೆ ಉಪವಿಧಿಯನ್ವಯ ವ್ಯಾಪ್ತಿ ನಿಗದಿಯಾಗಿರುತ್ತದೆ. ಆ ವ್ಯಾಪ್ತಿಯನ್ನು ಮೀರಿ ವ್ಯವಹರಿಸಿದರೆ ಕಾಯ್ದೆಯ ಉಲ್ಲಂಘನೆಯಾಗುತ್ತದೆ. ಅಂತಹ ಚಟುವಟಿಕೆಗಳಿಗೆ ಕಾನೂನಿನ ಮಾನ್ಯತೆ ಇರುವುದಿಲ್ಲ. ಅಂತಹ ಚಟುವಟಿಕೆಗಳಿಂದುಂಟಾಗುವ ವ್ಯಾಜ್ಯಗಳನ್ನು ಪಂಚಾಯಿತಿಯಲ್ಲಿ ಪರಿಹರಿಸಿಕೊಳ್ಳಲು ಬರುವುದಿಲ್ಲ. ಅಂತಹ ಚಟುವಟಿಕೆಗಳಿಗೆ ಅನುವು ಮಾಡಿಕೊಟ್ಟ ಆಡಳಿತ ಮಂಡಲಿ, ಅಧಿಕಾರಿಗಳು ಶಿಸ್ತುಕ್ರಮಗಳಿಗೆ ಒಳಪಡುತ್ತಾರೆ.

ಪ್ರಶ್ನೆ 3 : ಸದಸ್ಯೇತರರೊಂದಿಗೆ ವ್ಯವಹರಿಸಿದರೆ ಆಗುವ ಪರಿಣಾಮಗಳೇನು?

ಉತ್ತರ : ಸಹಕಾರಿಗಳು ಪತ್ತಿನ ಚಟುವಟಿಕೆಗಳನ್ನು ಸದಸ್ಯೇತರರೊಂದಿಗೆ ನಡೆಸುವಂತಿಲ್ಲ. ಅಂತಹ ಚಟುವಟಿಕೆಗಳಿಗೆ ಆರ್.ಬಿ.ಐ. ಅನುಮತಿ ಅಗತ್ಯವಿರುತ್ತದೆ. ಅಂತಹ ಚಟುವಟಿಕೆಗಳಿಗೆ ಅನುವು ಮಾಡಿಕೊಟ್ಟ ಆಡಳಿತ ಮಂಡಲಿ, ಅಧಿಕಾರಿಗಳು ಆರ್.ಬಿ.ಐ. ನಿಂದ ಶಿಸ್ತುಕ್ರಮಗಳಿಗೆ ಒಳಪಡುತ್ತಾರೆ.

ಪ್ರಶ್ನೆ 4 : ನಿಯಮಮೀರಿ ವ್ಯವಹರಿಸಿದರೆ ಆಗುವ ಪರಿಣಾಮವೇನು?

ಉತ್ತರ : ಸಹಕಾರಿಗಳ ಚಟುವಟಿಕೆಗಳಿಗೆ ಕಾಯ್ದೆ, ಉಪವಿಧಿಗಳು ಮತ್ತು ನಿಯಮಗಳು ಎಂಬ ಮೂರು ಚೌಕಟ್ಟುಗಳಿರುತ್ತವೆ. ನಿಯಮಗಳನ್ನು ಸಹಕಾರಿಗಳು ತಾವೇ ರೂಪಿಸಿಕೊಂಡು ಸಾಮಾನ್ಯ ಸಭೆಯಲ್ಲಿ ಅನುಮೋದಿಸಿಕೊಂಡು ಜಾರಿಗೆ ತಂದವುಗಳಾದ್ದರಿಂದ ಅವುಗಳ ಪಾಲನೆ ಆಡಳಿತ ಮಂಡಲಿಯ ಮತ್ತು ಪ್ರತಿಯೊಬ್ಬ ಅಧಿಕಾರಿ/ಸಿಬ್ಬಂದಿಗಳ ಕರ್ತವ್ಯವಾಗಿರುತ್ತದೆ. ಅವುಗಳ ಉಲ್ಲಂಘನೆ ಅವರ ಅನರ್ಹತೆಗೆ ಕಾರಣವಾಗಬಹುದು. ಅವರ ಮೇಲಿನ ಶಿಸ್ತುಕ್ರಮಗಳಿಗೆ ಅರ್ಹವಾಗುತ್ತವೆ.

ಪ್ರಶ್ನೆ 5 : ಸಾಮಾನ್ಯ ಸದಸ್ಯ – ಸಹಸದಸ್ಯ – ನಾಮಮಾತ್ರ ಸದಸ್ಯ ಇವುಗಳ ನಡುವಿನ ವ್ಯತ್ಯಾಸಗಳೇನು?

ಕ್ರ.ಸಂ.	ವಿವರಗಳು	ಸಾಮಾನ್ಯ	ಸಹ	ನಾಮಮಾತ್ರ
1.	ಶೇರು ಹಣ	100–00	100–00	5 ರಿಂದ 50
2.	ಸಾಲ ಪಡೆಯುವ ಅರ್ಹತೆ	√	√	√
3.	ಠೇವಣಿ ಇಡುವ ಅರ್ಹತೆ	√	√	X
4.	ಡಿವಿಡೆಂಡ್ ಪಡೆಯುವ ಹಕ್ಕು	√	√	X
5.	ಶೇರು ಹಣ ಮರುಪಾವತಿ	√	√	X
6.	ಮತ ಚಲಾಯಿಸುವ ಹಕ್ಕು	√	X	X
7.	ಸಾಮಾನ್ಯ ಸಭೆಗೆ ಹಾಜರಾಗುವ ಹಕ್ಕು	√	X	X
8.	ಲೆಕ್ಕ ಪತ್ರಗಳ ವಿವರ ಪಡೆಯುವ ಹಕ್ಕು	√	X	X
9.	ಚುನಾವಣೆಗೆ ಸ್ಪರ್ಧಿಸುವ ಹಕ್ಕು	√	X	X
10.	ಶೇರು ಪತ್ರ ಕೊಡಬೇಕೆ?	√	X	X
11.	ಗುರುತಿನ ಚೀಟಿ ನೀಡಬೇಕೆ?	√	X	X

ಕರ್ನಾಟಕ ರಾಜ್ಯ ಸಹಕಾರ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ಸಂಘದ ಪದಾಧಿಕಾರಿಗಳ ಅವಿರೋಧ ಆಯ್ಕೆ

ಶ್ರೀ ಬಿ.ಸಿ. ಸತೀಶ್
ಅಧ್ಯಕ್ಷರು

ಶ್ರೀ ಹೆಚ್.ಸಿ. ಜೋಷಿ
ಉಪಾಧ್ಯಕ್ಷರು

ಶ್ರೀ ಕೆ.ಡಿ. ಮಾದಯ್ಯ
ಕಾರ್ಯದರ್ಶಿ

ಶ್ರೀಮತಿ ಎಲ್. ಸರಳ
ಸಹಾಯಕ ಕಾರ್ಯದರ್ಶಿ

ಶ್ರೀ ಎಸ್.ವಿ. ಬಸವರಾಜಪ್ಪ
ಖಜಾಂಚಿ

ಆಡಳಿತ ಮಂಡಳಿ ನಿರ್ದೇಶಕರು

ಶ್ರೀ ಗುರುಸ್ವಾಮಿ

ಶ್ರೀ ಅಶ್ವತ್ಥ ನಾರಾಯಣ

ಶ್ರೀ ಪ್ರಸಾದ್ ರೆಡ್ಡಿ

ಡಾ. ಸುರೇಶ್‌ಗೌಡ

ಶ್ರೀ ಎಂ.ಪಿ. ಮಂಜುನಾಥ್

ಶ್ರೀ ರಾಜು

ಶ್ರೀ ಎಸ್.ಸಿ. ಕುಂಬಾರ್

ಶ್ರೀ ಎನ್.ಲಕ್ಷ್ಮಣ

ಶ್ರೀ ಲಿಯಾಖತ್ ಅಲಿ

ಶ್ರೀಮತಿ ಗೀತಾ ಕರುಣಾಕರ ಬಾಬು
ಪದನಿಮಿತ್ತ ನಿರ್ದೇಶಕರು

ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ : ಸಹಕಾರಿಗಳ ಲಾಭಾಂಶದಲ್ಲಿ ಶೇ.0.50ನ್ನು ಸಹಕಾರ ಅಕಾಡೆಮಿಗೆ ಪಾವತಿಸುವ ಪ್ರಾವಧಾನ

ಕರ್ನಾಟಕ ಸರ್ಕಾರ 2016ರ ವಿಧಾನ ಸಭೆ ವಿಧೇಯಕ ಸಂಖ್ಯೆ 43 ಕರ್ನಾಟಕ ವಿಧಾನ ಸಭೆಯಲ್ಲಿ ಅಂಗೀಕಾರವಾದಂತೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997ರ 10ನೇ ಪ್ರಕರಣದ (2ನೇ ಉಪ ಪ್ರಕರಣದಲ್ಲಿನ) (xxi) ಖಂಡದಲ್ಲಿ (ಎ) ಉಪ ಖಂಡದ ತರುವಾಯ (ಎ-ಎ) ಸೇರಿಸಿ ಸಹಕಾರ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಪ್ರಾಯೋಜಿಸಿರುವ ಮತ್ತು ಕರ್ನಾಟಕ ಸೊಸೈಟಿಗಳ ಅಧಿನಿಯಮ, 1960ರಡಿಯಲ್ಲಿ ನೋಂದಾಯಿಸಿದ ಸಹಕಾರ ಅಕಾಡೆಮಿ (ನೋಂ.), ಮೈಸೂರು ಇದಕ್ಕೆ ಶೇ.0.50ನ್ನು ಸೌಹಾರ್ದ ಸಹಕಾರಿಗಳು ಪಾವತಿಸಬೇಕು ಎಂದು ಪ್ರಾವಧಾನ ಮಾಡಲಾಗಿದೆ.

ನೋಟು ರದ್ಧತಿ ಮತ್ತು ಸಹಕಾರ ಬ್ಯಾಂಕುಗಳು

ಎಂ.ಎನ್. ಅಶ್ವತ್ಥನಾರಾಯಣ, 9945568936, mnanarayana@gmail.com.

ಪಟ್ಟಣ ಬ್ಯಾಂಕುಗಳ ಹರವು ಮತ್ತು ಗಾತ್ರ ಜಾಸ್ತಿ ಇರುವ ಕೇರಳದಲ್ಲಿ ಇದರ ಬಿಸಿ ತುಂಬಾನೇ ತಟ್ಟಿದೆಯಂತೆ. ರಿಸರ್ವ್ ಬ್ಯಾಂಕಿನ ಧೋರಣೆಗಳನ್ನು ಖಂಡಿಸಿ ಅಲ್ಲಿ ಬಹಳ ಜೋರಾಗಿ ಪ್ರತಿಭಟನೆಗಳು ನಡೆದಿರುವ ಬಗ್ಗೆ ವರದಿಗಳು ಬಂದಿವೆ. ಗುಜರಾತಿನಲ್ಲಿ ಕೆಲವರು ಈ ಬಗ್ಗೆ ನ್ಯಾಯಾಲಯದ ಮೊರೆ ಹೋಗಿದ್ದಾರೆ.

2016ನೆಯ ಇಸವಿಯ ನವೆಂಬರ್ 8ನೆಯ ತಾರೀಖು ನಮ್ಮ ದೇಶದ ಹಣಕಾಸಿನ ವಿಷಯದಲ್ಲಿ, ಅದರ ಮೂಲಕ ಕೋಟ್ಯಂತರ ಜನಗಳ ಇಡೀ ಜೀವನದ ವಿಷಯದಲ್ಲಿ ಒಂದು ಕ್ರಾಂತಿ ಪರ್ವಕ್ಕೆ ನಾಂದಿ ಹಾಡಿತು. ಒಂದು ಸಾವಿರ ಹಾಗೂ ಐನೂರು ಮುಖಬೆಲೆಯ ನೋಟುಗಳ ರದ್ಧತಿ ಹಾಗೂ ಇದರಿಂದ ಅಲ್ಲೋಲ ಕಲ್ಲೋಲವಾದ ಜನಜೀವನ ನವೆಂಬರ್ ಅಂತ್ಯಕ್ಕೆ ಸಹ ಸಹಜ ಸ್ಥಿತಿಗೆ ಬಂದಿಲ್ಲ; ಸಹಜ ಸ್ಥಿತಿ ಇನ್ನೂ ದೂರವೇ ಉಳಿದಿದೆ. ಹೊಸ ನೋಟುಗಳ ಮುದ್ರಣ ಮತ್ತು ಸರಬರಾಜು ನಿರೀಕ್ಷೆಗಿಂತ ಬಹಳ ತಡವಾಗುತ್ತಿದೆ. ರದ್ಧತಿ ನಿರ್ಧಾರ ಧೀರವಾದದ್ದಾರೂ, ಅದರ ಜಾರಿಯಲ್ಲಿ ಇರಬೇಕಾದ ಸಕ್ಷಮತೆ ಜನಸಾಮಾನ್ಯರಿಗೆ ಕಾಣುತ್ತಿಲ್ಲ.

ರದ್ಧತಿ ಜಾರಿಯ ಹೊಣೆ ಬ್ಯಾಂಕುಗಳ ಮೇಲೆ ಬಿದ್ದಿದೆ. ಇವು ಮೊದಲ 15 ದಿನಗಳು ರಜೆಗಳು ಇಲ್ಲದೇ ಕೆಲಸ ಮಾಡಿದವು. ಎಲ್ಲಾ ಜನಗಳೂ ತಮ್ಮ ತಮ್ಮ ಬ್ಯಾಂಕುಗಳ ಮುಂದೆ ಹೋಗಿ ನಿಂತರು. ಆಗ ಬೇರೆ ಬೇರೆ ಬ್ಯಾಂಕುಗಳಲ್ಲಿನ ಅಂತರ ಎದ್ದು ಕಾಣತೊಡಗಿತು. ಬೆಂಗಳೂರಿನಲ್ಲಿ ಎಸ್.ಬಿ.ಐ., ಕೆನರಾ ಬ್ಯಾಂಕ್ ಮುಂತಾದವು ಭಾರೀ ಜನ ಪ್ರವಾಹಗಳನ್ನು ಎದುರಿಸಿದವು. ಖಾಸಗಿ ಬ್ಯಾಂಕುಗಳಲ್ಲಿ ಅವುಗಳಷ್ಟು ದೊಂಬಿ ಇರಲಿಲ್ಲ. ಕೆಲವು ಹೊಸ ಖಾಸಗಿ ಬ್ಯಾಂಕುಗಳಲ್ಲಿಯಂತೂ ಅವುಗಳ ಗ್ರಾಹಕರು ನೋಟು ಬದಲಾವಣೆ ಹಾಗೂ ಹಣ ಹಿಂತೆಗೆತಗಳನ್ನು ಬಹಳ ಸುಲಭವಾಗಿಯೇ ಮಾಡಿಕೊಂಡರು. ಏಕೆಂದರೆ ತುಂಬಾ ಕಡಿಮೆ ಜನ.

ಇನ್ನೂ ಮೂರನೆಯ ಪರಿಸ್ಥಿತಿ ಎಂದರೆ, ಸಹಕಾರಿ ಬ್ಯಾಂಕುಗಳದ್ದು. ತಮ್ಮ ಹಣವನ್ನು ತಮ್ಮ ಖಾತೆಗಳಿಂದ ಹಿಂತೆಗೆದುಕೊಳ್ಳಲು ಸಹಕಾರ ಬ್ಯಾಂಕುಗಳ ಗ್ರಾಹಕರು ಬೇರೆ ಬ್ಯಾಂಕುಗಳ ಗ್ರಾಹಕರಿಗಿಂತ ಹೆಚ್ಚು ತೊಂದರೆ ಅನುಭವಿಸಬೇಕಾಯಿತು. ಸರ್ಕಾರ ವಿಧಿಸಿದ ಮಿತಿಗಳ ಒಳಗೆ ಹಣ ಡ್ರಾ ಮಾಡಿಕೊಳ್ಳಲು ಸಹ ಅವರಿಗೆ ಸಾಧ್ಯವಾಗಲಿಲ್ಲ. ಇತರ ಬ್ಯಾಂಕುಗಳಿಗೆ ನಗದು ಹಣ ಒದಗಿಸಿದ ಪ್ರಮಾಣದಲ್ಲಿ ಸಹಕಾರ ಬ್ಯಾಂಕುಗಳಿಗೆ ರಿಸರ್ವ್ ಬ್ಯಾಂಕು ಹಣ ಪೂರೈಕೆ ಮಾಡಲಿಲ್ಲ ಎಂಬುದು ಕೇಳಿ ಬರುತ್ತಿದ್ದ ಮಾತು.

ಕಾರಣಗಳು ಏನೇ ಇರಲಿ, ಇದರಿಂದಾಗಿ ಸಹಕಾರ ಬ್ಯಾಂಕುಗಳ ಬಹಳ ಗ್ರಾಹಕರಿಗೆ ಸಹಕಾರ ಬ್ಯಾಂಕ್ ಒಂದನ್ನೇ ನಂಬುವಂತೆ ಇಲ್ಲ ಎಂದು ಅನಿಸಿದ್ದರೆ ಆಶ್ಚರ್ಯವಿಲ್ಲ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗಂತೂ ನೋಟುಗಳ ವಿನಿಮಯಕ್ಕೆ ಸಹ ರಿಸರ್ವ್ ಬ್ಯಾಂಕು ಅವಕಾಶ ನೀಡಲಿಲ್ಲ. ಒಟ್ಟಿನಲ್ಲಿ ಇವೆಲ್ಲವೂ ಸಹಕಾರ ಬ್ಯಾಂಕುಗಳ ಪ್ರತಿಷ್ಠೆಗೆ ಒಂದು ದೊಡ್ಡ ಪೆಟ್ಟು ಕೊಡುವ ವಿಷಯ.

ಪಟ್ಟಣ ಬ್ಯಾಂಕುಗಳ ಹರವು ಮತ್ತು ಗಾತ್ರ ಜಾಸ್ತಿ ಇರುವ ಕೇರಳದಲ್ಲಿ ಇದರ ಬಿಸಿ ತುಂಬಾನೇ ತಟ್ಟಿದೆಯಂತೆ. ರಿಸರ್ವ್ ಬ್ಯಾಂಕಿನ ಧೋರಣೆಗಳನ್ನು ಖಂಡಿಸಿ ಅಲ್ಲಿ ಬಹಳ ಜೋರಾಗಿ ಪ್ರತಿಭಟನೆಗಳು ನಡೆದಿರುವ ಬಗ್ಗೆ ವರದಿಗಳು ಬಂದಿವೆ. ಗುಜರಾತಿನಲ್ಲಿ ಕೆಲವರು ಈ ಬಗ್ಗೆ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಪಟ್ಟಣ ಬ್ಯಾಂಕುಗಳ ಬಗ್ಗೆ ರಿಸರ್ವ್ ಬ್ಯಾಂಕು ಮೊದಲಿನಿಂದಲೂ ಅನುಮಾನದಿಂದಲೇ ನೋಡುತ್ತಿದೆ. ಷೆಡ್ಯೂಲ್ಡ್ ಬ್ಯಾಂಕ್ ಆಗಲು ಅರ್ಹತೆ ಪಡೆದು ವರ್ಷಗಟ್ಟಲೆ ಕಾದರೂ ಆ ಪಟ್ಟ ಸಿಗುವುದಿಲ್ಲ. ಹೊಸ ಶಾಖೆಗಳನ್ನು ತೆರೆಯಲು ಅನುಮತಿ ಸಿಗುವುದು ಕಷ್ಟ. ಇವೆಲ್ಲವೂ ತಿಳಿದ ವಿಷಯವೇ ಆಗಿದೆ.

ರಿಸರ್ವ್ ಬ್ಯಾಂಕಿಗೂ ತಿಳಿದಿರುವ ಒಂದು ವಿಷಯ ಎಂದರೆ ಸಹಕಾರ ಬ್ಯಾಂಕುಗಳು ಹೆಚ್ಚು ಜನಸ್ನೇಹಿ ಬ್ಯಾಂಕುಗಳು. ಆದರೆ, ವಾಣಿಜ್ಯ ಬ್ಯಾಂಕುಗಳಲ್ಲಿ ಇರುವ ಅತ್ಯಾಧುನಿಕ ವಿಶೇಷವಾಗಿ ಇ–ಸೌಲಭ್ಯ (ಎಂದರೆ ಕಂಪ್ಯೂಟರೀಕೃತ)ಗಳು ಇಲ್ಲಿ ಕಡಿಮೆ. ಆಧುನಿಕ ವಿಧಾನಗಳಿಗೆ ಹೊಂದಿಕೊಳ್ಳಲು ಕಷ್ಟವಾಗುವ ಜನಗಳಿಗೆ ಅದರಲ್ಲೂ ಮಧ್ಯ ವಯಸ್ಕರು, ಹಿರಿಯರು, ಕಂಪ್ಯೂಟರ್ ಶಿಕ್ಷಣ ಇಲ್ಲದವರು ಮುಂತಾದವರಿಗೆ ಸಹಕಾರ ಬ್ಯಾಂಕುಗಳು ಹೆಚ್ಚು ಅನುಕೂಲಕರವಾಗಿ ಕಾಣುತ್ತದೆ.

ಆದರೆ, ಪರಿಸ್ಥಿತಿ ಹೇಗಿದೆ ಎಂದರೆ ಈ ಜನಸ್ನೇಹಿ ಅಂಶ ಮರೆಯಾಗಿ ಬಿಡುತ್ತದೆ. ಬೇರೆ ಪ್ರತಿಕೂಲ ವಿಷಯಗಳು ಎದ್ದು ಕಾಣುತ್ತವೆ. ಸಹಕಾರ ಬ್ಯಾಂಕುಗಳು ರಾಜಕೀಯ ಹತೋಟಿಯಲ್ಲಿ ಇರುತ್ತವೆ. ಅವುಗಳ ಆಡಳಿತ ಮಂಡಲಿ ಚುನಾವಣೆಗಳು ಜೋರಾಗಿ ನಡೆಯುತ್ತವೆ. ಚುನಾವಣೆ ಎಂದರೆ ಹಣದ ಹೊಳೆ ಎಂಬುದು ನಮ್ಮ ದೇಶದಲ್ಲಿ ಜನಜನಿತವಾಗಿದೆ. ಹೊಳೆ ಎಂದರೆ ನಗದು ಹಣದ ಹೊಳೆ. ಈ ಹೊಳೆ ಹರಿಸುವವರು ಸಿರಿವಂತರು. ಆದ್ದರಿಂದ, ಸಹಕಾರ ಬ್ಯಾಂಕುಗಳು ಸಿರಿವಂತರ ಬ್ಯಾಂಕುಗಳು ಎಂಬ ಅಭಿಪ್ರಾಯಗಳನ್ನು ನಾನು ಕಂಡಿದ್ದೇನೆ.

ಇತ್ತೀಚಿನವರೆಗೂ ಜನಗಳಲ್ಲಿ ಒಂದು ಅಭಿಪ್ರಾಯ ಇತ್ತು. ಅದೆಂದರೆ, ಸಹಕಾರ ಬ್ಯಾಂಕುಗಳಲ್ಲಿ ಠೇವಣಿ ಇಟ್ಟರೆ ತೆರಿಗೆ ಇಲ್ಲ ಎಂದು. ಬಡ್ಡಿಯ ಮೇಲೆ ಬರುವ ಆದಾಯ ತೆರಿಗೆಯನ್ನು ಭಾರತ ಸರ್ಕಾರಕ್ಕೆ ಕಟ್ಟುವ ಕೆಲಸವನ್ನು ಬಹಳ ಸಹಕಾರ ಬ್ಯಾಂಕುಗಳು ಇತ್ತೀಚಿನವರೆಗೂ ಮಾಡುತ್ತಿರಲಿಲ್ಲ. ತೆರಿಗೆ ಕಟ್ಟುವ ಜವಾಬ್ಧಾರಿ ಪೂರ್ತಿ ಠೇವಣಿದಾರನದೇ ಆಗಿರುತ್ತಿತ್ತು. ಮೂಲದಲ್ಲೇ ತೆರಿಗೆ ಕಡಿತ ಇಲ್ಲದಿರುವ ಈ ವ್ಯವಸ್ಥೆಯು ಜನಗಳಿಗೆ ಆಕರ್ಷಕವಾಗಿ ಕಾಣುತ್ತಿತ್ತು. ಇದು ನಮ್ಮ ಜನಗಳ ಒಂದು ಸ್ವಭಾವವೇ ಅಲ್ಲವೇ! 'ಟ್ಯಾಕ್ಸ್ ಯಾಕೆ? ಉಂಡಂಗಲ್ಲ ತಿಂದಂಗಲ್ಲ' ಎನ್ನುತ್ತಾರೆ. ಆದರೆ ನಮ್ಮ ಬುದ್ಧಿವಂತ ಜನಕ್ಕೆ ತೆರಿಗೆಗಳ್ಳತನ ತಪ್ಪು ಎಂಬುದೂ ಗೊತ್ತಿದೆ. ಅವರು ಸಹಕಾರ ಬ್ಯಾಂಕುಗಳನ್ನು ಬಳಸಿಕೊಳ್ಳುತ್ತಿದ್ದಾರೆ ಅಷ್ಟೇ. ಕೆಲವು ವರ್ಷಗಳ ಹಿಂದೆ ಒಬ್ಬ ಪ್ರಸಿದ್ಧ ನಿರ್ದೇಶಕರ ಜನಪ್ರಿಯ ಧಾರವಾಹಿ ಬರುತ್ತಿತ್ತು. ಅದರಲ್ಲಿ ಒಂದು ಮುಖ್ಯ ಪಾತ್ರ ವಕೀಲ – ಒಂದು ಪ್ರಸಂಗದಲ್ಲಿ ಹೇಳುತ್ತದೆ "....ತುಂಬಾ ದುಡ್ಡೇ? ಕೋ–ಆಪರೇಟಿವ್ ಬ್ಯಾಂಕಿನಲ್ಲಿ ಹಾಕಿಬಿಡಪ್ಪ, ಸೇಫು' ಎನ್ನುತ್ತದೆ. ಸಹಕಾರ ಬ್ಯಾಂಕು ಎಂದರೆ ಹಣದ ಮೂಲ ಕೇಳದ ತೆರಿಗೆ ಮುರಿಯದ ವ್ಯವಸ್ಥೆ ಎಂಬ ಅಭಿಪ್ರಾಯ ಅಷ್ಟು ವ್ಯಾಪಕವಾಗಿದೆ. ರಿಸರ್ವ್ ಬ್ಯಾಂಕಿನ ಧೋರಣೆಯ ಹಿಂದೆಯೂ ಈ ಅಭಿಪ್ರಾಯವೇ ಇರಬಹುದು. ಆದರೆ, ಸಹಕಾರ ಬ್ಯಾಂಕುಗಳ ಜನಸ್ನೇಹಿ ಗುಣವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಗ್ರಾಮಾಂತರ ಮತ್ತು ಸಣ್ಣ ಪುಟ್ಟ ಪಟ್ಟಣಗಳಲ್ಲಿ ಈ ಬ್ಯಾಂಕ್‌ಗಳಿಗೆ ಇರುವ ಹರವು ಮತ್ತು ಪ್ರಭಾವ ರಿಸರ್ವ್ ಬ್ಯಾಂಕಿಗೂ ತಿಳಿದಿದೆ. ಈ ಪ್ರದೇಶಗಳಲ್ಲಿ 40

▸▸ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಡಿವಿಜಿಯವರು ತಮ್ಮ ಅಪರಿಮಿತ ಕಲ್ಪನಾದೃಷ್ಟಿ ಹಾಗೂ ಸಂಪದ್ಭರಿತ ಪಾರಮಾರ್ಥಿಕ ಜ್ಞಾನದಿಂದ ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತಗಳನ್ನು ಆಳವಾಗಿ ಬಲ್ಲವರಾಗಿದ್ದು, ವ್ಯಕ್ತಿ ವ್ಯಕ್ತಿಗಳ ಪರಸ್ಪರ ಸಹಕಾರದಂತೆಯೇ ಮಾನವನ ಪಂಚೇಂದ್ರಿಯಗಳಲ್ಲೊಂದಾದ ಕಣ್ಣಿಗೂ ಜಗತ್ತಿನ ಕಣ್ಣೆನಿಸಿಕೊಂಡಿರುವ ಸೂರ್ಯದೇವನಿಗೂ ಇರುವ ಅನ್ಯೋನ್ಯತೆಯನ್ನು ಕೆಳಗಿನ ಪದ್ಯದಲ್ಲಿ ಪ್ರಸ್ತಾಪಿಸಿರುತ್ತಾರೆ.

"ಕಣ್ಣಿರದೆ ರವಿಯೇನು ರವಿಯಿರದೆ ಕಣ್ಣೇನು
ಅನ್ಯೋನ್ಯ ಸಹಕೃತಿಯಿನುಭಯ ಸಾರ್ಥಕತೆ
ನಿನ್ನಾತ್ಮ ಜಗದಾತ್ಮಕಂಥ ಸಂಬಂಧಗಳವು
ವಹ್ನಿಸ್ಪುಲಿಂಗಗಳೊ ಮಂಕುತಿಮ್ಮ"

ಮಾನವನು ಭಗವಂತನ ಅತ್ಯುತ್ಕೃಷ್ಟ ತಯಾರಿ. ಇತರೇ ಪ್ರಾಣಿಗಳಿಗಿಂತ ತೀರಾ ವಿಭಿನ್ನ. ಈತನ ದೇಹದ ವಿವಿಧ ಅಂಗಗಳಲ್ಲಿ ಅತಿ ಮುಖ್ಯವೆನಿಸಿದ ಕಣ್ಣಿನಿಂದ ಸಕಲ ಜಗತ್ತನ್ನು ವೀಕ್ಷಿಸಿ ಅನುಭವ ಪಡೆಯುತ್ತಾನೆ. ಹೀಗೆ ಕಣ್ಣಿನಿಂದ ಜಗತ್ತನ್ನು ವೀಕ್ಷಿಸಿ ಅನುಭವ ಪಡೆಯಬೇಕಾದರೆ "ರವಿ"ಯ ಸಹಕಾರ ಅತ್ಯಗತ್ಯ. ಸೂರ್ಯನಿಲ್ಲದಿದ್ದಲ್ಲಿ ಓರ್ವನ ಕಣ್ಣುಗಳು ಅದೆಷ್ಟೇ ಆರೋಗ್ಯಕರವಾಗಿದ್ದರೂ, ದೃಷ್ಟಿಯುಳ್ಳವುಗಳಾಗಿದ್ದರೂ ವಸ್ತುಗಳನ್ನು ವೀಕ್ಷಿಸಲು ಸಾಧ್ಯವಿಲ್ಲ. ಅಂತೆಯೇ ಕಣ್ಣಿಲ್ಲದಿದ್ದಲ್ಲಿ ಸೂರ್ಯನಿದ್ದರೂ ಏನು ಉಪಯೋಗ. ಸೂರ್ಯ ಇದ್ದು, ಕಣ್ಣುಗಳೂ ಸರಿಯಾಗಿದ್ದಲ್ಲಿ ಮಾತ್ರ ದೃಷ್ಟಿಗೋಚರತೆ ಸಾಧ್ಯ. ಸೂರ್ಯನ ಹಾಗೂ ಕಣ್ಣುಗಳ ಅನ್ಯೋನ್ಯ ಸಹಕಾರದಿಂದ ದೃಷ್ಟಿ ಸಾಧ್ಯವಾದಂತಾಯಿತು. ಡಿವಿಜಿಯವರು ಜೀವ ದೈವಂಗಳ ನಿರಂತರ ಸಂಬಂಧವನ್ನು ಇಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ನನ್ನ ಜೀವವು ನನ್ನಾತ್ಮವಾದಂತೆ, ಸರ್ವಶ್ರೇಷ್ಠ ಪರಮಾತ್ಮನು ಜಗದಾತ್ಮನಾಗಿದ್ದಾನೆಂದೂ, ಜಗದಾತ್ಮನಿಗೂ, ಮಾನವಾತ್ಮನಿಗೂ ಇರುವ ಅನ್ಯೋನ್ಯ ಸಂಬಂಧವನ್ನು ಬೆಂಕಿಯ ಜ್ವಾಲೆ ಹಾಗೂ ಅದರಿಂದ ಹೊರಬರುವ ಕಿಡಿಗಳಿಗೆ ಹೋಲಿಸಿದ್ದಾರೆ. ಸಕ್ಕರೆಯು ಸಿಹಿಯಾಗಿದ್ದರೂ ನಾಲಿಗೆಯ ಸ್ಪರ್ಶವಿಲ್ಲದೇ ಅದರ ಸಿಹಿಯ ಅರಿವು ನಮಗಾಗದು. ಸಕ್ಕರೆಯನ್ನು ಅಂಗೈ ಮೇಲೆ ಇಟ್ಟಲ್ಲಿ ಸಿಹಿಯ ಅನುಭವವಾಗುವುದಿಲ್ಲ. ಹೀಗೆ ಜೀವ ದೈವಂಗಳ ಪರಸ್ಪರಾನ್ವೇಷಣೆಯೇ ಸೃಷ್ಟಿಯ ಲಾವಣ್ಯವೆಂದಿರುತ್ತಾರೆ.

ಇಷ್ಟೆಲ್ಲದರ ಸಾರಾಂಶವೆಂದರೆ ಕಣ್ಣು, ರವಿಗಳ ಸಹಕಾರದಿಂದ ಜಗತ್ತಿನ ವೀಕ್ಷಣೆ ಸಾಧ್ಯವಾಗಿದೆಯಾದ್ದರಿಂದ ನಮ್ಮ ದೈನಂದಿನ ಬದುಕಿನಲ್ಲೂ ಒಬ್ಬರಿಗೊಬ್ಬರು ಸಹಾಯ ಹಸ್ತ ಚಾಚುತ್ತಾ ಬದುಕನ್ನು ಸಹಕಾರದ ಹಾದಿಯಲ್ಲಿ ಕೊಂಡೊಯ್ಯೋಣ ಹಾಗೂ ಮನುಕುಲದ ಬದುಕನ್ನು "ಸಹ್ಯ"ವೆನಿಸೋಣವೆಂಬುದಾಗಿದೆ. ಹೀಗೆ ಒಬ್ಬರಿಗೊಬ್ಬರು ಸಹಕರಿಸಿ ನಡೆದಾಗ ಬದುಕು ವರ್ಧಿಸುತ್ತದೆ, ವೃದ್ಧಿಸುತ್ತದೆ ಹಾಗೂ ಅಭಿವೃದ್ಧಿಸುತ್ತದೆ ಎಂಬುದು ಈ ಪದ್ಯದ ಅಂತರಾರ್ಥವಾಗಿರುತ್ತದೆ.

ವರ್ಷಗಳಿಂದ ನಡೆಯುತ್ತಿರುವ ಗ್ರಾಮೀಣ ಬ್ಯಾಂಕುಗಳ ಪ್ರಯೋಗ ಅಷ್ಟೇನೂ ಯಶಸ್ವಿಯಾಗಿಲ್ಲ. ಅಷ್ಟಕ್ಕೂ ನಮ್ಮ ರಾಷ್ಟ್ರೀಕೃತ ಬ್ಯಾಂಕುಗಳೇನೂ ಮಹಾಭಾರತದ ಧರ್ಮರಾಯನಂತೆ ಇಲ್ಲ. ಅವುಗಳು ಎಷ್ಟು ದೊಡ್ಡದಾಗಿವೆಯೋ ಅವುಗಳ ಸುಸ್ತಿ ಸಾಲಗಳ ಪ್ರಮಾಣವೂ ಅಷ್ಟೇ ದೊಡ್ಡದಾಗಿದೆ. ಬ್ಯಾಂಕಿಂಗ್ ವಲಯದಲ್ಲಿ ಎನ್.ಪಿ.ಎ. ಎಂದು ಪ್ರಸಿದ್ಧವಾಗಿರುವ ಈ ಸುಸ್ತಿ ಸಾಲಗಳು ಬ್ಯಾಂಕುಗಳ ಮಹಾ ದುಃಸ್ವಪ್ನವಾಗಿದೆ. ಇವುಗಳ ಪ್ರಮಾಣ ಎಷ್ಟು ಜಾಸ್ತಿ ಎಂದರೆ ರಾಷ್ಟ್ರೀಕೃತ ಬ್ಯಾಂಕುಗಳ ಶೇರು ಬೆಲೆಯನ್ನೇ ಘಾಸಿ ಮಾಡುವಷ್ಟು, ಆದ್ದರಿಂದಲೇ ಭಾರತ ಸರ್ಕಾರ ಪ್ರತಿ ವರ್ಷ ಸಾವಿರಾರು ಕೋಟಿ ರೂ.ಗಳ ಹಣವನ್ನು ಈ ಬ್ಯಾಂಕುಗಳಿಗೆ ಹರಿಸುತ್ತಿದೆ. ಈ ವರ್ಷದಲ್ಲಿಯೇ ಜುಲೈ ತಿಂಗಳಿನಲ್ಲಿ ಸರ್ಕಾರ 22915 ಕೋಟಿ ರೂ.ಗಳನ್ನು 13 ರಾಷ್ಟ್ರೀಕೃತ ಬ್ಯಾಂಕುಗಳಿಗೆ ಬಿಡುಗಡೆ ಮಾಡಿತು. ಇದು ಎಷ್ಟರ ಮಟ್ಟಿಗೆ ಮಾಮೂಲು ಎಂದರೆ ಭಾರತ ಸರ್ಕಾರ ಈ ವರ್ಷದ ಆಯವ್ಯಯದಲ್ಲಿಯೇ 25,000 ಕೋಟಿ ರೂ.ಗಳ ಹಣವನ್ನು ಇದಕ್ಕಾಗಿಯೇ ತೆಗೆದಿರಿಸಿತ್ತು. ನಮ್ಮ ಬಹುತೇಕ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಶೇ.90ಕ್ಕೂ ಮೀರಿ ವಸೂಲಾತಿ ಇದ್ದು, ಎನ್.ಪಿ.ಎ. ಪ್ರಮಾಣ ಕಡಿಮೆ ಇರುವುದು ಗೊತ್ತೇ ಇದೆ.

ಇಷ್ಟಾದರೂ ನಮ್ಮ ಸಹಕಾರ ಬ್ಯಾಂಕುಗಳ ಪ್ರತಿಷ್ಠೆ ಹೊರಗೆ ಕಡಿಮೆ ಇರುವುದಕ್ಕೆ ಇನ್ನೂ ಒಂದು ಕಾರಣವೆಂದರೆ ಅವುಗಳ ಮಹಾಸಭೆಗಳಲ್ಲಿ ನಡೆಯುವ ಚರ್ಚೆಗಳಿಗೆ ದೊರಕುವ ವ್ಯಾಪಕ ಪ್ರತಿಕೂಲ ಪ್ರಚಾರ.

ಆದರೆ, ಇವೆಲ್ಲವನ್ನೂ ಮೀರಿ ಈ ಬ್ಯಾಂಕುಗಳು ಬೆಳೆಯುತ್ತಿವೆ ಎನ್ನುವುದೇನೋ ನಿಜ. ಆದ್ದರಿಂದ, ಈಗ ಈ ನೋಟು ರದ್ಧತಿ ಪರಿಸ್ಥಿತಿಯ ನಂತರ ಹೇಗೆ ಎಂಬುದನ್ನು ಯೋಚಿಸಬೇಕಾಗಿದೆ. ಇದು ಯೋಚಿಸಬೇಕಾದಂತಹ ವಿಷಯವೇ.

ನಮ್ಮ ಸಹಕಾರ ಬ್ಯಾಂಕುಗಳ ಪ್ರತಿಷ್ಠೆ – ಇಮೇಜು – ಬೆಳೆಯಬೇಕಾದರೆ ಇರುವ ಒಂದು ಮುಖ್ಯ ಸಾಧನ ಎಂದರೆ ಆಧುನಿಕವಾಗುವುದೇ ಆಗಿದೆ. ಎಸ್.ಬಿ.ಐ. ನಂತಹ ಬ್ಯಾಂಕಿನ ಒಂದು ಶಾಖೆಯಲ್ಲಿ ಇರುವ ಆಧುನಿಕ ಎಂದರೆ ಇ–ಸೌಲಭ್ಯಗಳು ಬಹಳಷ್ಟು ಸಹಕಾರ ಬ್ಯಾಂಕುಗಳ ಪ್ರಧಾನ ಕಛೇರಿಯಲ್ಲಿ ಸಹ ಇರುವುದಿಲ್ಲ. ಈ ಸೌಲಭ್ಯಗಳು ಅಭ್ಯಾಸವಾಗಿ ಬಿಟ್ಟರೆ ವಯಸ್ಸಾದವರು ಸಹ ಹಳೆಯ ರೀತಿಯ ವ್ಯವಹಾರಗಳನ್ನು ಇಷ್ಟಪಡುವುದಿಲ್ಲ.

ಈಗ ಉಂಟಾಗಿರುವ, ನಗದು ಹಣ ಸರಬರಾಜು ಇಲ್ಲದ ಪರಿಸ್ಥಿತಿ ತಾತ್ಕಾಲಿಕ. ಇನ್ನು ಒಂದೆರಡು ತಿಂಗಳಲ್ಲಿ ಪರಿಸ್ಥಿತಿ ತಿಳಿ ಆಗಬಹುದು. ಆದರೆ, ವಿಷಯ ಏನೆಂದರೆ ವ್ಯವಹಾರಗಳಲ್ಲಿ ನಗದು ಹಣ ಇಲ್ಲದ ಒಂದು ಪರಿಸ್ಥಿತಿ ದಿಗಂತದಲ್ಲಿ ಕಾಣುತ್ತಿದೆ. ಅಂತಹ ಪರಿಸ್ಥಿತಿ ಬಂದರೆ ಅದನ್ನು ಎದುರಿಸಿ ಉಪಯೋಗಿಸಿಕೊಳ್ಳಲು ಖಾಸಗಿ ಬ್ಯಾಂಕುಗಳು ಮತ್ತು ಎಸ್.ಬಿ.ಐ.ನಂತಹ ಬ್ಯಾಂಕುಗಳು ಸಜ್ಜಾಗಿ ನಿಂತಿವೆ. ತೆಲಂಗಾಣ ರಾಜ್ಯದ ಮುಖ್ಯಮಂತ್ರಿಗಳು ಮಾದರಿಗಾಗಿ ಒಂದು ಇಡೀ ಜಿಲ್ಲೆಯನ್ನೇ ನಗದು ವ್ಯವಹಾರ ಇಲ್ಲದ ಜಿಲ್ಲೆಯನ್ನಾಗಿ ಮಾಡುತ್ತೇನೆಂದು ಘೋಷಿಸಿದ್ದಾರೆ.

ಆದ್ದರಿಂದಲೇ, ನಿಧಾನವಾಗಿ ಯೋಚಿಸಿದಾಗ, ಇನ್ನು ಮುಂದೆ ಸಹಕಾರ ಬ್ಯಾಂಕುಗಳಿಗೆ ತೊಂದರೆ ಇರುವುದು ರಿಸರ್ವ್ ಬ್ಯಾಂಕಿನಿಂದಾಗಲೀ ಅಲ್ಲ ಅಥವಾ ಅವುಗಳ ಇಮೇಜೂ ಅಲ್ಲ ಅನಿಸುತ್ತದೆ. ಈ ಬದಲಾದ ಪರಿಸ್ಥಿತಿಗಳಲ್ಲಿ ಸಹಕಾರ ಬ್ಯಾಂಕುಗಳಿಗೆ ನಿಜವಾದ ಸವಾಲು ಇರುವುದು ಆಧುನಿಕವಾಗುವುದರಲ್ಲಿ ಎಂದರೆ ಗಣಕೀಕರಣದಲ್ಲಿ ಮತ್ತು ನಗದು ರಹಿತ ವ್ಯವಸ್ಥೆಗಳಿಗೆ ಅಗತ್ಯವಾದ, ಪರಿಣತಿ ಹೊಂದಿರುವ, ತಮ್ಮದೇ ಆದ ಇ–ಆಡಳಿತ ವ್ಯವಸ್ಥೆ ಹೊಂದುವುದರಲ್ಲಿ ಎನಿಸುತ್ತದೆ.

ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಈ ಸವಾಲನ್ನು ಯಶಸ್ವಿಯಾಗಿ ಎದುರಿಸುತ್ತವೆ ಎಂಬ ಆಶಾಭಾವನೆ ನನಗಿದೆ.

ನೋಟುಗಳ ಅಮಾನ್ಯತೆ : ಸಹಕಾರ ಕ್ಷೇತ್ರದ ಮೇಲೆ ಆಗಿರುವ ನಕಾರಾತ್ಮಕ ಪರಿಣಾಮಗಳು

▶▶ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.

ನವೆಂಬರ್ 8ನೇಯ ತಾರೀಖು... ನಮ್ಮ ದೇಶದ ಆರ್ಥಿಕ ಇತಿಹಾಸದಲ್ಲಿ ಸ್ಮರಣೀಯ ದಿನ. ರೂ.500 ಹಾಗೂ ರೂ.1,000 ಮುಖಬೆಲೆಯ ನೋಟುಗಳನ್ನು ನಿಷ್ಪ್ರಯೋಜಕಗೊಳಿಸಿದ ದಿನ.

ಕಪ್ಪು ಹಣ, ನಕಲಿ ನೋಟು, ಭಯೋತ್ಪಾದಕರಿಗೆ ಸಿಗುತ್ತಿದ್ದ ಹಣಕಾಸಿನ ನೆರವು ಹಾಗೂ ಅವುಗಳಿಂದ ಜೀವನದ ಮೌಲ್ಯಗಳು ಮತ್ತು ಆಡಳಿತದ ಮೇಲೆ ಆಗುತ್ತಿದ್ದ ನೇತ್ಯಾತ್ಮಕ ಪರಿಣಾಮಗಳ ಹಿನ್ನೆಲೆಯಲ್ಲಿ ತೆಗೆದುಕೊಂಡಿರುವ ಈ ತೀರ್ಮಾನ ನಿಜಕ್ಕೂ ಅಭಿನಂದನೀಯ. ನಿರ್ಮಾಣ ವಲಯ, ಭೂಮಿ ಖರೀದಿ ಮತ್ತು ಮಾರಾಟ, ಶಿಕ್ಷಣ ಕ್ಷೇತ್ರದಲ್ಲಿ ಸೀಟಿಗಾಗಿ ಹಣ ನೀಡುವುದು, ಚುನಾವಣೆಗೆ ಬಳಸುವ ಹಣ ಹೀಗೆ ಹತ್ತು ಹಲವು ರೀತಿಯಲ್ಲಿ ಕಪ್ಪು ಹಣ ಎಲ್ಲೆಲ್ಲಿ ಬಳಕೆಯಾಗುತ್ತಿತ್ತೋ... ಅದೆಲ್ಲವೂ ನಿಯಂತ್ರಣಕ್ಕೆ ಬರಲಿದೆ. ಈ ತೀರ್ಮಾನದಿಂದಾಗಿ... ನಗದು ರೂಪದಲ್ಲಿ ಸಂಗ್ರಹವಾಗಿದ್ದ ಕಪ್ಪುಹಣಕ್ಕೆ ಏಟು ಬಿದ್ದಿದೆ. ನ್ಯಾಯೋಚಿತ ಹಣ ಹೊಂದಿರುವವರಿಗೆ ರಕ್ಷಣೆ ದೊರೆತಿದೆ.

ರಾಷ್ಟ್ರದ ಒಟ್ಟಾರೆ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಜಾರಿಗೆ ತಂದಿರುವ ಈ ಕ್ರಮವನ್ನು ಆರೋಗ್ಯಕರ ಸಮಾಜದಲ್ಲಿ ವಾಸಿಸಬಯಸುವ ಪ್ರತಿಯೊಬ್ಬರೂ ಮುಕ್ತ ಮನಸ್ಸಿನಿಂದ ಸ್ವಾಗತಿಸಬೇಕಾಗುತ್ತದೆ... ಸಹಕರಿಸಬೇಕಾಗುತ್ತದೆ. ಇದು ಎಲ್ಲ ಪ್ರಜೆಗಳ ಮೂಲಭೂತ ಕರ್ತವ್ಯವೂ ಆಗಿದೆ.

ಆದರೆ... ಈ ತೀರ್ಮಾನವನ್ನು ಅನುಷ್ಠಾನಗೊಳಿಸುವ ಪೂರ್ವಭಾವಿಯಾಗಿ, ನೋಟುಗಳ ವಿನಿಮಯ (Currency Exchange), ಹಣ ಹಿಂಪಡೆತ (Withdrawal), ಸಾಲದ ಮರುಪಾವತಿ (Repayment of Loan), ಠೇವಣಿ ತೊಡಗಿಸುವಿಕೆ (Deposit) ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಮಾನದಂಡಗಳನ್ನು ನಿಗದಿಪಡಿಸುವಾಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೃಷಿಯೇತರ ಪತ್ತಿನ ಸಂಘಗಳು ಮತ್ತು ಸೌಹಾರ್ದ ಸಹಕಾರಿಗಳನ್ನು ಪರಿಗಣಿಸದೇ ಈ ಕಾರ್ಯಕ್ರಮದ ಪರಿಧಿಯಿಂದ ಹೊರಗೆ ಇಟ್ಟಿದ್ದು... ಈ ಸಂಸ್ಥೆಗಳನ್ನು ನಿರ್ಲಕ್ಷ್ಯ ಮಾಡಿದಂತಾಗಿದೆ. ಎಲ್ಲೋ ಒಂದು ಕಡೆ ಒಂದೆರಡು ಸಹಕಾರ ಸಂಸ್ಥೆಗಳು ನಿಯಮಬಾಹಿರವಾಗಿ ನಡೆದುಕೊಂಡ ಪ್ರಕರಣವನ್ನು ಎಲ್ಲ ಸಹಕಾರ ಸಂಘಗಳಿಗೂ ಸಮೀಕರಣಗೊಳಿಸಿದ್ದು, ಸಹಕಾರ ಕ್ಷೇತ್ರದ ಮೇಲೆ ನಕಾರಾತ್ಮಕ ಪರಿಣಾಮವನ್ನು ಉಂಟು ಮಾಡಲು ಕಾರಣವಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ತಪ್ಪು ಮಾಡಿದ ಸಹಕಾರ ಸಂಘಗಳ ಮೇಲೆ ಸಾಕಷ್ಟು ಕ್ರಮಕೈಗೊಳ್ಳುವ ಅಧಿಕಾರ ಕೇಂದ್ರ ಸರ್ಕಾರ, ಆರ್.ಬಿ.ಐ. ಮತ್ತು ತೆರಿಗೆ ಇಲಾಖೆಗೆ ಇದ್ದಾಗ್ಯೂ ಕೂಡಾ, ಇಡೀ ಸಹಕಾರ ಕ್ಷೇತ್ರವನ್ನು ಸಂದೇಹದಿಂದ ನೋಡಿದ್ದು ಸಮಂಜಸ ಎನಿಸುವುದಿಲ್ಲ.

ನಮ್ಮ ದೇಶದ ಸಹಕಾರ ಚಳುವಳಿಯ ಆರಂಭದ ದಿನಗಳಿಂದಲೂ ಸಹಕಾರ ಸಂಘಗಳು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಮಹಿಳೆಯರಿಗೆ, ಅಬಲ ವರ್ಗದವರಿಗೆ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಹಾಗೂ ನಗರ ಪ್ರದೇಶಗಳಲ್ಲಿ ವಾಸಿಸುವ ಮಧ್ಯಮ ವರ್ಗದ ಜನರಿಗೆ ಆರ್ಥಿಕ ನೆರವನ್ನು ಒದಗಿಸುತ್ತಾ, ಈ ಜನತೆಯ ಜೀವನದ ಜತೆ-ಜತೆಗೆ ಬೆಳೆದು ಬಂದಿರುತ್ತವೆ. "ಸಹಕಾರ ಚಳುವಳಿ ವಿಫಲಗೊಂಡಿದೆ. ಅದು ಯಶಸ್ವಿಯಾಗಲೇಬೇಕು" ಎಂದು ಹೇಳುವುದರ ಮೂಲಕ ಸಹಕಾರ ಕ್ಷೇತ್ರದ ಅನಿವಾರ್ಯತೆಯನ್ನು ಗುರುತಿಸಿದ ನಂತರದಲ್ಲಿ, ಕೇಂದ್ರ ಸರ್ಕಾರ ಮತ್ತು ಆರ್.ಬಿ.ಐ. ನಿಂದ ನೇಮಕಗೊಂಡ ಅನೇಕ

ಸಮಿತಿಗಳು ಸಹಕಾರ ಕ್ಷೇತ್ರವನ್ನು ಗಟ್ಟಿಗೊಳಿಸಬೇಕಾದ ಅಗತ್ಯ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಿರುವ ಅಂಶ ಆರ್.ಬಿ.ಐ.ಗೆ ಗೊತ್ತಿರುವ ವಿಷಯವೇ ಆಗಿದೆ.

ಅಲ್ಪಾವಧಿ ಸಹಕಾರ ಪತ್ತಿನ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರೊ॥ ವೈದ್ಯನಾಥನ್ ಸಮಿತಿಯು ನೀಡಿರುವ ವರದಿಯಲ್ಲಿ "ಶೇ.48ರಷ್ಟು ರೈತರಿಗೆ ಯಾವ ಮೂಲದಿಂದಲೂ ಸಾಲ ಸಿಗುತ್ತಿಲ್ಲವೆಂದು ಒಂದು ವೇಳೆ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸದಿದ್ದರೆ 1904 ರಲ್ಲಿದ್ದ ರೈತರ ಶೋಚನೀಯ ಸ್ಥಿತಿ ಮರುಕಳಿಸುತ್ತದೆ" ಎಂದು ಹೇಳಲಾಗಿದೆ.

ವೈ.ಹೆಚ್. ಮಾಲೇಗಾಂವ್ ಸಮಿತಿಯು ರಿಸರ್ವ್ ಬ್ಯಾಂಕಿಗೆ ನೀಡಿರುವ ವರದಿಯಲ್ಲಿ "ಎಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲವೋ ಅಲ್ಲಿ ಸಹಕಾರ ಬ್ಯಾಂಕಿಂಗ್ ಆರಂಭವಾಗಬೇಕು" ಎಂದು ತಿಳಿಸಿರುವುದು ಸಹಕಾರ ಕ್ಷೇತ್ರದ ಪ್ರಸ್ತುತತೆಯನ್ನು ಎತ್ತಿ ಹಿಡಿಯುತ್ತದೆ. ರೈತರಿಗೆ ಲಾಭದಾಯಕವಾದ ಉಪ ಜೀವನದ ಸಾಧ್ಯತೆಯನ್ನು ತೋರಿಸಲು, ಆದಾಯದ ಹೊಸ ಮೂಲವನ್ನು ದೊರಕಿಸಿಕೊಡಲು ಮತ್ತು ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡಲು ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಬಲಪಡಿಸಬೇಕೆಂದು ಡಾ॥ ವರ್ಗೀಸ್ ಕುರಿಯನ್‌ರವರು ತಿಳಿಸಿರುತ್ತಾರೆ.

ನಮ್ಮ ದೇಶದಲ್ಲಿ ಸಹಕಾರ ಕ್ಷೇತ್ರ ಬಹಳ ವಿಸ್ತಾರವಾಗಿ ಬೆಳೆದಿದೆ. ನೂರಕ್ಕೆ ನೂರು ಗ್ರಾಮೀಣ ವ್ಯಾಪ್ತಿಯನ್ನು ಹೊಂದಿರುವ ಈ ಕ್ಷೇತ್ರದಲ್ಲಿ... ಆರು ಲಕ್ಷಕ್ಕೂ ಹೆಚ್ಚು ಸಹಕಾರ ಸಂಘಗಳು, 30 ಕೋಟಿಗೂ ಹೆಚ್ಚು ಮಾನವ ಸಂಪನ್ಮೂಲವನ್ನು ಹೊಂದಿದ್ದು, ಅಂದಾಜು ರೂ.70 ಲಕ್ಷ ಕೋಟಿ ದುಡಿಯುವ ಬಂಡವಾಳವನ್ನು ಹೊಂದಿವೆ. ಖಾಸಗೀಕರಣದ ಸನ್ನಿವೇಶದಲ್ಲಿಯೂ... ದೇಶದ ಒಟ್ಟು ಅರ್ಥವ್ಯವಸ್ಥೆಗೆ ಸಹಕಾರ ಕ್ಷೇತ್ರದ ಕೊಡುಗೆ ಶೇ.35ರಷ್ಟಿದೆ.

ಸೌಹಾರ್ದ ಸಹಕಾರಿಗಳೂ ಸೇರಿದಂತೆ ರಾಜ್ಯದಲ್ಲಿ 40 ಸಾವಿರಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳು ಕೆಲಸ ಮಾಡುತ್ತಿದ್ದು, ಸುಮಾರು 2.75 ಕೋಟಿ ಸದಸ್ಯರನ್ನು ಹೊಂದಿವೆ. ಸಹಕಾರ ಸಂಘಗಳು ಕೇವಲ ಸಾಲ ನೀಡುವ, ಮನೆ ಕಟ್ಟಿಕೊಡುವ ಅಥವಾ ಹಾಲು ಸಂಗ್ರಹಿಸುವ ಕೆಲಸಗಳಿಗೆ ಮಾತ್ರ ಸೀಮಿತವಾಗಿಲ್ಲ. ದೇಶ ಕಟ್ಟುವ ಸತ್ಕಾರ್ಯದಲ್ಲೂ ತೊಡಗಿಸಿಕೊಂಡಿವೆ ಎಂಬುದನ್ನು ಸಂಬಂಧಿಸಿದವರು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಸಹಕಾರ ಸಂಘಗಳು ಮೂಲತಃ... ಸಾಮಾಜಿಕ ಬದ್ಧತೆಯನ್ನು ಹೊಂದಿರುವ ವ್ಯಾವಹಾರಿಕ ಸಂಸ್ಥೆಗಳಾಗಿದ್ದು, ತಮ್ಮ ಎಲ್ಲ ವ್ಯವಹಾರಗಳನ್ನು ಸದಸ್ಯರ ಮೂಲಕವೇ ನಿರ್ವಹಿಸುತ್ತಿವೆ. ಈ ಸಂಘಗಳ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ವಾಸಿಸುವ, ಕರಾರು ಮಾಡಿಕೊಳ್ಳಲು ಸಮರ್ಥರಿರುವ, ಸಂಘದ ಸೇವೆಗಳನ್ನು ಪಡೆದುಕೊಳ್ಳಲು ಅರ್ಹರಿರುವ ಎಲ್ಲರನ್ನು ಸದಸ್ಯರನ್ನಾಗಿ ಮಾಡಿಕೊಂಡು ಅವರೊಂದಿಗೆ ಸಾಲದ ವ್ಯವಹಾರ ಮತ್ತು ಠೇವಣಿ ಸಂಗ್ರಹಣೆ ಬಗ್ಗೆ Know Your Customers (KYC) ನಿಯಮಗಳನ್ವಯ ವ್ಯವಹರಿಸಲಾಗುತ್ತಿದೆ. ಪ್ರತಿ ಖಾತೆಗೆ ಹಣವನ್ನು ಜಮಾ ಮಾಡುವ ಮತ್ತು ಪ್ರತಿ ಖಾತೆಯಿಂದ ಹಣವನ್ನು ತೆಗೆಯುವ ಬಗ್ಗೆ ಸ್ಪಷ್ಟ ಮಾಹಿತಿ ಸಹಕಾರ ಸಂಸ್ಥೆಗಳಲ್ಲಿ ಲಭ್ಯವಿರುತ್ತದೆ.

ಸಹಕಾರ ಸಂಘಗಳು ಕಾಯಿದೆ ಮತ್ತು ನಿಯಮಗಳ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿವೆ. ಸಂವಿಧಾನದ 97ನೇ ತಿದ್ದುಪಡಿಯ ನಂತರದಲ್ಲಿ ರಾಜ್ಯದ ಸಹಕಾರ ಕಾಯಿದೆಗಳಲ್ಲಿ ವೃತ್ತಿಪರತೆ, ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. "ಸ್ವಾಯತ್ತತೆ ಸ್ವೇಚ್ಛಾಚಾರ ಅಲ್ಲ" ಎಂಬುದನ್ನು ಸಹಕಾರ ಸಂಸ್ಥೆಗಳಲ್ಲಿ ಆಡಳಿತ ನಡೆಸುವವರಿಗೆ ಮನದಟ್ಟು ಮಾಡಿಕೊಡಲಾಗುತ್ತಿದೆ. ಪ್ರತಿವರ್ಷ ಸೆಪ್ಟೆಂಬರ್ 1 ರೊಳಗೆ ಪ್ರತಿಯೊಂದು ಸಂಘವು ಲೆಕ್ಕಪರಿಶೋಧನಾ ವರದಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕಾಗಿದೆ. ಸೆಪ್ಟೆಂಬರ್ 25ರೊಳಗೆ ತಪ್ಪದೆ ಮಹಾಸಭೆ ನಡೆಸಬೇಕಾಗುತ್ತದೆ. ಸೆಪ್ಟೆಂಬರ್ 30 ರೊಳಗೆ ವರದಿಗಳನ್ನು ಸಂಬಂಧಿಸಿದ ನಿಬಂಧಕರಿಗೆ ಸಲ್ಲಿಸಬೇಕಾಗುತ್ತದೆ. ತಪ್ಪಿದರೆ ಇದು ಶಿಕ್ಷಾರ್ಹ ಅಪರಾಧವೆಂದು ಸ್ಪಷ್ಟಪಡಿಸಲಾಗಿದೆ.

ಇಷ್ಟೆಲ್ಲಾ ವ್ಯವಸ್ಥೆಯೊಂದಿಗೆ ಕೆಲಸ ಮಾಡುತ್ತಿರುವ ಸಹಕಾರ ಸಂಘಗಳ ವ್ಯವಹಾರಗಳನ್ನು ಗಣನೆಗೆ ತೆಗೆದುಕೊಳ್ಳದೆ, ಆರ್.ಬಿ.ಐ. ತಳೆದ ಧೋರಣೆಯಿಂದಾಗಿ, ಸಹಕಾರ ಕ್ಷೇತ್ರದ ಮೇಲೆ ಉಂಟಾಗಿರುವ ಋಣಾತ್ಮಕ ಅಂಶಗಳನ್ನು ಕೆಳಗಿನಂತೆ ಗಮನಿಸಬಹುದಾಗಿದೆ:

- ಬ್ಯಾಂಕಿಂಗ್ ರೆಗ್ಯುಲೇಷನ್ ಆ್ಯಕ್ಟ್‌ಗೆ ಒಳಪಟ್ಟ ಹಾಗೂ ತಾನೇ ಲೈಸನ್ಸ್ ನೀಡಿದ ಡಿ.ಸಿ.ಸಿ. ಬ್ಯಾಂಕ್‌ಗಳಿಗೆ ಆರ್.ಬಿ.ಐ. ನೋಟುಗಳ ಅಮಾನ್ಯತೆಗೆ ಸಂಬಂಧಿಸಿದಂತೆ ವ್ಯವಹರಿಸಲು ಅವಕಾಶ ನೀಡದೇ ಇರುವುದು ಬ್ಯಾಂಕಿನ ಠೇವಣಿದಾರರು ಮತ್ತು ಗ್ರಾಹಕರಲ್ಲಿ ಗೊಂದಲಕ್ಕೆ ಕಾರಣವಾಗಿರುತ್ತದೆ.
- ರಿಸರ್ವ್ ಬ್ಯಾಂಕಿನ ಇತ್ತೀಚಿನ ಆದೇಶದಂತೆ ದಿನಕ್ಕೆ ರೂ.2,000 ಅಥವಾ ವಾರಕ್ಕೆ ರೂ.10,000 ಮಾತ್ರ ಹಿಂಪಡೆಯುವ (withdrawal) ಅವಕಾಶ ಇರುತ್ತದೆ. ಅದೇ ರೀತಿ ರೈತರು ತಮ್ಮ ಖಾತೆಯಿಂದ ಒಂದು ವಾರದಲ್ಲಿ ರೂ.25,000 ಹಣವನ್ನು ಹಿಂಪಡೆಯಬಹುದಾಗಿದೆ. ಆದರೆ ಸಹಕಾರ ಸಂಘಗಳು ಮಾತ್ರ ವಾರಕ್ಕೆ ರೂ.10,000 ಗಳಿಗಿಂತ ಹೆಚ್ಚು ಹಣವನ್ನು ಹಿಂಪಡೆಯುವಂತಿಲ್ಲ. ಇದರಿಂದಾಗಿ ಸಹಕಾರ ಸಂಘಗಳ ದೈನಂದಿನ ನಗದು ವ್ಯವಹಾರಕ್ಕೆ ತೀವ್ರ ತರದ ಧಕ್ಕೆಯಾಗಿರುತ್ತದೆ.
- ಸಹಕಾರ ಸಂಘಗಳ ಪ್ರತಿಯೊಬ್ಬ ಸದಸ್ಯನ ಸಾಲದ ವ್ಯವಹಾರವನ್ನು ಅವನ ಉಳಿತಾಯ ಖಾತೆಯ ಮೂಲಕವೇ ವ್ಯವಹರಿಸುತ್ತಿರುವುದರಿಂದ ಹಾಗೂ ಪ್ರತಿ ಠೇವಣಿದಾರನಿಗೂ ಪ್ರತ್ಯೇಕ ಠೇವಣಿ ಖಾತೆ ಇರುವುದರಿಂದ, ಅವರುಗಳಿಗೆ ಹೆಚ್ಚಿನ ಹಣವನ್ನು ಪಾವತಿಸಲು ತೊಂದರೆಯಾಗಿರುತ್ತದೆ. ಪಿಗ್ಮಿ ಉಳಿತಾಯದ ಹಣವನ್ನು ನಗದು ರೂಪದಲ್ಲಿ ವಾಪಸ್ ಕೊಡಲು ಕಷ್ಟವಾಗುತ್ತಿದೆ. ಕೃಷಿಯೇತರ ಸಾಲಗಳನ್ನು ಚೆಕ್ ಮೂಲಕ ನೀಡುವುದರಿಂದ, ಸಾಲಗಾರರಿಗೆ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಗಿರುತ್ತದೆ. ಇದರಿಂದಾಗಿ ರಾಜ್ಯದ 5,230 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮತ್ತು 3271 ಪತ್ತಿನ ಸಹಕಾರ ಸಂಘಗಳ ಹಾಗೂ 3850 ಸೌಹಾರ್ದ ಸಹಕಾರಿಗಳ ಸದಸ್ಯರುಗಳಿಗೆ ಬಹಳ ತೊಂದರೆಯಾಗಿದ್ದು, ಸಹಕಾರ ಸಂಘಗಳ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುತ್ತಿರುವುದು ನಿಜಕ್ಕೂ ಗಂಭೀರವಾದ ವಿಷಯವಾಗಿದೆ.
- ಠೇವಣಿ ಜಾಸ್ತಿ ಬರುತ್ತಿರುವುದು ಪಾಸಿಟಿವ್ ಬೆಳವಣಿಗೆ. ಆದರೆ ಠೇವಣಿಯನ್ನು ಪಡೆದ ದಿನದಿಂದಲೇ ಬಡ್ಡಿ ನೀಡಬೇಕಾಗಿರುವುದರಿಂದ ಸದರಿ ಠೇವಣಿ ಹಣವನ್ನು ಸಾಲದ ಅಥವಾ ವಿನಿಯೋಗದ ರೂಪದಲ್ಲಿ ಕೂಡಲೇ ತೊಡಗಿಸಲು ಕಷ್ಟವಾಗುತ್ತಿರುವುದರಿಂದ, ಠೇವಣಿ ವ್ಯವಹಾರದಲ್ಲಿ ನಷ್ಟ ಸಂಭವಿಸುವ ಸಾಧ್ಯತೆ ಇದೆ. ಅನೇಕ ಸಹಕಾರ ಸಂಘಗಳಲ್ಲಿ ಠೇವಣಿ ಪಕ್ವತಾ ದಿನಾಂಕ ಮುಗಿದಿದ್ದು, ಸಂಬಂಧಿಸಿದ ಠೇವಣಿದಾರರಿಗೆ ಅವರ ಹಣವನ್ನು ಬಡ್ಡಿಯೊಂದಿಗೆ ಹಿಂತಿರುಗಿಸಲು ನಗದು ಹಣದ ಅಲಭ್ಯತೆಯಿಂದಾಗಿ ಕಷ್ಟವಾಗಿರುತ್ತದೆ. ಇದರಿಂದಾಗಿ ಠೇವಣಿದಾರರೊಂದಿಗಿನ ವ್ಯಾವಹಾರಿಕ ಸಂಬಂಧಗಳಿಗೆ ಅಡ್ಡಿಯಾಗುತ್ತಿದೆ.
- ರಾಜ್ಯದಲ್ಲಿ 14,000 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ಹಾಲು ಉತ್ಪಾದಕರಿಗೆ ಪ್ರತಿ ವಾರವೂ ಹಣ ಪಾವತಿಸಬೇಕಿರುತ್ತದೆ. ಒಂದು ಸಂಘಕ್ಕೆ ಪ್ರತಿವಾರ ಕನಿಷ್ಠ ರೂ.70 ರಿಂದ 80 ಸಾವಿರ ಹಣದ ಅವಶ್ಯಕತೆ ಇರುತ್ತದೆ. ಆದರೆ ಸಹಕಾರ ಸಂಘಗಳು ರೂ.10,000 ಗಳವರೆಗೆ ಮಾತ್ರ ನಗದು ಹಿಂಪಡೆಯುವ ಮಿತಿಯಿರುವುದರಿಂದ ಹಾಲು ಉತ್ಪಾದಕರು ಮತ್ತು ಸಹಕಾರ ಸಂಘದ ನಡುವಣ ವ್ಯವಹಾರಕ್ಕೆ ಸಮಸ್ಯೆಯಾಗಿರುತ್ತದೆ. ಚೆಕ್ ನೀಡುವುದರ ಮೂಲಕ ಈ ಸಮಸ್ಯೆಯನ್ನು ಪೂರ್ಣವಾಗಿ ಬಗೆಹರಿಸಲು ಸಾಧ್ಯವಿರುವುದಿಲ್ಲ.

ಈ ಸಮಸ್ಯೆಗಳು ಇನ್ನೂ ಕೆಲವು ದಿನಗಳ ಕಾಲ ಇದೇ ರೀತಿ ಮುಂದುವರೆದರೆ, ಈ ಸಹಕಾರ ಸಂಘಗಳ ವ್ಯವಹಾರದ ಸಮತೋಲನವೇ ತಪ್ಪಿಹೋಗುತ್ತದೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಡಿಸೆಂಬರ್ 16ರ ನಂತರದಲ್ಲಿ ಪರಿಸ್ಥಿತಿ ಸುಧಾರಿಸುತ್ತದೆ ಎಂಬ ನಿರೀಕ್ಷೆ ಇದ್ದರೂ, ಸಹಕಾರ ಸಂಘಗಳ ವಹಿವಾಟಿಗೆ ಈಗಾಗಲೇ ನಕಾರಾತ್ಮಕ ಪರಿಣಾಮ ಉಂಟಾಗಿರುವುದರಿಂದ ಮಾರ್ಚ್ 17ರ ಅಂತ್ಯಕ್ಕೆ ಸಾಲ ವಸೂಲಾತಿ, ವ್ಯಾಪಾರ ಅಭಿವೃದ್ಧಿ ಮುಂತಾದ ವಿಷಯಗಳಲ್ಲಿ ಪ್ರಗತಿ ಕುಂಠಿತವಾಗುವುದರಿಂದ, ಸಹಕಾರ ಸಂಘಗಳ ವಾರ್ಷಿಕ ವಹಿವಾಟಿನಲ್ಲಿ ಕೊರತೆ ಆಗುವುದರ ಜೊತೆಗೆ ಅನೇಕ ಸಹಕಾರ ಸಂಘಗಳು ನಷ್ಟಕ್ಕೆ ಹೋಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಇದರ ಪರಿಣಾಮವು ಮುಂಬರುವ ವರ್ಷಗಳಲ್ಲೂ ಇರುತ್ತದೆ ಎಂಬುದು ಬಹಳ ಗಂಭೀರವಾದ ವಿಷಯ. ನೋಟು ರದ್ದತಿಗೆ ಸಹಕಾರ ಕ್ಷೇತ್ರದ ವಿರೋಧ ಕಿಂಚಿತ್ತೂ ಇಲ್ಲ.

ಆದರೆ ಈ ಕ್ಷೇತ್ರದ ಮೇಲೆ ಆಗಿರುವ ನಕಾರಾತ್ಮಕ ಪರಿಣಾಮಗಳನ್ನು ಪರಿಹರಿಸಿಕೊಳ್ಳುವುದು ಹೇಗೆ ಎಂಬುದು ನಮ್ಮೆಲ್ಲರ ಮುಂದಿರುವ ಮುಖ್ಯ ಅಜೆಂಡಾ...!

ಅರ್ಥ ಕ್ರಾಂತಿ–ಸಹಕಾರ

▸▸ ಶಿವಪ್ರಸಾದ್ ಟಿ.,
ಕಿರಿಯ ಸಹಾಯಕ, ಕ.ರಾ.ಸೌ.ಸಂ.ಸ.ನಿ., ಕೇಂದ್ರ ಕಛೇರಿ, ಬೆಂಗಳೂರು.

ದೇಶದೆಲ್ಲೆಡೆ ಕ್ರಾಂತಿ ಎಂಬ ಪದ ಉಗಮವಾದ ನಂತರ ಕಂಡು ಬರುವ ಸಾಮಾನ್ಯ ಅಂಶಗಳೆಂದರೆ ಪರ–ವಿರೋಧ, ಬದಲಾವಣೆ, ಏಳಿಗೆ, ಸಮಸ್ಯೆಗಳು ಮತ್ತು ಅದರ ಪರಿಹಾರ ಮಾರ್ಗ. ಕ್ರಾಂತಿಯ ಹಾದಿ ಹಿಡಿದ ನಂತರ ಹೆಚ್ಚಿನ ಪಕ್ಷ ಅಭಿವೃದ್ಧಿಯ ಪಥವನ್ನೇ ಕಂಡಿರುವುದು ನಮ್ಮ ಭಾರತ ದೇಶದಲ್ಲಿ ಇತಿಹಾಸ. ಇದಕ್ಕೆ ಉದಾಹರಣೆಯನ್ನೂ ಸಹ ಕಾಣಬಹುದು. ಈ ಬದಲಾವಣೆ ಅವಶ್ಯಕತೆಯು ಯಾವಾಗ ಗಮನಿಸಲಾಗುವುದೆಂದರೆ– ಸಮಸ್ಯೆ ಅತಿರೇಕಕ್ಕೆ ತಲುಪಿದಾಗ, ದೇಶದ ಅಭಿವೃದ್ಧಿಗೆ ಕಂಟಕ ಪ್ರಾಯವಾದಾಗ ಮತ್ತು ಒಂದು ಸಮೂಹ ಒಟ್ಟಾಗಿ ಎದ್ದುನಿಂತು ಈ ಎಲ್ಲಾ ನಷ್ಟಗಳನ್ನು ತಡೆಯಲಾರದೇ ಪ್ರತಿರೋಧಿಸುವ ಕಾರ್ಯವಿಧಾನವೇ ಕ್ರಾಂತಿಯಾಗಿದೆ.

ಕ್ರಾಂತಿ ಪದ ಬಳಕೆಯು ಹಿಂದೆ ರಾಜ ಮಹಾರಾಜರ ಕಾಲದಿಂದ ಹಿಡಿದು ಭಾರತ ಸ್ವಾತಂತ್ರ್ಯದ ನಂತರವು ಕೇಳಿರುವುದು ಸತ್ಯ. ಕ್ರಾಂತಿಯ ಅವಶ್ಯಕತೆ ಏನು? ಕ್ರಾಂತಿಯಿಂದಾಗುವ ಪರಿಣಾಮಗಳೇನು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವಷ್ಟರಲ್ಲಿ ಜನ ಸಾಮಾನ್ಯರು ತಾವಾಗಿಯೇ ಆ ಕ್ರಾಂತಿ ಭಾಗವಾಗಿರತ್ತಾರೆ. ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ, ಆ ಕ್ರಾಂತಿಯ ನೇತರನಾಗಿಯೋ ಅಥವಾ ಅದರ ಒಂದು ಭಾಗವಾಗಿ ಪರಿಣಮಿಸುವುದು ಸರ್ವೇ ಸಾಮಾನ್ಯ.

ಸಂಶೋಧನೆ, ಅಭಿವೃದ್ಧಿ ಮತ್ತು ತಂತ್ರಜ್ಞಾನದ ಬದಲಾವಣೆ ಹಂತ ಹಂತವಾಗಿ ದೇಶದೆಲ್ಲೆಡೆ ಕ್ರಾಂತಿ ಹಬ್ಬಿರುವುದು ಕಾಣಬಹುದು. ಈ ನಾನಾ ತರಹದ ಕ್ರಾಂತಿಗಳಿಗೆ ಕಾರಣ ಮತ್ತು ಅವುಗಳದ್ದೇ ಆದ ಬಣ್ಣ ವಿಶೇಷತೆಯ ಪಕ್ಷಿ ನೋಟ ತಿಳಿಯುವ.

ಮೇಲ್ಕಂಡ ಎಲ್ಲಾ ಕ್ರಾಂತಿಗಳು ಪ್ರಾರಂಭ ಹಂತದಲ್ಲಿ ಮಾಹಿತಿ ಕೊರತೆಯಿಂದ ಏಳಿಗೆ ಕಾಣಲಿಲ್ಲವಾದರೂ ತದ ನಂತರ ಹಂತ ಹಂತವಾಗಿ ಬೆಳವಣಿಗೆ ಹೊಂದಿದೆ. ಈ ಬೆಳವಣಿಗೆಯನ್ನು ಭಾರತ ಸರ್ಕಾರವು ಸಹ ಒಪ್ಪಿಕೊಂಡು ಪಂಚವಾರ್ಷಿಕ ಯೋಜನೆಗಳಲ್ಲಿ ಇಂತಹ ಕ್ರಾಂತಿಗಳನ್ನು ಅನುಸರಿಸಿ, ಗುಣಮಟ್ಟ ಹಾಗೂ ತಂತ್ರಜ್ಞಾನದ ಅಳವಡಿಸುವಿಕೆಗೆ ಯೋಜನೆ ರೂಪಿಸಿ, ಕೈಗಾರಿಕಾ ಕ್ರಾಂತಿ, ಕಚ್ಚಾ ತೈಲದ ಕ್ರಾಂತಿ, ಕೈಮಗ್ಗ ಮತ್ತು ನಾರು ಉತ್ಪನ್ನದ ಕ್ರಾಂತಿ, ಕೃಷಿ ಉಪಕರಣಗಳ ಅಳವಡಿಕೆ ಮತ್ತು ಬಳಕೆ ಕ್ರಾಂತಿ ದೇಶದಾದ್ಯಂತ ಜಾರಿಗೆ ತಂದು ಅದನ್ನು ಮೂಲ ಸೌಕರ್ಯಗಳ ಪಟ್ಟಿಗೆ ಸೇರಿಸಲಾಯಿತು. ಈ ಎಲ್ಲಾ ಯೋಜನೆಗಳು, ಕ್ರಾಂತಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವುದೆಂದರೆ ಬದಲಾವಣೆಯ ಅವಶ್ಯಕತೆಯನ್ನು ತಿಳಿದು, ತಂತ್ರಜ್ಞಾನದ ಬಳಕೆ ಮಹತ್ವ ಅರಿತು, ಸಂಶೋಧನೆ ಅಭಿವೃದ್ಧಿ ಪಥ ಕಂಡಿರುವುದು ಇತಿಹಾಸ. ಉದಾಹರಣೆಗೆ ಹಸಿರು ಕ್ರಾಂತಿಯ ಜನಕನಾಗಿ ಎಂ.ಎಸ್.ಸ್ವಾಮಿನಾಥನರ ವರದಿಯಂತೆ ಉತ್ಕೃಷ್ಟ ಆಹಾರ ಧಾನ್ಯ ಬೆಳೆ ಬೆಳೆದು ದೇಶ ಏಳಿಗೆಯನ್ನು ಕಂಡಿದ್ದೇವೆ.

ಕ್ಷೀರ ಕ್ರಾಂತಿಯ ಹರಿಕಾರನಾಗಿ ಡಾ. ವರ್ಗಿಸ್ ಕುರಿಯನ್‌ರ ಸೇವೆಯನ್ನು ಮರೆಯುವಂತಿಲ್ಲ. ಹಾಗೆಯೇ ಇನ್ನೂ ಹತ್ತು ಹಲವು ಬಗೆಯ ಕ್ರಾಂತಿಯ ಮುಂದಾಳತ್ವವನ್ನು ಪಡೆದು ಯಶಸ್ವಿಗೊಳಿಸಿದ್ದಾರೆ. ಪ್ರಸ್ತುತ ವಿದ್ಯಮಾನದಲ್ಲಿ ಪ್ರಮುಖವಾಗಿ ಸುದ್ಧಿಯಲ್ಲಿರುವುದು "ಅರ್ಥ ಕ್ರಾಂತಿ" 'ಅರ್ಥ' ಎಂದರೆ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ್ದು, 'ಕ್ರಾಂತಿ' ಎಂದರೆ ಆಂದೋಲನ. ಹಣಕಾಸಿನ ವ್ಯವಹಾರದಲ್ಲಿ ಆಂದೋಲನವೇ ಅರ್ಥ ಕ್ರಾಂತಿ.

- **ಅರ್ಥ ಕ್ರಾಂತಿ ಮೂಲ :** ಇದು ಸಹ ಎಲ್ಲಾ ಕ್ರಾಂತಿಗಳಂತೆಯೇ ಒಂದು. ಆರ್ಥಿಕ ತಜ್ಞರು, ಸನ್ನದು ಲೆಕ್ಕ ಪರಿಶೋಧಕರು, ತಂತ್ರಜ್ಞರ ಸಮೂಹ ಸೇರಿ ನಿರ್ಮಿಸಿರುವ ಸಂಸ್ಥೆಯಾಗಿದ್ದು, ಮಹಾರಾಷ್ಟ್ರದ ಪೂನಾದಲ್ಲಿರುವ ಏಕೈಕ ಧ್ಯೇಯೋದ್ದೇಶವುಳ್ಳ, ವಿಷಯಾಧಾರಿತ 'ಅರ್ಥ ಕ್ರಾಂತಿ ಸಂಸ್ಥಾನ' ಎಂಬ ಸಂಸ್ಥೆಯಾಗಿದೆ. ಅರ್ಥ ಕ್ರಾಂತಿಯ ವಿಷಯವನ್ನು ಭಾರತಕ್ಕೆ ಪರಿಚಯಿಸುವ ಅವಶ್ಯಕತೆ ಹಾಗೂ ಅನಿವಾರ್ಯತೆಯನ್ನು ಜನರ ಮುಂದಿಡಲು ಪರಿಶ್ರಮಿಸಿ, ಪ್ರಸ್ತುತ ಭಾರತದ ಆರ್ಥಿಕ ಪರಿಸ್ಥಿತಿಯ ಅವಲೋಕನೆ ಮತ್ತು ಸಂಶೋಧನೆ ನಡೆಸಿ ಪರಿಹಾರೋಪಾಯವನ್ನು ನೀಡುತ್ತಾ ಬಂದಿರುವುದು ಶ್ಲಾಘನೀಯ. ಈ ಸಂಸ್ಥೆಯ ಆಶಾವಾದ ಹಾಗೂ ಧ್ಯೇಯೋದ್ದೇಶದಂತೆ ಅರ್ಥ ಕ್ರಾಂತಿಯನ್ನು ಭಾರತದಲ್ಲಿ ಪರಿಚಯಿಸಿರುವುದು ಇದೇ 'ಅರ್ಥ ಕ್ರಾಂತಿ ಸಂಸ್ಥಾನ'.
- **ಅರ್ಥ ಕ್ರಾಂತಿಯ ಮಹತ್ವ :** ಈ ಮೊದಲೇ ತಿಳಿಸಿದಂತೆ ಅರ್ಥ ಕ್ರಾಂತಿಯು ಜನನವಾಗಿದೆಯೆಂದರೆ ಅದಕ್ಕೆ ತಕ್ಕಂತೆ ಪ್ರಬಲ ಕಾರಣವು ಇರುವುದು ಕಾಣಬಹುದು. ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಹಾಗೂ ದೇಶ ವಿಭಜನೆಯ ನಂತರವು ಸಾಮಾನ್ಯವಾಗಿ ಎದುರಿಸುತ್ತಿರುವ ಸಮಸ್ಯೆಗಳು ಹಲವಾರು. ಅವುಗಳಲ್ಲಿ ಪ್ರಮುಖ ಸ್ಥಾನದಲ್ಲಿರುವುದು ಆರ್ಥಿಕ ಸಮಸ್ಯೆ. ಇದರ ಜೊತೆಗೆ ಕಪ್ಪು ಹಣ ಬಳಕೆ, ಹಣದುಬ್ಬರ, ಹಣಕಾಸು ವ್ಯತ್ಯಯ, ಭ್ರಷ್ಟಚಾರ, ವಿತ್ತೀಯ ಕೊರತೆ, ನಿರುದ್ಯೋಗ ಸಮಸ್ಯೆ, ವಂಚನೆ ಮತ್ತು ಸುಲಿಗೆ, ಕೈಗಾರಿಕಾ ಅಭಿವೃದ್ಧಿ ಕೊರತೆ ಹಾಗೂ ಒಟ್ಟು ದೇಶದ ಉತ್ಪನ್ನದ ಕೊರತೆ, ಉತ್ತಮ ಆಡಳಿತದ ಕೊರತೆ ಇವೆಲ್ಲವು ಪ್ರಮುಖವಾದ ಕಾರಣಗಳು.
- **ಅರ್ಥ ಕ್ರಾಂತಿಯ ಪ್ರಸ್ತಾಪ :** ಅರ್ಥ ಕ್ರಾಂತಿಯ ಸಂಸ್ಥಾನವು ಮೇಲ್ಕಂಡ ಎಲ್ಲಾ ಸಮಸ್ಯೆಗಳನ್ನು ಅವಲೋಕಿಸಿ, ಸಂಶೋಧನೆ ನಡೆಸಿ ಎಲ್ಲಾ ತೊಂದರೆಗಳಿಗೂ ಪರಿಹಾರೋಪಾಯವಾಗಿ ಕೆಲವು ಅಂಶಗಳನ್ನು ಪರಿಗಣನೆಗೆ ತಂದು ಮಾರ್ಗ ಸೂಚಿಯನ್ನು ಪ್ರಾರಂಭಿಸಿತು. ಅಲ್ಲದೇ ದೇಶದ ನಾನಾ ಭಾಗಗಳಲ್ಲಿ ತಾವು ಈ ಸಮಸ್ಯೆಯ ಪರಿಹಾರಕ್ಕೆಂದು ಐದು

ಅಂಶಗಳ ಮಹತ್ವದ ಪ್ರಸ್ತಾಪವನ್ನು ಮುಂದಿಟ್ಟಿತು. ಈ ಒಂದು ಪ್ರಬಲ ನಿರ್ಧಾರ ಕೈಗೊಳುವ ಮುನ್ನ ಹಾಗೂ ನಂತರ ಆಗುವ ಬದಲಾವಣೆಯನ್ನು ಅವಲೋಕಿಸಿ ಪರಿಹಾರ ಹುಡುಕಿ, ಅಲ್ಲದೇ ಈ ಎಲ್ಲಾ ಅಂಶಗಳನ್ನು ಪ್ರಾಯೋಗಿಕವಾಗಿ ರೂಪುರೇಷೆ ತಂದ ನಂತರ ಆಗುವ ಉನ್ನತ ಬದಲಾವಣೆಯನ್ನು ಸಹ ದೇಶದ ಮಹಾ ಜನತೆಗೆ ತಿಳಿಸಿತು. ಇದರ 5 ಅಂಶದ ಪ್ರಸ್ತಾವನೆಯೆಂದರೆ–

1. **ದೇಶದಲ್ಲಿರುವ ನಾನಾ ಬಗೆಯ ಸುಮಾರು 56 ತರಹದ ತೆರಿಗೆಗಳನ್ನು ತೆಗೆದು ಹಾಕುವುದು.**

2. **ರೂ.100, 500, 1000 ಮುಖ ಬೆಲೆಯ ನೋಟುಗಳನ್ನು ಭಾರತ ಸರ್ಕಾರ ಸಂಪೂರ್ಣವಾಗಿ ಚಲಾವಣೆಯಾಗದಂತೆ ವಾಪಸ್ಸು ಪಡೆದು, ಅದರ ಚಲಾವಣೆಯಾಗದಂತೆ ರದ್ದು ಪಡಿಸಲು ನಿರ್ಧರಿಸಬೇಕು.**

3. **ಹೆಚ್ಚಿನ ಹಣಕಾಸು ವ್ಯವಹಾರವನ್ನು ನೇರ ಬ್ಯಾಂಕಿಂಗ್‌ನ ವಿವಿಧ ಸೌಲಭ್ಯಗಳ (RTGS/NEFT/Cheques/DD) ಮೂಲಕವೇ ನಡೆಸಬೇಕು.**

4. **ಸರ್ಕಾರ ನೇರವಾಗಿ ರೂಪಾಯಿ ವ್ಯವಹಾರಕ್ಕೆ ಮಿತಿಯನ್ನು ಒದಗಿಸಿ, ಅದನ್ನು ಪಾಲಿಸುವಂತೆ ಹಾಗೂ ಈ ತರಹದ ಹಣಕಾಸು ವ್ಯವಹಾರಕ್ಕೆ ಯಾವುದೇ ತೆರಿಗೆಯನ್ನು ಹಾಕುವುದನ್ನು ನಿಲ್ಲಿಸಬೇಕು.**

5. **ಭಾರತ ಸರ್ಕಾರವು ಕಂದಾಯ ವಸೂಲಾತಿಯ ನಿಯಮವನ್ನು ಏಕರೂಪ ತೆರಿಗೆ ಹಾಗೂ ಇದನ್ನು ಸಹ ಬ್ಯಾಂಕುಗಳ ಮುಖಾಂತರ 'ಬ್ಯಾಂಕಿಂಗ್ ವ್ಯವಹಾರ ತೆರಿಗೆ' (Banking Transaction Tax) ಒಳಪಟ್ಟು ಪಡೆದುಕೊಳ್ಳಬೇಕು.**

ಈ ಮೇಲಿನ ಪ್ರಸ್ತಾವನೆಯನ್ನು ಕಳೆದ 10 ವರ್ಷಗಳಿಂದ ಸತತವಾಗಿ ವಿವರ ಮಾಹಿತಿ ನೀಡಿ ಇದರಿಂದಾಗುವ ಉಪಯೋಗಗಳನ್ನು ಜನ ಸಾಮಾನ್ಯರ ಮುಂದೆ ರಾಜಕೀಯ ಪಕ್ಷಗಳು, ವಿವಿಧ ಸಂಘ ಸಂಸ್ಥೆಗಳಿಗೆ ತಿಳಿ ಹೇಳುವ ಕಾರ್ಯವನ್ನು ಅರ್ಥ ಕ್ರಾಂತಿಯ ಸಂಸ್ಥಾನವು ಶ್ರಮಪಟ್ಟಿದೆ.

✔ ಅರ್ಥ ಕ್ರಾಂತಿಯ ಉಪಯೋಗ ಮತ್ತು ಬದಲಾವಣೆ :

- ಕಳೆದ 5 ವರ್ಷದ ಕ್ರಮಾನುಗತ ಹಣಕಾಸು ವ್ಯವಹಾರವು ಇಡೀ ದೇಶದಲ್ಲಿ ದಿನಕ್ಕೆ ರೂ.2.7 ಲಕ್ಷ ಕೋಟಿಯಾದರೆ ವರ್ಷಕ್ಕೆ ರೂ.800 ಲಕ್ಷ ಕೋಟಿ ವ್ಯವಹರಿಸುತ್ತದೆ. ಆದರೆ, ಇದರಲ್ಲಿ ಕೇವಲ ಶೇಕಡ 20ರಷ್ಟು ಬ್ಯಾಂಕಿಂಗ್ ಸೌಲಭ್ಯದ ಮೂಲಕವಾದರೇ ಇನ್ನೂ ಶೇಕಡ 80ರಷ್ಟು ನೇರ ರೂಪಾಯಿ ಮೌಲ್ಯದಲ್ಲಾಗುತ್ತದೆ. ಇಂತಹ ವ್ಯವಹಾರವು ಯಾವುದೇ ಪರಿಗಣನೆಗೆ ಅಥವಾ ಲೆಕ್ಕಕ್ಕೇ ಸಿಗುವುದಿಲ್ಲ.
- ಅರ್ಥ ಕ್ರಾಂತಿ ಸಂಸ್ಥಾನದ ಪ್ರಕಾರ ದೇಶದಲ್ಲಿರುವ GDP (ದೇಶದ ಒಟ್ಟು ಉತ್ಪಾದನೆ)ಗೆ ತಕ್ಕಂತೆ ಹೋಲಿಸಿದರೆ ಶೇಕಡ 78 ಜನಸಂಖ್ಯೆಗೆ ಕೇವಲ ರೂ.20/– ದಿನದ ಖರ್ಚು. ಹೀಗಿರುವಾಗ ರೂ.500 ಹಾಗೂ ರೂ.1000 ಮುಖ ಬೆಲೆಯ ನೋಟಿನ ಅವಶ್ಯಕತೆ ಇರುವುದಿಲ್ಲ.
- ಸೇವಾ ತೆರಿಗೆ, ವ್ಯಾಟ್ ಹೀಗೆ 56 ಬಗೆಯ ನಾನಾ ರೀತಿಯ ತೆರಿಗೆ ನಿಲ್ಲಿಸಿದರೆ, ವ್ಯರ್ಥವಾಗಿ ಕಟ್ಟುವ ಕೆಲವು ತೆರಿಗೆಗಳನ್ನು ನಿಲ್ಲಿಸಿ, ಆ ಹಣವನ್ನು ಸಾಮಾನ್ಯ ಉಪಯೋಗಕ್ಕಿರುವ ವಸ್ತು ಖರೀದಿಗೆ ತೊಡಗಿಸಬಹುದು. ಅಲ್ಲದೇ, ಕಚ್ಚಾ ತೈಲದ ಬೆಲೆ ಕಡಿಮೆಯಾಗಿ ರಫ್ತುವಿನ ಮೇಲಿನ ತೆರಿಗೆ ಕಡಿತಗೊಳ್ಳುತ್ತದೆ. ಇದರಿಂದ ತೆರಿಗೆ ವಿನಾಯಿತಿಗೆ ಹುಡುಕುವ ಅಡ್ಡ ಮಾರ್ಗಗಳು ಸಹ ನಿಂತು ದೇಶದ ಏಳಿಗೆಗೆ ತೆರಿಗೆ ಕಟ್ಟುವಲ್ಲಿ ಜನ ಸಾಮಾನ್ಯರೇ ಮುಂದಾಗುತ್ತಾರೆ.
- ಸ್ವಯಂ ಪ್ರೇರಿತವಾಗಿ ತೆರಿಗೆ ವಂತಿಸುವುದರಿಂದ ದೇಶದಲ್ಲಿ ಕೈಗಾರಿಕೆ ಹಾಗೂ ಕೃಷಿಯಲ್ಲಿ ಬೆಳವಣಿಗೆಯ ಜೊತೆ ಜೊತೆಗೆ ಜನರು ಸ್ವಾವಲಂಬಿಗಳಾಗುತ್ತಾರೆ ಹಾಗೂ ನಿರುದ್ಯೋಗ ನಿವಾರಣೆಯಾಗುತ್ತದೆ.
- ಈ ಮಹತ್ವಾಕಾಂಕ್ಷಿ ಅಂಶಗಳಲ್ಲಿ ಅತ್ಯಂತ ಕಠಿಣವಾದ ರೂ.500, 1000 ಮುಖ ಬೆಲೆಯ ರೂಪಾಯಿ ನಿಷೇಧಿಸುವ ನಿರ್ಧಾರದಿಂದ ನೇರವಾಗಿ ಭ್ರಷ್ಟಾಚಾರ, ಕಪ್ಪು ಹಣ ಚಲಾವಣೆ, ಭಯೋತ್ಪಾದನೆಯಂತಹ ಅನೈತಿಕ ಚಟುವಟಿಕೆಗೆ ಬಳಸುವ ಈ ಹಣವು ಸಂಪೂರ್ಣವಾಗಿ ನಿಷಿದ್ಧವಾಗುತ್ತದೆ.

ಇದಿಷ್ಟು ಅರ್ಥ ಕ್ರಾಂತಿ ಸಂಸ್ಥಾನದ ಮುಖ್ಯ ಐದು ಅಂಶಗಳ ಬದಲಾವಣೆ ಉಪಯೋಗ ಮತ್ತು ಪರಿಣಾಮಗಳು.

ಅರ್ಥ ಕ್ರಾಂತಿ ಈ ಐದು ಅಂಶದ ವಿಷಯವನ್ನು ನಮ್ಮ ದೇಶದ ಘನತೆವೆತ್ತ ಭಾರತ ಸರ್ಕಾರದ ಮುಂದಿಟ್ಟು, ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಸವಿವರವಾದ ಚರ್ಚೆಯ ನಂತರ ಈ ಪ್ರಸ್ತಾವನೆ ಒಪ್ಪಿಕೊಂಡು, ಇದೇ ಆರ್ಥಿಕ ವರ್ಷದಲ್ಲೇ ಜಾರಿ ಬರುವಂತೆ ಭರವಸೆ ನೀಡಿದ್ದರು. ಪ್ರಧಾನ ಮಂತ್ರಿಯವರು ವಿಶೇಷ ಆಸಕ್ತಿ ವಹಿಸಿ ಸಮಾಲೋಚನೆ ನಂತರ ದೇಶದ ಹಿತದೃಷ್ಟಿಯಿಂದ ಅಂಗೀಕರಿಸಿ 5 ಅಂಶದ ಅರ್ಥ ಕ್ರಾಂತಿಯ ನಿರ್ಧಾರಗಳಲ್ಲಿ ಪ್ರಾಯೋಗಿಕವಾಗಿ ತರಲು ಅತ್ಯಂತ ಕ್ಲಿಷ್ಟಕರವಾದ ಮತ್ತು ಕಠಿಣವಾದ ಅಂಶ ರೂ.500, 1000 ಮುಖ ಬೆಲೆಯ ನೋಟುಗಳನ್ನು ಸ್ಥಗಿತಗೊಳಿಸುವಂತೆ ಇದೇ 8 ನವೆಂಬರ್ 2016ರಿಂದ ಜಾರಿಗೆ ತಂದಿರುವುದು ಶ್ಲಾಘನೀಯ ಸಂಗತಿ. ಈ ನಿರ್ಧಾರವನ್ನು ಕೈಗೊಂಡ ಭಾರತ ಸರ್ಕಾರ ಹಾಗೂ ಅರ್ಥಕ್ರಾಂತಿ ಸಂಸ್ಥಾನದ ಕಾರ್ಯಕ್ಕೆ ಸಂಪೂರ್ಣ ಬೆಂಬಲ ನೀಡುವುದು ನಮ್ಮೆಲ್ಲರ ಜವಾಬ್ದಾರಿಯು ಹೌದು. ಯಾವುದೇ ನಿರ್ಧಾರಕ್ಕೆ ಮುಂದಾದಾಗ ಕೆಲವು ಪ್ರಾಯೋಗಿಕ ತೊಂದರೆ ಹಾಗೂ ಎಡರು–ತೊಡರುಗಳು ಕಂಡು ಬರುವುದು ಸಹಜ. ಈ ಮೊದಲೇ ತಿಳಿಸಿದಂತೆ ಯಾವ ಕ್ರಾಂತಿಯೂ ಸಹ ಜಾರಿಗೆ ಬಂದ ತಕ್ಷಣದಲ್ಲೇ ಪ್ರತಿಫಲ ನೀಡಿಲ್ಲ ಹಾಗೂ ಫಲಶ್ರುತಿಯನ್ನು ಪರಾಮರ್ಶಿಸುವುದು ತಪ್ಪು.

ನೋಟುಗಳ ಬದಲಾವಣೆ ಆದೇಶದಿಂದ ಸಾಮಾನ್ಯ ಜನರಿಗೆ ವ್ಯವಹರಿಸಲು ತೊಂದರೆಯಾಗದಂತೆ ಈ ಸಮಸ್ಯೆಯು ಜನಸಾಮಾನ್ಯರ ನಡುವೆ ವ್ಯವಹರಿಸುವ ಹಾಗೂ ಗ್ರಾಮೀಣ ಭಾಗದಲ್ಲಿ ವ್ಯವಹರಿಸುವ ನಮ್ಮ ಸಹಕಾರಿಗಳಿಗೆ ತೊಂದರೆಯಾಗಿರುವುದು ಅಷ್ಟೇ ಸತ್ಯದ ಸಂಗತಿ. ರೂಪಾಯಿ ನೋಟುಗಳ ಬದಲಾವಣೆಗೆ ಹಾಗೂ ಹೊಸ ನೋಟುಗಳ ಚಲಾವಣೆ ವ್ಯವಸ್ಥೆಗೆ ಕೇವಲ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಮಾತ್ರ ಸೇವೆ ಒದಗಿಸಲು ಅವಕಾಶ ಕಲ್ಪಿಸಿ, ಪತ್ತಿನ ವ್ಯವಹಾರ ನಡೆಸುವ ಸೌಹಾರ್ದ ಸಹಕಾರಿಗಳಿಗೆ, ಸಹಕಾರಿ ಬ್ಯಾಂಕುಗಳನ್ನು ಕಡೆಗಣಿಸಿರುವುದು ವಿಷಾದನೀಯ. ಇದಲ್ಲದೇ ವೈಯಕ್ತಿಕ ಮಿತಿ ಒಬ್ಬ ವ್ಯಕ್ತಿಗೆ ವಿಧಿಸಿರುವಂತೆ ಸಹಾಯ ಹಸ್ತ ಕಲ್ಪಿಸುವ, ಗ್ರಾಮೀಣ ಅಭಿವೃದ್ಧಿಗೆ ಒಡನಾಡಿಯಾಗಿರುವ ನಮ್ಮ ಸಹಕಾರಿಗಳಿಗೂ ಅಷ್ಟೇ ಮಿತಿಯನ್ನು ನೀಡಿರುವುದು ಪರೋಕ್ಷವಾಗಿ ಸಹಕಾರಿ ಬೆಳವಣಿಗೆಗೆ ಕುಂಠಿತವಾಗುವ ಸಾಧ್ಯತೆಗಳು ಇರುವುದರಿಂದ ಕೇಂದ್ರ ಸರ್ಕಾರ ಈ ಕೂಡಲೇ ಗಮನಹರಿಸಿ ಮುಂದಿನ ದಿನಗಳಲ್ಲಾದರೂ ಸಹಕಾರಿ ಸಂಸ್ಥೆಗಳೂ ರೂ.500, 1000 ಬೆಲೆಯ ನೋಟು ಬದಲಾವಣೆಗೆ ಹಾಗೂ ಹೊಸ ನೋಟುಗಳ ಚಲಾವಣೆ ವ್ಯವಸ್ಥೆಗೆ ಅವಕಾಶ ಕಲ್ಪಿಸಿಕೊಟ್ಟು ದೇಶದ ಏಳಿಗೆಯ ಹಾದಿಯಲ್ಲಿ "ಎಲ್ಲರಿಗಾಗಿ ನಾವು, ನಮಗಾಗಿ ಎಲ್ಲರೂ" ಎಂಬ ಸಹಕಾರಿ ನಾಣ್ನುಡಿಯನ್ನು ಸಾರ್ಥಕಗೊಳಿಸುವುದು ಅನಿವಾರ್ಯವಾಗಿದೆ.

ಅನುತ್ಪಾದಿತ ಆಸ್ತಿ (ಎನ್.ಪಿ.ಎ.) ನಿರ್ವಹಣೆ

▸▸ ಎಸ್.ಎಸ್.ಕಟಗೇರಿ, ಸಹಾಯಕ ನಿಬಂಧಕರು (ನಿವೃತ್ತ)

ದೇಶದಲ್ಲಿ ಸಹಕಾರ ಚಳುವಳಿ ಪ್ರಾರಂಭವಾದ ಇತಿಹಾಸ. ಬೆಳವಣಿಗೆ ಮತ್ತು ಸದ್ಯದ ಸ್ಥಿತಿಗಳನ್ನು ಗಮನಿಸಿದಾಗ ಈ ಸಹಕಾರ ರಂಗದಲ್ಲಿ ಸಾಕಷ್ಟು ಬದಲಾವಣೆಗಳಾಗಿರುವುದು ನಮಗೆ ವೇದ್ಯವಾಗುತ್ತದೆ. ಮೂಲತ: "ಲಾಭವೂ ಇಲ್ಲ ನಷ್ಟವೂ ಇಲ್ಲ" ಎಂಬ ತತ್ವದಡಿ ಸ್ಥಾಪನೆಗೊಂಡ ಸಹಕಾರ ಸಂಸ್ಥೆಗಳು ಸದಸ್ಯನ ಹಿತಾಸಕ್ತಿ ಕಾಪಾಡುವ ಪ್ರಮುಖ ಧ್ಯೇಯ ಹೊಂದಿದ್ದವು. ಮಧ್ಯಸ್ಥಗಾರರ ಹಾವಳಿಯಿಂದ ಕಂಗೆಟ್ಟ ಸದಸ್ಯನನ್ನು ಪಾರು ಮಾಡುವಲ್ಲಿ ಯಶಸ್ವಿಯಾದವು. ಅನಂತರ ಕಾಲ ಬದಲಾದಂತೆ ಮೂಲ ತತ್ವವನ್ನು ಗೌಣವಾಗಿಸಿ ಸಹಕಾರ ಸಂಸ್ಥೆಗಳು ಲಾಭಗಳಿಸುವತ್ತ ಹೆಚ್ಚಿನ ಗಮನಹರಿಸ ತೊಡಗಿದವು. ಹೆಚ್ಚಿನ ಲಾಭಗಳಿಸುವ ಸಂಸ್ಥೆಗಳು ಮನ್ನಣೆ ಪಡೆಯುವಂತಾಯಿತು. ಪರಿವರ್ತನೆ ಜಗದ ನಿಯಮ.

ಈ ನಿಯಮಕ್ಕನುಸಾರವಾಗಿಯೇ ಸಮಯ ಸಂದಂತೆಲ್ಲಾ ಮನ್ನಣೆ ನೀಡುವ ಮಾನದಂಡಗಳು ಬದಲಾಗುತ್ತಾ ಬಂದವು. ಈಗ ಬ್ಯಾಂಕಿಂಗ್ ಕ್ಷೇತ್ರದಲ್ಲಿ "ಆರೋಗ್ಯಕರ ಬ್ಯಾಂಕ್" ಎಂದು ಪರಿಗಣಿಸಲು ಎನ್.ಪಿ.ಎ. ಮಾನದಂಡ ಬಳಸಲಾಗುತ್ತಿದೆ. ಇದೇ ಮಾನದಂಡವನ್ನು ಪಟ್ಟಣ ಸಹಕಾರಿ ಬ್ಯಾಂಕುಗಳಿಗೂ ಅನ್ವಯಿಸಲಾಗುತ್ತಿರುವುದು ವಿಷಾದನೀಯ. ಈ ಮಾನದಂಡವನ್ನಾಧರಿಸಿ ಗ್ರೇಡ್-1, ಗ್ರೇಡ್-2, ಗ್ರೇಡ್-3, ಗ್ರೇಡ್-4 ಬ್ಯಾಂಕುಗಳೆಂದು ಪರಿಗಣಿಸಲಾಗುತ್ತಿದೆ. ಬ್ಯಾಂಕುಗಳು ಜನತೆಗೆ ಒದಗಿಸುವ ಸೇವೆ ವಿಷಯದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳೊಂದಿಗೆ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕು/ ಸೌಹಾರ್ದ ಸಹಕಾರಿಗಳನ್ನು ಹೋಲಿಸಿದಾಗ ಇವೆರಡಕ್ಕೂ ಒಂದೇ ಅಳತೆಗೋಲನ್ನು ಬಳಸಲಾಗದೆಂಬುದು ಸ್ಪಟಿಕದಷ್ಟು ಸ್ಪಷ್ಟವಾಗಿದೆ. ತನ್ನ ಸದಸ್ಯರ ಹಿತಾಸಕ್ತಿ ಕಾಪಾಡುವಲ್ಲಿ, ಅವರ ಆರ್ಥಿಕ ಸ್ಥಿತಿ-ಗತಿ ಸುಧಾರಣೆಗೆ ಕಾಳಜಿ ತೋರುವಲ್ಲಿ ಮತ್ತು ಅವರೇ ಪ್ರಭುಗಳೆಂದು ಪರಿಗಣಿಸಿ ಕಳಕಳಿಯಿಂದ ಸೇವೆ ಒದಗಿಸುವಲ್ಲಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕುಗಳು ಮುಂಚೂಣಿಯಲ್ಲಿದ್ದರೆ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇವ್ಯಾವುದೂ ಕಂಡುಬರುವುದಿಲ್ಲ. ಆದಾಗ್ಯೂ ಒಂದೇ ಮಾನದಂಡವನ್ನು ಇವೆರಡು ಬ್ಯಾಂಕುಗಳಿಗೆ ಬಳಸಲಾಗುತ್ತಿರುವುದಂತೂ ಸತ್ಯ. ಮೇಲ್ನೋಟಕ್ಕೆ ಶಾಪವೆಂದು ಕಂಡುಬಂದರೂ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕುಗಳ/ ಸೌಹಾರ್ದ ಸಹಕಾರಿಗಳ ಆರೋಗ್ಯಕರ ಬೆಳವಣಿಗೆಯ ಹಿತದೃಷ್ಟಿಯಿಂದ ಈ "ಶಾಪ"ವನ್ನು "ವರ"ವಾಗಿ ಪರಿವರ್ತಿಸಬಹುದು. ಅದಕ್ಕಾಗಿ ಈಗ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕುಗಳನ್ನು/ ಸೌಹಾರ್ದ ಸಹಕಾರಿಗಳನ್ನು ಪೀಡಿಸುತ್ತಿರುವ ಎನ್.ಪಿ.ಎ. ಭೂತವನ್ನು ಉಚ್ಚಾಟಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಲೇಬೇಕಾಗಿದೆ.

ಈ ಎನ್.ಪಿ.ಎ. ಭೂತ ಒಂದೇ ಸಾರಿ, ಒಂದೇ ದಿನಕ್ಕೆ ತೊಲಗುವಂತಹದ್ದಲ್ಲ. ಹಂತ ಹಂತವಾಗಿ ಜಾಗರೂಕತೆಯಿಂದ ಕ್ರಮಗಳನ್ನು ಕೈಗೊಳ್ಳುತ್ತಾ ಹೋದಂತೆಲ್ಲಾ ಈ ಪೀಡೆ ಕಡಿಮೆಯಾಗುತ್ತಾ ಹೋಗುತ್ತದೆ ಮತ್ತು ಕೊನೆಗೆ ಶೂನ್ಯಾವಸ್ಥೆಗೆ ಬರುತ್ತದೆ. ಈ ಕಾರ್ಯಕ್ರಮದಲ್ಲಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕಿನ/ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿ, ಮುಖ್ಯಕಾರ್ಯನಿರ್ವಾಹಕ ಹಾಗೂ ಮಾರಾಟಾಧಿಕಾರಿಗಳು ಮುತುವರ್ಜಿ ವಹಿಸಿ ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸಿದಲ್ಲಿ ಅತಿಶೀಘ್ರದಲ್ಲಿ ಶೂನ್ಯಾವಸ್ಥೆಗೆ ತಲುಪಬಹುದು. ಈ ಶೂನ್ಯ ಸಂಪಾದನೆಯ ಕಾರ್ಯಾಚರಣೆಯಲ್ಲಿ ಅನುಸರಿಸಬೇಕಾದ ಕೆಲವು ಸಲಹಾತ್ಮಕ ಕ್ರಮಗಳನ್ನು (ಸೂತ್ರಗಳು) ಕೆಳಗೆ ವಿವರಿಸಲಾಗಿದೆ.

ಆಡಳಿತ ಮಂಡಲಿ : ಸಹಕಾರಿಯ/ ಸೌಹಾರ್ದ ಸಹಕಾರ ಬ್ಯಾಂಕಿನ ಆಡಳಿತ ಮಂಡಲಿಯು ಬ್ಯಾಂಕಿನ ಎನ್.ಪಿ.ಎ. (ಅನುತ್ಪಾದಿತ ಆಸ್ತಿ) ಪ್ರಮಾಣವನ್ನು ಸದಾ ನಿಯಂತ್ರಣದಲ್ಲಿಡುವುದಕ್ಕಾಗಿ ಕೆಳಗೆ ವಿವರಿಸಲಾದ ಪಂಚ ಸೂತ್ರಗಳನ್ನು ಅನುಷ್ಠಾನಗೊಳಿಸುವುದು ಸೂಕ್ತ.

1. ಎನ್.ಪಿ.ಎ. (ಅನುತ್ಪಾದಿತ ಆಸ್ತಿ) ನಿಯಂತ್ರಣಕ್ಕಾಗಿ ಆಡಳಿತ ಮಂಡಲಿಯ ಉಪ-ಸಮಿತಿಯನ್ನು ತಕ್ಷಣ ರಚಿಸಬೇಕು. ಈಗ ಪ್ರತಿಯೊಂದು ಪಟ್ಟಣ/ಸೌಹಾರ್ದ ಸಹಕಾರ ಬ್ಯಾಂಕಿನಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪರಿಣಿತರೊಬ್ಬರು ಆಡಳಿತ ಮಂಡಲಿಯ ಸದಸ್ಯರಾಗಿದ್ದಾರೆ. ಅದೇ ರೀತಿ ಲೆಕ್ಕ ಪತ್ರಗಳಲ್ಲಿ ಪರಿಣಿತರಾದ (ಆರ್ಥಿಕ) ತಜ್ಞರೊಬ್ಬರು ಸಹ ಆಡಳಿತ ಮಂಡಲಿಯ ಸದಸ್ಯರಾಗಿದ್ದಾರೆ. ಈ ಇಬ್ಬರು ಸದಸ್ಯರು ಉಪ-ಸಮಿತಿಯ ಸದಸ್ಯರಾಗಿರಬೇಕು ಮತ್ತು ಬ್ಯಾಂಕಿನ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಈ ಉಪ-ಸಮಿತಿಯ ಅಧ್ಯಕ್ಷರಾಗಿರಬೇಕು. ಈ ರೀತಿ ರಚಿಸಲ್ಪಟ್ಟ ಉಪ-ಸಮಿತಿಯು ವಾರದಲ್ಲೊಮ್ಮೆ ಸಭೆ ಸೇರಬೇಕು. ಸಭೆಯಲ್ಲಿ ಕೆಳ ಕಾಣಿಸಿದ ಅಂಶಗಳ ಬಗ್ಗೆ ಚರ್ಚಿಸಬೇಕು.

ಅ) ಈಗಾಗಲೇ ಬ್ಯಾಂಕಿನಿಂದ ನೀಡಲಾದ ವಿವಿಧ ರೀತಿಯ ಸಾಲಗಳು ಯಾವ-ಯಾವ ದಿನಾಂಕಗಳಂದು ಅನುತ್ಪಾದಿತ ಆಸ್ತಿಯಾಗಿ ಪರಿವರ್ತನೆಗೊಳ್ಳುತ್ತಿವೆ ಎಂಬುದನ್ನು ಪರಿಶೀಲಿಸಬೇಕು.

ಬ) ಹೀಗೆ ಪರಿವರ್ತನೆಗೊಳ್ಳುತ್ತಿರುವ ಸಾಲಗಳನ್ನು ಯಾವ ಸಾಲಗಾರರಿಗೆ ನೀಡಲಾಗಿದೆ? ಜಾಮೀನುದಾರರು ಯಾರು? ಎಂಬುದನ್ನು ಪರಿಶೀಲಿಸಿ ಸದರಿ ಸಾಲ ಅನುತ್ಪಾದಿತ ಆಸ್ತಿಯಾಗಿ ಪರಿವರ್ತನೆ ಹೊಂದುವ ದಿನಾಂಕಕ್ಕಿಂತ ಮುಂಚಿತವಾಗಿ ಬಾಕಿ ಸಾಲ/ಕಂತುಗಳನ್ನು ಮರುಪಾವತಿ ಮಾಡುವಂತೆ ಮನವೊಲಿಸುವ ಕ್ರಮವಿಡಬೇಕು.

ಕ) ಮನವೊಲಿಸುವ/ತಿಳುವಳಿಕೆ ನೀಡುವ ಕಾರ್ಯ ಕೈಗೊಂಡಾಗ್ಯೂ ಬಾಕಿ ಸಾಲ/ಕಂತುಗಳು ಮರುಪಾವತಿಯಾಗದ ಎಲ್ಲಾ ಪ್ರಕರಣಗಳಲ್ಲಿ ನೋಟೀಸು ಗಳನ್ನು ಸಂಬಂಧಪಟ್ಟ ಸಾಲಗಾರರಿಗೆ/ಜಾಮೀನುದಾರರಿಗೆ ನೀಡಲಾಗಿದೆಯೇ? ಎಂಬುದನ್ನು ಪರಿಶೀಲಿಸಬೇಕು.

ಡ) ವಿಷಯದಲ್ಲಿನ ಬೆಳವಣಿಗೆಗಳನ್ನು ಉಪ-ಸಮಿತಿಯ ಪ್ರತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳನ್ನು ಪ್ರತಿ ಮಾಹೆಯಲ್ಲಿ ಜರುಗುವ ಆಡಳಿತ ಮಂಡಲಿ ಸಭೆಯ ಗಮನಕ್ಕೆ ತರಬೇಕು.

2) ಕಳೆದ ಮಾಹೆಯಲ್ಲಿ ಸಾಲ ಮರುಪಾವತಿಯಿಂದ ಬಂದ ಒಟ್ಟು ಹಣದ ಮೊತ್ತ, ಬ್ಯಾಂಕಿನಲ್ಲಿಡಲಾದ ಠೇವಣಿಯ ಒಟ್ಟು ಮೊತ್ತ

ಮುಂತಾದವುಗಳನ್ನಾಧರಿಸಿ ಸಂಗ್ರಹವಾದ ಒಟ್ಟು ಹಣವನ್ನು ವಿಳಂಬಕ್ಕೆಡೆ ಇಲ್ಲದಂತೆ ಎಷ್ಟು ಪ್ರಮಾಣದಲ್ಲಿ ಬೇಡಿಕೆಗಳಿಗನುಸರಿಸಿ ಸಾಲ ಮಂಜೂರು ಮಾಡಬೇಕು? ಹೂಡಿಕೆಗಳಿಗಾಗಿ ಎಷ್ಟು ಹಣವನ್ನು ವಿನಿಯೋಗಿಸಬೇಕು? ಎಂಬುದನ್ನು ಪ್ರತಿ ಮಾಹೆಯ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳಬೇಕು.

3) ಅಮಲ್ಜಾರಿ ಪ್ರಕರಣಗಳಲ್ಲಿ ಚರಾಸ್ತಿ ಜಪ್ತಿ ಮುಖಾಂತರ ವಸೂಲಾತಿ ಕಾರ್ಯದಲ್ಲಿ ಮಾರಾಟಾಧಿಕಾರಿಯು ನಿರತನಾದಾಗ ಜಪ್ತಿಗಾಗಿ ನಿಗದಿಪಡಿಸಿದ ದಿನದಂದು ಬ್ಯಾಂಕಿನ ಅಧ್ಯಕ್ಷರು ವಸೂಲಾತಿ ತಂಡದೊಂದಿಗೆ ಹಾಜರಿರಬೇಕು. ಅನಿವಾರ್ಯ ಕಾರಣಗಳಿಂದಾಗಿ ಹಾಜರಾಗಲು ಸಾಧ್ಯವಾಗದಿದ್ದ ಪ್ರಸಂಗದಲ್ಲಿ ಅಧ್ಯಕ್ಷರ ಪ್ರತಿನಿಧಿಯಾಗಿ ಬ್ಯಾಂಕಿನ ಉಪಾಧ್ಯಕ್ಷರು ಅಥವಾ ಆಡಳಿತ ಮಂಡಲಿಯ ಸದಸ್ಯರಲ್ಲೊಬ್ಬರು ಹಾಜರಿರಬೇಕು. ಇವರ ಹಾಜರಾತಿ ವಸೂಲಿ ಕಾರ್ಯಕ್ಕೆ ಪೂರಕವಾಗಿದ್ದು ಸಕಾರಾತ್ಮಕ ನಿಲುವಿರಬೇಕೇ ಹೊರತು ಎಂದಿಗೂ ನಕಾರಾತ್ಮಕವಾಗಿರಬಾರದು.

4) ವಸೂಲಾತಿಯ ಯಶಸ್ವಿ ಕಾರ್ಯಾಚರಣೆಗಾಗಿ ಮಾರಾಟಾಧಿಕಾರಿಗೆ ಅಗತ್ಯ ಸಿಬ್ಬಂದಿ, ವಾಹನ ಸೌಕರ್ಯ ಇತ್ಯಾದಿ ಸೌಲಭ್ಯಗಳನ್ನು ಒದಗಿಸಬೇಕು.

5) ಬ್ಯಾಂಕಿನ/ಸಹಕಾರಿಯ ಆಡಳಿತ ಮಂಡಲಿ ಕೈಗೊಂಡ ನಿರ್ಣಯದ ಆಧಾರದ ಮೇಲೆ ವಸೂಲಾಧಿಕಾರಿಗಳು ಮಾರಾಟಾಧಿಕಾರಿಗೆ ಮಾರಾಟ ಅಧಿಕಾರ ನೀಡಿರುತ್ತಾರೆ. ಮಾರಾಟಾಧಿಕಾರಿಯು ವಸೂಲಾಧಿಕಾರಿಗಳ ಪ್ರತಿನಿಧಿಯಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಾವಳಿಗಳನ್ವಯ ಅಮಲ್ಜಾರಿ ಪ್ರಕರಣಗಳನ್ನು ನಿರ್ವಹಿಸಿ ವಸೂಲಾತಿ ಕಾರ್ಯದಲ್ಲಿ ನಿರತನಾಗಿರುತ್ತಾನೆ. ಹೀಗೆ ವಸೂಲಾಧಿಕಾರಿಗಳ ಅಧೀನ ಅಧಿಕಾರಿಯಾಗಿ ವಸೂಲಾತಿ ಕಾರ್ಯದಲ್ಲಿ ನಿರತನಾದ ಮಾರಾಟಾಧಿಕಾರಿಗೆ ಅವನ ನೇಮಕಾತಿ ಆದೇಶದಲ್ಲಿ ವಿಧಿಸಿದ ಷರತ್ತಿನ ಪ್ರಕಾರ ಬ್ಯಾಂಕಿಗೆ ಸಂಬಂಧಿಸಿದ ಇತರೆ ಕೆಲಸಗಳನ್ನು ವಹಿಸಬಾರದು ಮತ್ತು ಅವನು ಸಹಕಾರಿಯ ಸಿಬ್ಬಂದಿ ಎಂಬ ಕಾರಣಕ್ಕಾಗಿ ಅವನ ಮೇಲೆ ವಸೂಲಿ ಕಾರ್ಯ ಕುಂಠಿತವಾಗುವಂತಹ ಯಾವುದೇ ತೆರನಾದ ಪ್ರಭಾವ ಬೀರಬಾರದು ಮತ್ತು ವ್ಯತಿರಿಕ್ತ ಪರಿಣಾಮ ಉಂಟಾಗುವಂತಹ ಯಾವುದೇ ಒತ್ತಡಗಳನ್ನು ಹೇರಬಾರದು. ಬದಲಾಗಿ ಮಾರಾಟಾಧಿಕಾರಿಯು ನಿಶ್ಚಲ ಮನಸ್ಸಿನಿಂದ, ನಿರಾತಂಕವಾಗಿ ಮತ್ತು ಸರಾಗವಾಗಿ ಕಾರ್ಯನಿರ್ವಹಿಸುವಂತಹ ಮುಕ್ತ ವಾತಾವರಣವನ್ನು ಕಲ್ಪಿಸಿಕೊಡಬೇಕು.

ಮುಖ್ಯಕಾರ್ಯನಿರ್ವಾಹಕರು ಕೈಗೊಳ್ಳಬೇಕಾದ ಕ್ರಮ : ಯಾವುದೇ ಸಹಕಾರಿಯ/ಸೌಹಾರ್ದ ಸಹಕಾರಿ ಬ್ಯಾಂಕಿನ ಎನ್.ಪಿ.ಎ. (ಅನುತ್ಪಾದಿತ ಆಸ್ತಿ) ಪ್ರಮಾಣ ನಿಯಂತ್ರಣದಲ್ಲಿರಬೇಕಾದರೆ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನು ಸದಾ ಜಾಗೃತನಾಗಿರಬೇಕಾಗುತ್ತದೆ. ಪ್ರತಿದಿನವೂ ಬಹಳ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ಕಾರ್ಯದಲ್ಲಿ ಯಶಸ್ವಿಯಾಗಲು ಕೆಳಕಾಣಿಸಿದ ನವಾಂಶಗಳನ್ನು (ಮಂತ್ರಗಳು) ಗಮನದಲ್ಲಿರಿಸಿಕೊಳ್ಳುವುದು ಒಳಿತು.

01. ತಕ್ಷಣದಿಂದಲೇ ಕಾರ್ಯಪ್ರವೃತ್ತರಾಗಿ ಬ್ಯಾಂಕಿನಿಂದ ಈಗಾಗಲೇ ನೀಡಲಾದ ವಿವಿಧ ರೀತಿಯ ಸಾಲಗಳು ಯಾವ ಯಾವ ದಿನಾಂಕಗಳಂದು 'ಅನುತ್ಪಾದಿತ ಆಸ್ತಿ'ಯಾಗಿ ಪರಿವರ್ತನೆಗೊಳ್ಳುತ್ತಲಿವೆ ಎಂಬುದನ್ನು ಪರಿಶೀಲಿಸಿ ಸಾಲಗಾರರ ಪಟ್ಟಿ (ಸ್ಟೇಟ್‌ಮೆಂಟ್) ತಯಾರಿಸಬೇಕು. ಈ ಪಟ್ಟಿಯನ್ನು ಅನುಕ್ರಮವಾಗಿ ದಿನಾಂಕವಾರು ಬರುವಂತೆ ಮಾರ್ಪಡಿಸಬೇಕು.

02. ನೀಡಲಾದ ಸಾಲ ಅನುತ್ಪಾದಿತ ಆಸ್ತಿಯಾಗಿ ಪರಿವರ್ತನೆಗೊಳ್ಳುವ ದಿನಾಂಕಕ್ಕಿಂತ ಕನಿಷ್ಠ ಒಂದು ವಾರ ಅವಧಿಯ ಮುಂಚೆಯೇ ಸಂಬಂಧಪಟ್ಟ ಸಾಲಗಾರರು/ಜಾಮೀನುದಾರರಿಗೆ ತಕ್ಷಣ ಸಾಲ ಮರುಪಾವತಿ ಮಾಡಲು ತಿಳುವಳಿಕೆ ನೀಡಬೇಕು ಮತ್ತು ಇಂತಹ ಸಾಲಗಾರರ/ಜಾಮೀನುದಾರರ ಪಟ್ಟಿಯನ್ನು ಸಂಪೂರ್ಣ ವಿವರಗಳ ಸಮೇತ ಆಡಳಿತ ಮಂಡಲಿಯ ಉಪಸಮಿತಿ ಗಮನಕ್ಕೆ ತರಬೇಕು.

03. ಮನವೊಲಿಸುವ ಕ್ರಮ/ತಿಳುವಳಿಕೆ ನೀಡುವ ಕ್ರಮ ಫಲಕಾರಿಯಾಗದಿದ್ದಲ್ಲಿ ನೀಡಿದ ಸಾಲ ಅನುತ್ಪಾದಿತ ಆಸ್ತಿಯಾಗಿ ಪರಿವರ್ತನೆಗೊಂಡ ಮಾರನೆ ದಿನವೇ ಸಂಬಂಧಪಟ್ಟ ಸಾಲಗಾರರು/ಜಾಮೀನುದಾರರಿಗೆ ನೋಟೀಸು ನೀಡಬೇಕು. ಹೀಗೆ ಕರಾರುವಕ್ಕಾಗಿ ನಿಗದಿತ ದಿನಾಂಕಗಳಂದೇ ನೋಟೀಸುಗಳನ್ನು ನೀಡಲು ಅನುವಾಗುವಂತೆ ಮುಂಚಿತವಾಗಿ ನೋಟೀಸುಗಳನ್ನು ಸಿದ್ಧಪಡಿಸಿಕೊಂಡಿರಬೇಕು.

04. ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿಗೆ/ಸೌಹಾರ್ದ ಸಹಕಾರಿಗೆ ಸಾಲ ಮರುಪಾವತಿಯಿಂದ ಪ್ರತಿ ಮಾಹೆಯಲ್ಲಿ ಬಂದ ಒಟ್ಟು ಹಣದ ಮೊತ್ತ, ಬ್ಯಾಂಕಿನಲ್ಲಿಡಲಾದ ಠೇವಣಿಯ ಒಟ್ಟು ಮೊತ್ತ ಮುಂತಾದವುಗಳನ್ನಾಧರಿಸಿ ಸಂಗ್ರಹವಾದ ಹಣವನ್ನು ಯಾವುದೇ ವಿಳಂಬಕ್ಕೆ ಆಸ್ಪದವಾಗದಂತೆ ಬೇಡಿಕೆಗಳಿಗೆ ಅನುಸರಿಸಿ ಎಷ್ಟು ಪ್ರಮಾಣದ ಹಣವನ್ನು ಸಾಲದ ರೂಪದಲ್ಲಿ ಮಂಜೂರು ಮಾಡಬಹುದು? ಹೂಡಿಕೆಗಳಿಗಾಗಿ ಎಷ್ಟು ಪ್ರಮಾಣದ ಹಣವನ್ನು ವಿನಿಯೋಗಿಸಬಹುದು? ಎಂಬ ಬಗೆಗಿನ ಎಲ್ಲಾ ವಿವರಗಳನ್ನು ಶಿಫಾರಸ್ಸಿನೊಂದಿಗೆ ಆಡಳಿತ ಮಂಡಲಿ ಸಭೆಗೆ ಮಂಡಿಸಬೇಕು.

05. ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ/ಸೌಹಾರ್ದ ಸಹಕಾರಿಯ ಅಮಲ್ಜಾರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾರಾಟಾಧಿಕಾರಿಯು ಚರಾಸ್ತಿ ಜಪ್ತಿ ಮುಖಾಂತರ ವಸೂಲಾತಿ ಕಾರ್ಯದಲ್ಲಿ ನಿರತನಾದಾಗ ಜಪ್ತಿಗಾಗಿ ನಿಗದಿಪಡಿಸಿದ ದಿನದಂದು ವಸೂಲಾತಿ ತಂಡದೊಂದಿಗೆ ಹಾಜರಿರಬೇಕು. ಅಕಸ್ಮಾತ್ತಾಗಿ ಅನಿವಾರ್ಯ ಕಾರಣಗಳಿಂದ ಹಾಜರಾಗಲು ಸಾಧ್ಯವಾಗದ ಪ್ರಸಂಗದಲ್ಲಿ ಮುಖ್ಯಕಾರ್ಯನಿರ್ವಾಹಕ ಪ್ರತಿನಿಧಿಯಾಗಿ ಬ್ಯಾಂಕಿನ ಹಿರಿಯ ಅಧಿಕಾರಿ/ಸಿಬ್ಬಂದಿ ಹಾಜರಿರುವಂತೆ ವ್ಯವಸ್ಥೆ ಮಾಡಬೇಕು. ಇವರ ಹಾಜರಾತಿ ವಸೂಲಿ ಕಾರ್ಯಕ್ಕೆ ಪೂರಕವಾಗಿದ್ದು ಸದಾ ಸಕಾರಾತ್ಮಕ ನಿಲುವು ಹೊಂದಿರಬೇಕೇ ಹೊರತು ಎಂದಿಗೂ ನಕಾರಾತ್ಮಕವಾಗಿರಬಾರದು.

06. ವಸೂಲಾತಿಯ ಯಶಸ್ವಿ ಕಾರ್ಯಾಚರಣೆಗೆ ಅಗತ್ಯ ಸಿಬ್ಬಂದಿ, ವಾಹನ ಸೌಕರ್ಯ ಹಾಗೂ ಇತರೆ ಸೌಲಭ್ಯಗಳನ್ನು ಮಾರಾಟಾಧಿಕಾರಿಗೆ ಒದಗಿಸಲಾಗಿದೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಬ್ಯಾಂಕಿನ ಮಾರಾಟಾಧಿಕಾರಿಗೆ 'ಮಾರಾಟ ಅಧಿಕಾರ' ನೀಡಿದ ಆದೇಶದಲ್ಲಿ ವಿಧಿಸಿದ ಷರತ್ತಿನ ಪ್ರಕಾರ ಸಹಕಾರಿಗೆ ಸಂಬಂಧಿಸಿದ ಇತರೆ ಕೆಲಸಗಳನ್ನು ಮಾರಾಟಾಧಿಕಾರಿಗೆ ವಹಿಸಬಾರದು.

07. ಸಾಲವಸೂಲಾತಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದ್ದಲ್ಲಿ ಮತ್ತು ತಡೆಯಾಜ್ಞೆ/ನಿರ್ಬಂಧಾಜ್ಞೆಗಳಿದ್ದಲ್ಲಿ ಸಂಪೂರ್ಣ ವಿವರಗಳೊಂದಿಗೆ ವಿಷಯವನ್ನು ತಕ್ಷಣ ಮಾರಾಟಾಧಿಕಾರಿಯ ಮತ್ತು ವಸೂಲಾಧಿಕಾರಿಯ ಗಮನಕ್ಕೆ ತರಬೇಕು. ಇದಲ್ಲದೇ ಸದರಿ ಪ್ರಕರಣಗಳಲ್ಲಿ ಸಂಪೂರ್ಣ ವಿವರಗಳನ್ನು ವಕೀಲರಿಗೆ ಒದಗಿಸಿ ಪ್ರಕರಣವು ಶೀಘ್ರ ಇತ್ಯರ್ಥಗೊಳ್ಳುವಂತೆ ಸೂಕ್ತ ಕ್ರಮವಿಡಬೇಕು.

08. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 17(2) (ಇ) ಮೇರೆಗೆ ಅಗತ್ಯ ದಾಖಲಾತಿಗಳನ್ನು ಸಕಾಲದಲ್ಲಿ ಮಾರಾಟಾಧಿಕಾರಿಗೆ ತಪ್ಪದೇ ಒದಗಿಸಬೇಕು.

ಮೇಲೆ ವಿವರಿಸಿದ ಪ್ರಕಾರ ಸಕಾಲದಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ವಿಫಲರಾದಲ್ಲಿ ಬ್ಯಾಂಕಿನಲ್ಲಿರುವ ಅನುತ್ಪಾದಿತ ಆಸ್ತಿ ಪ್ರಮಾಣ ಮುಂದುವರೆಯುವುದು ಅಥವಾ ಪ್ರಮಾಣ ಹೆಚ್ಚಾಗುವುದು ನಿಶ್ಚಿತ. ಅದಕ್ಕೆ ಮುಖ್ಯಕಾರ್ಯನಿರ್ವಾಹಕ ಹೊಣೆಗಾರರೆಂದು ಪರಿಗಣಿಸಬೇಕಾಗುತ್ತದೆ.

RBI NEWS-OCTOBER-2016

K. Vittal Shetty, kohimavittal@hotmail.com. Mobile : 9845699904

The next meeting of the MPC is scheduled on December 6 and 7, 2016 and its resolution will be announced on December 7, 2016.

Policy Rates with effect from 04 October 2016.	%
POLICY REPO RATE	6.25%
REVERSE REPO RATE	5.75%
MARGINAL STANDING FACILITY RATE	6.75%
BANK RATE	6.75%
Reserve Ratios	%
Cash Reserve Ratio	4.00%
Statutory Reserve Ratio	20.75%

Nov 26, 2016 : RBI Announces Measures to Manage Liquidity Conditions

With the withdrawal of the legal tender status of ₹ 500 and ₹ 1,000 denomination bank notes (hereafter referred to as Specified Bank Notes - SBNs) beginning November 9, 2016, there has been a surge in deposits relative to the expansion in bank credit, leading to large excess liquidity in the system. The CRR remains unchanged at 4 per cent of outstanding net demand and time liabilities (NDTL);On the increase in NDTL between September 16, 2016 and November 11, 2016, scheduled banks shall maintain an incremental CRR of 100 per cent, effective the fortnight beginning November 26, 2016. This is intended to absorb a part of the surplus liquidity arising from the return of SBNs to the banking system, while leaving adequate liquidity with banks to meet the credit needs of the productive sectors of the economy. As the incremental CRR is intended to be a temporary measure within the Reserve Bank's liquidity management framework to drain excess liquidity in the system, it shall be reviewed on December 9, 2016 or even earlier.

The Reserve Bank has separately revived the Guarantee Scheme to enable deposit of SBN balances at the Reserve Bank or at currency chests and get immediate value. This measure should also facilitate banks' compliance with the incremental CRR. Operational details are set out in a circular issued separately.

I.IMPORTANT NEWS

Nov 08, 2016 : Issue of ₹ 500 bank notes inset letter 'E' in Mahatma Gandhi (New) Series

The Reserve Bank of India will shortly issue ₹ 500 denomination banknotes in Mahatma Gandhi (New) Series with inset letter 'E' in both the number panels, bearing the signature of Dr. Urjit R. Patel Governor, Reserve Bank of India, the year of printing '2016' and Swachh Bharat Logo printed on the reverse of the Banknote.



The new ₹ 500 banknotes are different from the earlier specified bank note (SBN) series in colour, size, theme, location of security features and design elements; the principal features are –

- The size is 66mm x150mm
- The colour is stone grey
- Red Fort-an image of Indian heritage site with Indian flag on the reverse

The banknote also has features (intaglio printing of Mahatma Gandhi portrait, Ashoka Pillar emblem, bleed lines, circle with ₹ 500 in the right, and the identification mark) which enable the visually impaired person to identify the denomination.

Nov 08, 2016:- Issue of ₹ 2000 banknotes with inset letter 'R'

The Reserve Bank of India will shortly issue ₹ 2000 denomination banknotes in the Mahatma Gandhi (New) Series, with the inset letter 'R', bearing signature of Dr. Urjit R. Patel, Governor, Reserve Bank of India, and the year of printing '2016' printed on the reverse of the banknote.

The design of these notes to be issued now is similar in all respects to the ₹ 2000 banknotes in Mahatma Gandhi (New) Series which was notified through Press Release No. 1144 dated November 08, 2016.

November 15, 2016 : Withdrawal of Legal Tender Character of Specified Bank Notes: RBI asks Cooperative Banks to ensure Strict Compliance to its Instructions

There were reports that some cooperative banks were not strictly adhering to the instructions issued in connection with the withdrawal of legal tender status of the existing 500 and 1000 bank notes (specified bank notes). The Reserve Bank of India today informed that it has advised the Urban Cooperative Banks through its Regional Offices and the State Cooperative Banks through National Bank for Agricultural and Rural Development (NABARD) of the need to ensure strict compliance with the instructions issued with regard to exchange of specified bank notes as also deposit of such notes into the accounts of their customers.

November 21, 2016 : Withdrawal of Legal Tender Character of existing ₹ 500/- and ₹ 1000/- Specified Bank Notes (SBNs) – Cash withdrawal for purpose of celebration of wedding

CLEAT INDIA TECHNOLOGY AND SERVICES

Post Box No 6406, Yelahanka Bengaluru 560 064, India

Cleat India has devised a tailor - made technology to support Credit Institutions (Co-operative banking sectors) in overcoming logistical issues by introducing portal (Wide-reach, Networking and Intra-Banking Services). This technological tracking system brings both 'Credit Discipline' and 'Repayment Discipline'. It helps Institutions to strengthen, sustain and secure your business in the long run.

Key Features and Benefits :

- Cleat India web portal works like 'flashcard': where in customers previous loan repayment status record can be obtained.
- Institutions can better access credit risk and avoid lending to borrowers, who are already over extended financially.
- This tool helps 100% recovery tracking system.
- It helps Member Institutions receive Class-1 customers and helps them to be cautious about "hungry customers", defaulters and wilful defaulters.
- It reduces the administrative pressure and valuable time of institutions, thereby creating faster and easy decision making.
- Institutions can send pre-defined and Ad-hoc messages/e-mail to their customers.
- This tool has exclusive inbuilt sms package to send their Customers.
- Business promotional tool will also help institutes to stretch their wings for better business expansions.
- And lots of other key features and benefits supporting your day-to-day activities.

We will be happier to clarify any information you have in this regard. Please .contact us for more information on enquiry@cleatindia.com and contact us +91 82775 24600 +91 82775 32600

"SIMPLIFYING YOUR TOMORROW, TODAY"

With a view to enable members of the public to perform and celebrate weddings of their wards it has been decided to allow higher limits of cash withdrawals from their bank deposit accounts to meet wedding related expenses. Yet, banks should encourage families to incur wedding expenses through non-cash means viz. cheques /drafts, credit/debit cards, prepaid cards, mobile transfers, internet banking channels, NEFT/RTGS, etc. Therefore, members of the public should be advised, while granting cash withdrawals, to use cash to meet expenses which have to be met only through cash mode. Cash withdrawals shall be subject to the following conditions:

i. A maximum of ₹ 250000/- is allowed to be withdrawn from the bank deposit accounts till December 30, 2016 out of the balances at credit in the account as at close of business on November 08, 2016.

ii. Withdrawals are permitted only from accounts which are fully KYC compliant.

iii. The amounts can be withdrawn only if the date of marriage is on or before December 30, 2016.

iv. Withdrawals can be made by either of the parents or the person getting married. (Only one of them will be permitted to withdraw).

v. Since the amount proposed to be withdrawn is meant to be used for cash disbursements, it has to be established that the persons for whom the payment is proposed to be made do not have a bank account.

vi. The application for withdrawal shall be accompanied by following documents:

a. An application as per Annex

b. Evidence of the wedding, including the invitation card, copies of receipts for advance payments already made, such as Marriage hall booking, advance payments to caterers, etc.

c. A detailed list of persons to whom the cash withdrawn is proposed to be paid, together with a declaration from such persons that they do not have a bank account. The list should indicate the purpose for which the proposed payments are being made.

November 28, 2016 : Withdrawal of cash from bank deposit accounts - Relaxation

It has been reported that certain depositors are hesitating to deposit their monies into bank accounts in view of the current limits on cash withdrawals from accounts.

2. As it is impeding active circulation of currency notes, it has been decided, on careful consideration, to allow withdrawals

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Date 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 28

of deposits made in current legal tender notes on or after November 29, 2016 beyond the current limits; preferably, available higher denominations bank notes of ₹ 2000 and ₹ 500 are to be issued for such withdrawals.

Nov 28, 2016 : Withdrawal of Legal Tender status of banknotes of ₹ 500 and ₹ 1000: Activity at Banks during November 10-27, 2016

Consequent to the announcement of withdrawal of legal tender status of banknotes of ₹ 500 and ₹ 1000 denominations from the midnight of November 8, 2016, the Reserve Bank of India made arrangements for exchange and/or deposit of such notes at the counters of the Reserve Bank and commercial banks, Regional Rural banks and Urban Cooperative Banks.

Banks have since reported that such exchange/deposits effected from November 10, 2016 upto November 27, 2016 amounted to ₹ 8,44,982 crore (exchange amounted to ₹ 33,948 crore and deposits amounted to ₹ 8,11,033 crore).

They have also reported that the public have withdrawn, during this period, ₹ 2,16,617 crore from their accounts either over the counter or through ATMs.

Emergency needs of cash (hospitalisation, travel, life saving medicines) then what I should do?

Till the December 15, 2016, specified banknotes of only 500 denomination can be used as under :

(a) for making payments in Government hospitals for medical treatment and pharmacies in Government hospitals for buying medicines with doctor's prescription;
(b) at railway ticketing counters, ticket counters of Government or Public Sector Undertakings buses and airline ticketing counters at airports for purchase of tickets;
(c) for purchases at consumer cooperative stores operated under authorisation of Central or State Governments and the customers shall provide their identity proof; However, the purchase from Consumer Cooperative Stores will be limited to ₹ 5000 at a time;
(d) for purchase at milk booths operating under authorisation of the Central or State Governments;
(e) for purchase of petrol, diesel and gas at the stations operating under the authorisation of Public Sector Oil and Gas Marketing Companies;
(f) for payments at crematoria and burial grounds;
(g) for making payments in all pharmacies on production of doctor's prescription and proof of identity;
(h) for payments on purchases LPG gas cylinders;
(i) for making payments to catering services on board, during travel by rail;
(j) for making payments for purchasing tickets for travel by suburban and metro rail services;
(k) for making payments for purchase of entry tickets for any monument maintained by the Archaeological Survey of India.
(l) for making payments towards any fees, charges, taxes or penalties, payable to the Central or State Governments including Municipal and local bodies;
(m) for making payments towards utility charges for water and electricity only. -which shall be restricted to individuals or households for payment of only arrears or current charges. No advance payments shall be allowed
(n) for payments towards court fees
(o) for making payments towards purchase of seeds from the centres, units or outlets belonging to the Central or State Governments, Public Sector Undertakings, National or State Seeds Corporations, Central or State Agricultural Universities and the Indian Council of Agricultural Research, on production of proof of identity: Provided that for the purposes of this clause, specified bank notes shall mean bank notes of the denominational value of five hundred rupees
(p) Payment of School fees up to ₹ 2000 per student in Central Government, State Government, Municipality and local body schools;
(q) Payment of fees in Central or State Government colleges;
(r) Payments towards pre- paid mobile top-up to a limit of ₹ 500 per top-up More information on this scheme?

Further information is available on our website (www.rbi.org.in) and the website of the Government of India (www.finmin.nic.in) Directions, Withdrwals, Penalties & Cancelleation of Licences of Urban Co-operative Banks.

Nov 17, 2016 : RBI cancels Licence of Sai Nagari Sahakari Bank Limited, Hadgaon consequent upon its merger with Shankar Nagari Sahakari Bank Limited, Nanded with effect from August 26, 2016.

Nov 20, 2016 : RBI extends Directions issued to the Lokseva Sahakari Bank Ltd., Pune, Maharashtra has been extended for a further period of six months from November 20, 2016 to May 19, 2017.

Nov 30, 2016 : RBI modifies Directions issued to Indian Mercantile Co-operative Bank Ltd., Lucknow.

Source : www.rbi.org.in

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು - 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ - 585102. ದೂ: 08472-270222.
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ : 080-23449933/34.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010